ಸಂಪುಟ 15
ಸಂಚಿಕೆ 39

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರೂ. 2.00
3 ಅಕ್ಟೋಬರ್ 1993

ಐ.ಎಂ.ಎಫ್.-ವಿಶ್ವಬ್ಯಾಂಕ್ ಪ್ರೇರಿತ "ಸುಧಾರಣೆ"ಗಳಿಗೆ ಪೋಲೆಂಡ್ ಜನತೆಯ ಧಿಕ್ಕಾರ

ಎಡಪಂಥೀಯ ಮೈತ್ರಿಕೂಟಕ್ಕೆ ವಿಜಯ

ಕಳೆದವಾರ ಪೋಲೆಂಡಿನಲ್ಲಿ ನಡೆದ ಅಲ್ಲಿನ ಸೈಮ್ ಅಂದರೆ ಸಂಸತ್ತಿಗೆ ನಡೆದ ಚುನಾವಣೆ ಆ ದೇಶದಲ್ಲಿ 1989 ರಲ್ಲಿ ಸಮಾಜವಾದ ಪತನಗೊಂಡು ಐ.ಎಂ.ಎಫ್.- ವಿಶ್ವಬ್ಯಾಂಕ್ ಪ್ರೇರಣೆಯಿಂದ ನಡೆದ "ಮಾರುಕಟ್ಟೆ ಸುಧಾರಣೆ"ಯ ಬಗ್ಗೆ ಒಂದು ಜನಮತ ಸಂಗ್ರಹವೇ ಆಗಿಬಿಟ್ಟಿದೆ. ಬಂಡವಾಳಶಾಹಿಯದ್ದು ದುಡಿಯುವ ಜನಗಳ ಮಟ್ಟಿಗೆ, ಬಹುಪಾಲು ಜನಸಾಮಾನ್ಯರ ಮಟ್ಟಿಗೆ ಸದಾ ಕ್ರೂರ ಮುಖವೇ, 'ಮಾನವೀಯ ಬಂಡವಾಳಶಾಹಿ' ಸಾಧ್ಯ ಎಂಬವರ ಕನಸು ಕೇವಲ ಕನಸೇ ಎಂದು ಪೋಲೆಂಡ್ ಜನತೆ ಮತ್ತೊಮ್ಮೆ ಸ್ವಂತ ಅನುಭವದಿಂದ ಸಾರಿ ಹೇಳಿದ್ದಾರೆ; ವಿಶ್ವದೆಲ್ಲೆಡೆ ಕಮ್ಯುನಿಸಂ ಸತ್ತಿದೆ ಎಂದು ಕೇಕೆ ಹಾಕುತ್ತಿದ್ದ ಆಳುವ ವರ್ಗಗಳಿಗೆ, ಅವರ ಬಾಲಬುಡಕರಿಗೆ ಮತ್ತೊಂದು ಶಾಕ್ ನೀಡಿದ್ದಾರೆ.

ನಾಲ್ಕು ವರ್ಷಗಳ ಹಿಂದೆ ಅಧಿಕಾರದಿಂದ ಹೊರದಬ್ಬಲ್ಪಟ್ಟ ಮಾಜಿ ಕಮ್ಯುನಿಸ್ಟರು ಪ್ರಜಾಸತ್ತಾತ್ಮಕ ಎಡ ಮೈತ್ರಿಕೂಟ (ಎಸ್.ಎಲ್.ಡಿ) ದ ಬಾವುಟದಡಿ 20.6 ಶೇ. ಮತಗಳನ್ನು ಗಳಿಸಿ ಮೂರನೇ ಒಂದಕ್ಕಿಂತಲೂ ಹೆಚ್ಚು ಸ್ಥಾನ ಪಡೆದು ಎಲ್ಲಕ್ಕೂ ದೊಡ್ಡ ಗುಂಪಾಗಿ ಮೂಡಿ ಬಂದಿದ್ದಾರೆ. ಹಿಂದೆ ಸಮಾಜವಾದದಡಿ ಅವರ ಜೊತೆಗಾರರಾಗಿದ್ದ ಪೋಲಿಷ್ ರೈತ ಪಕ್ಷ (ಪಿ.ಎಸ್.ಎಲ್.) 15.5 ಶೇ. ಮತಗಳಿಸಿ ಎರಡನೇ ಸ್ಥಾನಗಳಿಸಿದೆ. ಇದುವರೆಗೆ ಆಳುತ್ತಿದ್ದ, ಸಮಾಜವಾದವನ್ನು ಕಿತ್ತು ಹಾಕಿದ ಸಾಲಿಡಾರಿಟಿ ಆಂದೋಲನದ ಉತ್ತರಾಧಿಕಾರಿ ಡೆಮೊಕ್ರಟಿಕ್ ಯೂನಿಯನ್(ಯುಡಿ) ಕೇವಲ 10.6 ಶೇ. ಮತಗಳಿಸಿ ಮೂರನೇ ಸ್ಥಾನಕ್ಕಿಳಿದಿದೆ. ಹೆಚ್ಚೆಚ್ಚು ಸರ್ವಾಧಿಕಾರಿ ಪ್ರವೃತ್ತಿ ತೋರುತ್ತಿರುವ ಪೋಲೆಂಡ್ ಅಧ್ಯಕ್ಷ ಲೆಹ್ ವಲೇಸಾ ಈಗ ಸಂವಿಧಾನ ಹಾಕಿಕೊಟ್ಟ ಪ್ರಜಾಸತ್ತಾತ್ಮಕ ನಿಯಮ ಪಾಲಿಸುತ್ತಾರಾದರೆ ಎಸ್.ಎಲ್.ಡಿ ಪಕ್ಷಕ್ಕೆ ಸರಕಾರ ರಚಿಸಲು ಆಹ್ವಾನ ನೀಡಲೇ ಬೇಕಾಗಿದೆ.

ಪೂರ್ವ ಯುರೋಪಿನಲ್ಲಿಯೇ ಅತಂತ ತೀವ್ರ, ಕ್ರೂರ ಮುಕ್ತಮಾರುಕಟ್ಟೆ 'ಸುಧಾರಣೆ' ಕಂಡ ಪೋಲೆಂಡಿಗೆ 1991 ರ ಚುನಾವಣೆ ರಾಜಕೀಯ ಸ್ಥಿರತೆ ನೀಡಲಿಲ್ಲ. ನಾಲ್ಕು ಸರಕಾರಗಳನ್ನು ಮೂರು ಪ್ರಧಾನಮಂತ್ರಿಗಳನ್ನು ಕಂಡ ನಂತರ ವಲೇಸಾ ಹೊಸ ಚುನಾವಣೆಗಳನ್ನು ನಡೆಸಲು ನಿರ್ಧರಿಸಿದ. ಐ.ಎಂ.ಎಫ್.- ವಿಶ್ವಬ್ಯಾಂಕ್ ನಿರ್ದೇಶಿತ ಆರ್ಥಿಕ ನೀತಿಗಳಿಗೆ ಜನಗಳ ಬೆಂಬಲ ಪಡೆಯಬಹುದೆಂಬ ಎಣಿಕೆಯಿಂದ ಆತ ಆ ನಿರ್ಧಾರಕ್ಕೆ ಬಂದ. ಆದರೆ ಆತನ ಲೆಕ್ಕಾಚಾರ ತಲೆಕೆಳಗಾಯಿತು. ಈ ಚುನಾವಣೆಯ ಮೊದಲು ಆತ ಒಂದು ಡಿಕ್ರಿ ಹೊರಡಿಸಿದ್ದ. ಶೇ. 5 ಕ್ಕಿಂತ ಕಮ್ಮಿ ಮತಪಡೆದ ಪಕ್ಷಗಳು ಮತ್ತೆ ಶೇ. 8ಕ್ಕಿಂತ ಕಮ್ಮಿ ಮತ ಪಡೆದ ಮೈತ್ರಿಕೂಟಗಳು ಪಾರ್ಲಿಮೆಂಟನ್ನು ಪ್ರವೇಶಿಸುವಂತಿಲ್ಲ. ತಮಾಷೆಯೆಂದರೆ ಇದರಿಂದಾಗಿ ಸಾಲಿಡಾರಿಟಿಯಲ್ಲಿ ತನ್ನ ಜತೆಗಿದ್ದವರಿಂದ ದೂರವಾದ ವಲೇಸಾ ರಚಿಸಿಕೊಂಡ ಪಕ್ಷ ಬಿ.ಬಿ.ಡಬ್ಲ್ಯುಆರ್. (ಸುಧಾರಣೆ ಬೆಂಬಲಿಸುವ ರಾಷ್ಟ್ರೀಯ ಆಂದೋಲನ)ಗೆ ಸಂಸತ್ತಿನಲ್ಲಿ ಸ್ಥಾನವೇ ಇಲ್ಲದಂತಾಗಬಹುದು. ಕಮ್ಯುನಿಸ್ಟ್ -ವಿರೋಧಿ ಪೋಪ್ ದ್ವಿತೀಯ ಜಾನ್ ಪೌಲ್ ಬೆಂಬಲಿತ ಫಾದರ್‌ಲೇಂಡ್ ಕೋಆಲಿಶನ್ ಕೂಡಾ ಶೇ. 8 ಮತಪಡೆಯಲಾರದೆ ಸಂಸತ್ತಿನಲ್ಲಿ ಪ್ರಾತಿನಿಧ್ಯ ಹೊಂದದೇ ಹೋಗಬಹುದು. ಈ ಕೂಟದ ಒತ್ತಾಯದಿಂದ ಹೇರಲ್ಪಟ್ಟ ಕಟ್ಟುನಿಟ್ಟಾದ ಗರ್ಭಪಾತ-ವಿರೋಧಿ ಕಾನೂನುಗಳಿಗೆ ಎಲ್ಲಾ ಮಹಿಳಾ ವಿಭಾಗಗಳಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು.

ಪೋಲೆಂಡ್‌ನ ಜನರ ಈ ತೀರ್ಪು ಏಕೆ?

ಸಮಾಜವಾದ ತಮಗೆ ನೀಡಿದ ಸಾಮಾಜಿಕ ಸೌಲಭ್ಯಗಳನ್ನು ಕಳೆದುಕೊಂಡು ಬಂಡವಾಳಶಾಹಿ, ಮುಕ್ತ ಮಾರುಕಟ್ಟೆಯ 'ರುಚಿ'ಯನ್ನು ಮೊದಲು ಅನುಭವಿಸಿದವರು ಅಲ್ಲಿನ ಗಣಿಕೆಲಸಗಾರರು, ಉಕ್ಕು ಕಾರ್ಮಿಕರು ಹಾಗೂ ಬಟ್ಟೆ ಗಿರಣಿ ಕಾರ್ಮಿಕರು. ಲೆಕ್ ವಲೇಸಾರ ಕಮ್ಯುನಿಸ್ಟ್-ವಿರೋಧಿ ಸಾಲಿಡಾರಿಟಿಯ ಮುಖ್ಯ ಭಾಗವಾಗಿದ್ದವರು ಇವರು. ಮುಕ್ತ ಮಾರುಕಟ್ಟೆಯ ಪ್ರತಿಪಾದಕರು ಇವೆಲ್ಲ ತಾತ್ಕಾಲಿಕ ಸಮಸ್ಯೆ ಎಂದು ಸಮಜಾಯಿಷಿ ನೀಡಿದರೂ ವಾಸ್ತವತೆ ಮಾತ್ರ ಬೇರೆಯೇ ಆಗಿತ್ತು. ಸಮಾಜವಾದದಡಿ ಸುಮಾರಾಗಿ ಇದ್ದೇ ಇಲ್ಲದ ನಿರುದ್ಯೋಗ ಈಗ 16 ಶೇ. ಕ್ಕೇರಿತು. ಹಣದುಬ್ಬರ ದರ 45 ಶೇ.ಕ್ಕೇರಿತು. ಜನನ ದರ ಇಳಿಯಿತು., ಮರಣ ದರ ಏರಿತು. ಬಂಡವಾಳಶಾಹಿಗೂ ಮಾನವೀಯ ಮುಖವಿದೆಯೆಂಬ ಪ್ರಚಾರವನ್ನು ನಂಬಿ ಪೂರ್ವ ಯುರೋಪಿನಲ್ಲಿ ಸಮಾಜವಾದೀ ವ್ಯವಸ್ಥೆಯ ಪತನಕ್ಕೆ ನಾಂದಿ ಹಾಕಿದ ಪೋಲೆಂಡ್‌ನಲ್ಲೇ ಅದು ಸದಾ ಕ್ರೂರವಾದ ವ್ಯವಸ್ಥೆಯೆಂಬುದು ಮೊದಲು ಅರಿವಾದದ್ದು ಕೇವಲ ಆಕಸ್ಮಿಕವಲ್ಲ. ಪೋಲಂಡಿನ 'ಶಾಕ್ ತಟ್ಟಿಸಿದ' ಆರ್ಥಿಕ ನೀತಿಗಳು "ಅತ್ಯಂತ ಯಶಸ್ವಿ" ಎಂದು ಪಾಶ್ಚಿಮಾತ್ಯ ಆರ್ಥಿಕ ಪಂಡಿತರು ಜಾಗಟೆ ಹೊಡೆಯುತ್ತಿದ್ದಾಗಲೇ ಇದು ನಡೆದಿರುವುದು ಕೂಡಾ ಆಕಸ್ಮಿಕವಲ್ಲ. ಸೋವಿಯೆತ್ ಒಕ್ಕೂಟದಿಂದ ಮೊತ್ತ ಮೊದಲು ದೂರ ಸರಿದ ಲಿಥುವಾನಿಯಾ ಕಳೆದ ವರ್ಷವೇ ಬಂಡವಾಳಶಾಹಿ ಜನಗಳ ಸಮಸ್ಯೆಗೆ ಖಂಡಿತ ದಿವ್ಯೌಷಧಿ ಅಲ್ಲ ಎಂದು ಕಂಡುಕೊಂಡಿತ್ತು.

ಜಯಶಾಲಿಯಾಗಿರುವ ಪ್ರಜಾಪ್ರಭುತ್ವವಾದಿ ಎಡ ಮೈತ್ರಿಕೂಟ ಅಥವಾ ಎಸ್.ಎಲ್.ಡಿ. ಬಂಡವಾಳಶಾಹಿಯ ಕೊಳ್ಳೆಯನ್ನು ನಿಲ್ಲಿಸಲು ಏನು ಮಾಡುತ್ತದೆ, ಪೋಲಂಡಿನ ಬಂಡವಾಳಶಾಹಿಗೆ ಮಾನವೀಯ ಮುಖ ತೊಡಿಸುವ ಪ್ರಯತ್ನವನ್ನೇ ಮುಂದುವರಿಸುತ್ತಾರೋ ಎಂದು ಇನ್ನೂ ಸ್ಪಷ್ಟವಿಲ್ಲ. ಆದರೆ ಪೋಲೆಂಡ್‌ನ ಜನ ಐ.ಎಂ.ಎಫ್.-ವಿಶ್ವಬ್ಯಾಂಕ್ ಅಧೀನದಲ್ಲಿ ಯಾವುದೇ ಲಂಗು ಲಗಾಮಿಲ್ಲದ ಮುಕ್ತ ಮಾರುಕಟ್ಟೆಯ ಈ ಪಥ್ಯ ಸಾಕಪ್ಪಾ ಸಾಕು ಎಂದು ಸ್ಪಷ್ಟವಾಗಿ ಸಾರಿದ್ದಾರೆ.

(ಐ.ಎನ್.ಎಸ್)

ವೀರಪ್ಪ ಮೊಯ್ಲಿ ಶಿಕ್ಷಣ ಸಂಸ್ಥೆ ಮಫಿಯಾಕ್ಕೆ ಶರಣಾದರು

ಇತ್ತೀಚಿನ ದಶಕಗಳಲ್ಲಿ ಶಿಕ್ಷಣದ ವ್ಯಾಪಾರೀಕರಣ ಕರ್ನಾಟಕದಲ್ಲಿ ಬೆಳೆದು ಬಂದು ಭಾರತದಲ್ಲಿ ಕರ್ನಾಟಕವು ಶಿಕ್ಷಣದ ವ್ಯಾಪಾರೀಕರಣದಲ್ಲಿ ಅಗ್ರ ಸ್ಥಾನವನ್ನು ಪಡೆದು ಕುಖ್ಯಾತವಾಗಿದೆ. ರಾಜ್ಯವನ್ನು ಸತತವಾಗಿ ಆಳಿದ, ಬಂಡವಾಳಗಾರರ-ಜಮೀನುದಾರರ ಹಿತರಕ್ಷಣೆ ಮಾಡುವ ರಾಜಕೀಯ ಪಕ್ಷಗಳಲ್ಲಿ ಪ್ರಮುಖ ಪಕ್ಷವಾದ ಕಾಂಗ್ರೆಸ್ ಪಕ್ಷವು ಖಾಸಗಿ ಸಂಸ್ಥೆಗಳು, ಮಠಾಧಿಪತಿಗಳು ವೃತ್ತಿಪರ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ನಡೆಸುವುದಕ್ಕೆ ಪ್ರೋತ್ಸಾಹ ಕೊಡುತ್ತಾ ಬಂದಿದ್ದು, ದಿವಂಗತ ದೇವರಾಜ ಅರಸುರವರ ಆಡಳಿತ ಕಾಲದಲ್ಲಿ ಜಾತಿಗೆ ಒಂದರಂತೆ ಮೆಡಿಕಲ್ ಕಾಲೇಜನ್ನು ಇಂಜಿನಿಯರಿಂಗ್ ಕಾಲೇಜನ್ನು ಕೊಟ್ಟು ಶಿಕ್ಷಣ ಕ್ಷೇತ್ರದಲ್ಲಿ ಪಟ್ಟಭದ್ರ ಹಿತಗಳನ್ನು ಬೆಳೆಸಿತು. ಈ ಕ್ಷೇತ್ರದಲ್ಲಿ ಮಠಾಧೀಶರು ಮಾತ್ರವೇ ಅಲ್ಲದೇ ಮಣಿಪಾಲದ ಪೈಗಳು, ದಾವಣಗೆರೆಯ ಶ್ಯಾಮನೂರು ಶಿವಶಂಕರಪ್ಪ, ಗುಲ್ಬರ್ಗದ ಲೋಕಸಭಾ ಸದಸ್ಯ ಜವಳಿ, ಬೆಂಗಳೂರಿನ ಕ್ಷೀರ್ ಸಹೋದರರೇ ಮೊದಲಾದ ಕಾಂಗ್ರೆಸ್ ಪುಡಾರಿಗಳೂ ಇದ್ದಾರೆ.

ವೃತ್ತಿಪರ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಸರ್ಕಾರವೇ ನಿರ್ಧರಿಸುವ ತೀರ್ಪೊಂದನ್ನು ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯವು ಈ ವರ್ಷದ ನಡುವೆ ಇತ್ತಿತ್ತು. ವೀರಪ್ಪಮೊಯ್ಲಿ ಕಾಂಗ್ರೆಸ್ ಸರ್ಕಾರವು ಆ ತೀರ್ಪನ್ನು ಮನ್ನಿಸುವ ಆಶ್ವಾಸನೆಯನ್ನು ಕೊಟ್ಟಿತು. ತೀರ್ಪನ್ನು ಅನುಷ್ಠಾನಕ್ಕೆ ತರುವುದಕ್ಕೆ ಅಡ್ಡಿ ಮಾಡಿದ್ದೇ ಆದರೆ ಖಾಸಗಿ ಶಿಕ್ಷಣ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿಸುವುದಾಗಿ ಉನ್ನತ ಶಿಕ್ಷಣ ಸಚಿವ ಎಸ್. ಎಂ. ಯಾಹ್ಯ ಘೋಷಿಸಿದರು.

ಶಿಕ್ಷಣ ಸಂಸ್ಥೆಯ ಮಫಿಯಾ ಕಾರ್ಯಪ್ರವೃತ್ತವಾಯಿತು. ಮಠಾಧಿಪತಿಗಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳನ್ನೂ ಒಟ್ಟಿಗೆ ಸೇರಿಸಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅನುಷ್ಠಾನಕ್ಕೆ ತರುವ ಮೊಯಿಲಿ ಸರ್ಕಾರದ ನಿರ್ಧಾರಕ್ಕೆ ವಿರೋಧವನ್ನು ಸಂಘಟಿಸಲಾಯಿತು.

ಮಠಾಧಿಪತಿಗಳ ಉಗ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಖಾಸಗಿ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ನಿರಾಕರಿಸುವ ಶಿಕ್ಷಣ ಸಂಸ್ಥೆಗಳನ್ನು ಶಿಕ್ಷೆಗೆ ಗುರಿಪಡಿಸಲು ಅವಕಾಶ ಕಲ್ಪಿಸುವ ಸುಗ್ರೀವಾಜ್ಞೆಯನ್ನು ಬೇಷರತ್ತಾಗಿ ರಾಜ್ಯಪಾಲರಿಂದ ಮೊಯಿಲಿ ಸರ್ಕಾರವು ಸೆಪ್ಟೆಂಬರ್ 21 ರಂದು ಹಿಂತೆಗೆದುಕೊಂಡ ಸುದ್ದಿ ಪ್ರಕಟವಾಗಿದೆ. ಈ ಸಂದರ್ಭದಲ್ಲಿ ಮೊಯ್ಲಿಯವರು ಮಠಾಧಿಪತಿಗಳ ಬಗ್ಗೆ ತನಗೆ ತುಂಬಾ ಗೌರವವಿದೆ, ಅವರಿಗೆ ಶಿರಬಾಗುವುದಾಗಿ ಹೇಳಿದ್ದಾರೆ.

ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಕರ್ನಾಟಕ ಸರ್ಕಾರವು ಅನುಷ್ಠಾನಕ್ಕೆ ತರಬೇಕೆಂದು ಚಳುವಳಿ ನಡೆಸಿವೆ.

ರಾಜ್ಯದ ಕಾಂಗ್ರೆಸ್(ಐ) ಪಕ್ಷದಲ್ಲಿ ಸರ್ಕಾರದ ಅಧಿಕಾರಕ್ಕಾಗಿ ನಡೆಯುತ್ತಿರುವ ಗುಂಪು ಕಾಳಗದಲ್ಲಿ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ವೀರಪ್ಪಮೊಯಿಲಿಯವರು ಶಿಕ್ಷಣ ಸಂಸ್ಥೆ ಮಫಿಯಾಕ್ಕೆ ಶರಣಾಗಿ ವಿದ್ಯಾರ್ಥಿಗಳ ಹಿತವನ್ನು ಬಲಿಕೊಟ್ಟು ಒಂದು ಪೆಟ್ಟು ಹಾಕಿದ್ದಾರೆ. ಆದರೆ ಮಠಾಧಿಪತಿಗಳಿಗೆ, ಶಿಕ್ಷಣ ಮಫಿಯಾಕ್ಕೆ ಉನ್ನತ ನ್ಯಾಯಾಲಯವು ತಲೆಬಾಗುವುದೇ, ಅವುಗಳೊದಿಗೆ ರಾಜಿ ಮಾಡಿಕೊಳ್ಳುವುದೇ ಎಂಬುದನ್ನು ಈ ವಿಚಾರದಲ್ಲಿ ಕಾನೂನಿನ ಆಡಳಿತೆಯ ಭವಿಷ್ಯವನ್ನು ಕಾದು ನೋಡಬೇಕಾಗಿದೆ.

ನಾಲ್ಕು ರಾಜ್ಯಗಳಲ್ಲಿ ವಿಧಾನ ಸಭಾ ಚುನಾವಣೆಗಳು

ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವ ಅಪಾಯವನ್ನು ತಪ್ಪಿಸಬೇಕು

--ಸುರ್ಜಿತ್

ಹಿಂದೆ ಬಿಜೆಪಿ ಆಳ್ವಿಕೆಯಲ್ಲಿದ್ದ ನಾಲ್ಕು ರಾಜ್ಯಗಳ ವಿಧಾನಸಭೆಗಳಿಗೆ ನಡೆಯಲಿರುವ ಚುನಾವಣೆಗಳು ಗಂಭೀರ ಮಹತ್ವ ಪಡೆದಿವೆ. ದೇಶದ ರಾಜಕೀಯ ಸನ್ನಿವೇಶದ ಮೇಲೆ ನಿರ್ಣಾಯಕ ಪರಿಣಾಮ ಬೀರಲಿರುವ ಚುನಾವಣೆಗಳು ಇವು. ಬಿಜೆಪಿ ಕೂಟದ ಮಂದಿ ಬಾಬ್ರಿಮಸೀದಿಯನ್ನು ಧ್ವಂಸ ಮಾಡಿದುದರಿಂದ ಈ ರಾಜ್ಯಗಳ ಸರಕಾರಗಳು ವಜಾಆಗಿ ಈಗ ಈ ಚುನಾವಣೆಗಳು ನಡೆಯುತ್ತಿವೆ. ಆದ್ದರಿಂದ ಈ ಚುನಾವಣೆಯ ಕೇಂದ್ರ ಅಂಶವೆಂದರೆ ಬಿಜೆಪಿಯನ್ನು ಸೋಲಿಸುವುದು. ಅಂದರೆ ಆ ಕೂಟ ಹಾಕಿರುವ ಕೋಮುವಾದಿ ಸವಾಲನ್ನು ಸೋಲಿಸುವುದು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಹೇಳಿದ್ದಾರೆ. ದೇಶಭಾಂಧವರನ್ನು ಒಬ್ಬರ ಮೇಲೆ ಇನ್ನೊಬ್ಬರನ್ನು ಎತ್ತಿಕಟ್ಟಿ ಪರಸ್ಪರ ರಕ್ತಪಿಪಾಸುಗಳಾಗುವಂತೆ ಮಾಡಿ ಒಂದು ಕೋಮಿನ ಪ್ರಾಬಲ್ಯ ಬಯಸುವ ಈ ಕೋಮುವಾದಿಗಳನ್ನು, ಪ್ರತಿಗಾಮಿಗಳನ್ನು ಸೋಲಿಸಲು ದೇಶದ ಎಲ್ಲಾ ಜಾತ್ಯಾತೀತ, ದೇಶಪ್ರೇಮಿ, ಪ್ರಜಾಪ್ರಭುತ್ವವಾದಿ ಹಾಗೂ ಪ್ರಜ್ಞಾಶೀಲ ನಾಗರಿಕರು ಮಧ್ಯ ಪ್ರವೇಶಿಸಬೇಕು. ಏಕೆಂದರೆ ಈ ಕೋಮುವಾದಿ, ಫ್ಯಾಸಿಸ್ಟ್ ಮಾದರಿಯಲ್ಲಿ ವರ್ತಿಸುವ ಪಕ್ಷ ಮತ್ತೆ ಆ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದರೆ ದೇಶಕ್ಕೆ ವಿನಾಶಕಾರಿ. ಸೋದರಭಾವ ಹಾಗೂ ಐಕ್ಯತೆಯ ಶತ್ರುಗಳಾದ ಈ ಮಂದಿಯನ್ನು ಸೋಲಿಸಬೇಕು ಎಂದು ಅವರು ಹೇಳಿದ್ದಾರೆ. ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಬರೆದ ಲೇಖನದಲ್ಲಿ ಅವರು ಇದಕ್ಕೆ ಕಾರಣಗಳನ್ನು ವಿವರಿಸಿದ್ದಾರೆ. ನಮ್ಮ ಓದುಗರಿಗಾಗಿ ಆ ಲೇಖನದ ಮುಖ್ಯ ಅಂಶಗಳನ್ನು ಇಲ್ಲಿ ಕೊಡುತ್ತಿದ್ದೇವೆ.

ರಾಜಸ್ಥಾನ್, ಮಧ್ಯಪ್ರದೇಶ, ಹಿಮಾಚಲ ಪ್ರದೇಶಗಳಲ್ಲಿ 1990 ರಲ್ಲಿ ಕಾಂಗ್ರೆಸ್ (ಐ) -ವಿರೋಧಿ ಅಲೆಯ ಲಾಭ ಪಡೆದು ಜನತಾದಳದೊಂದಿಗೆ ಚುನಾವಣಾ ಹೊಂದಾಣಿಕೆಗಳ ಲಾಭ ಪಡೆದು ಬಿಜೆಪಿ ಅಧಿಕಾರಕ್ಕೆ ಬಂತು. ಕೇಂದ್ರದಲ್ಲೂ ಅಧಿಕಾರದಲ್ಲಿ ಭಾಗವಹಿಸುವ ಅದರ ಹುನ್ನಾರ ಎಡಪಕ್ಷಗಳ ಮಧ್ಯಪ್ರವೇಶದಿಂದಾಗಿ ಸಫಲವಾಗಲಿಲ್ಲ. ಅವರು ದೇಪಸ್ಥಾನದ ಪ್ರಶ್ನೆಯೆತ್ತಿ ಜನಗಳ ಧಾರ್ಮಿಕ ಭಾವನೆಗಳನ್ನು ಕೆರಳಿಸಿ, ತಮ್ಮ ನೆಲೆಯನ್ನು ವ್ಯಾಪಕಗೊಳಿಸಲು ಯತ್ನಿಸಿದರು. ಅಡ್ವಾಣಿಯವರ ರಥಯಾತ್ರೆಯ ದಾರಿಯುದ್ದಕ್ಕೂ ನಡೆದ ರಕ್ತದೋಕುಳಿಯ ಮೂಲಕ ನಡೆದ ಕೋಮು ಧ್ರುವೀಕರಣದಿಂದಾಗಿ ಉತ್ತರ ಪ್ರದೇಶದಲ್ಲೂ ಅದು ಅಧಿಕಾರಕ್ಕೆ ಬಂತು.

ಈ ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದೆಂದರೆ ವಿವಿಧ ಕೋಮುಗಳ ನಡುವೆ ಮತ್ತೆ ಹಗೆತನ ಬೆಳೆಸುವ, ಕೋಮು ಆಧಾರದಲ್ಲಿ ಜನಗಳನ್ನು ವಿಭಜಿಸುವ ದುಷ್ಟ ಕಾರ್ಯಕ್ಕೆ ಮತ್ತಷ್ಟು ಅವಕಾಶ ಸಿಕ್ಕಂತೆ. ಅಯೋಧ್ಯೆಯಲ್ಲಿ ಡಿಸೆಂಬರ್ 6 ರಂದು ನಡೆದ ಹೀನ ಕೃತ್ಯ, ನಂತರ ಭಯಾನಕ ಹಿಂಸಾಚಾರ ಅಲ್ಲಿ ಬಿಜೆಪಿ ಅಧಿಕಾರದಲ್ಲಿರದಿದ್ದರೆ ಸಾಧ್ಯವಿರಲಿಲ್ಲ.

ಕಾಂಗ್ರೆಸ್(ಐ)ನ ಜನ-ವಿರೋಧಿ ಧೋರಣೆಗಳಿಗೆ ಯಾವುದೇ ಪರ್ಯಾಯವಿಲ್ಲದ ಈ ಕೋಮುವಾದಿ ಪಕ್ಷ ಅಧಿಕಾರ ಗಿಟ್ಟಿಸುವುದಕ್ಕಾಗಿ ಧಾರ್ಮಿಕ ಭಾವನೆಗಳ ದುರುಪಯೋಗ ಪಡೆಯಲು ಹೊರಟಿದೆ. ಅಧಿಕಾರಕ್ಕಾಗಿ ಸುಳ್ಳುಗಳನ್ನು, ಅರೆ ಸತ್ಯಗಳನ್ನು ಪ್ರಚಾರ ಮಾಡುವ, ಇತಿಹಾಸವನ್ನೇ ವಿಕೃತಗೊಳಿಸುವ, ಭಾರತ ಸಂವಿಧಾನವನ್ನು ನ್ಯಾಯಾಂಗವನ್ನು ದೇಶದ ಕಾನೂನುಗಳನ್ನೇ ಯಾವುದೇ ನಾಚಿಕೆಯಿಲ್ಲದೆ ಉಲ್ಲಂಘಿಸುವ ಈ ಪಕ್ಷ ಪ್ರಜಾಪ್ರಭುತ್ವದ ಮಾತಾಡುತ್ತದೆ. ಅಲ್ಪಸಂಖ್ಯಾಕರ ವಿರುದ್ಧ ದ್ವೇಷ ಸಾರುವ ದೇಶದಲ್ಲಿ ನಡೆದಿರುವ ಕೋಮು ದಂಗೆಗಳಲ್ಲೆಲ್ಲಾ ವಿಚಾರಣಾ ಆಯೋಗಗಳಿಂದ ಆರೋಪಗಳ ದೊಡ್ಡ ಪಟ್ಟಿಯನ್ನು ಪಡೆದಿರುವ ಈ ಪಕ್ಷ ತಾನು ಅಧಿಕಾರಕ್ಕೆ ಬಂದರೆ "ದಂಗೆ ಮುಕ್ತ" ರಾಜ್ಯ ನೀಡುವುದಾಗಿ ಆಶ್ವಾಸನೆ ನೀಡುತ್ತಿದೆ! ಆರ್ಥಿಕ ರಂಗದಲ್ಲಿಯೂ ಕಾಂಗ್ರೆಸ್ (ಐ)ಗೆ ಯಾವುದೇ ಪರ್ಯಾಯವಿಲ್ಲದಿದ್ದರೂ ಇದೆ ಎಂದು ಹೇಳುತ್ತಾ ಇತರ ಪ್ರಜಾಪ್ರಭುತ್ವ ಶಕ್ತಿಗಳು ಪರ್ಯಾಯವನ್ನು ಮುಂದಿಟ್ಟಾಗ ಕಾಂಗ್ರೆಸ್ಸಿನ ಜತೆಗೂಡಿ ಅದನ್ನು ವಿರೋಧಿಸುವ ಪಕ್ಷವಿದು.

ಬಿಜೆಪಿಯ ಯಶಸ್ಸಿಗೆ ಕಾಂಗ್ರೆಸ್(ಐ)ನ ಹಾಗೂ ಅದರ ಕೇಂದ್ರ ಸರಕಾರದ ನಿಲುವು ಸಾಕಷ್ಟು ನೆರವಾಗಿದೆ ಎಂಬುದರಲ್ಲಿ ಏನೇನೂ ಸಂಶಯವಿಲ್ಲ.

ಕಳೆದ ಕೆಲವು ವರ್ಷಗಳ ಘಟನೆಗಳು ದೇಶವನ್ನು ನುಚ್ಚುಗುಜ್ಜು ಮಾಡಿದೆ. ಬ್ರಿಟಿಶ್

ಪುಟ 2 ನೋಡಿ

ಇಡೀ ತಿಂಗಳಲ್ಲಿ ಹರಡಿದ ಮತದಾನ ಏಕೆ?

-ಪೊಲಿಟ್‌ಬ್ಯೂರೋ

ನಾಲ್ಕು ರಾಜ್ಯ ಸಭೆಗಳಿಗೆ ಚುನಾವಣೆಗಳನ್ನು ಘೋಷಿಸುವ ಮೂಲಕ ಅಲ್ಲಿ ಚುನಾವಣೆಗಳನ್ನು ಮತ್ತೊಮ್ಮೆ ಮುಂದೂಡುವುದೆಂಬ ಹೆಚ್ಚುತ್ತಿದ್ದ ಭಯ ಹಾಗೂ ಊಹಾಪೋಹಗಳು ನಿಂತಂತಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸ್ವಾಗತಿಸಿದೆ.

ಆದರೆ ಈ ಚುನಾವಣಾ ದಿನಾಂಕಗಳು ಒಂದಿಡೀ ತಿಂಗಳನ್ನು ವ್ಯಾಪಿಸಿರುವುದು ಆಶ್ಚರ್ಯಕರ ಸಂಗತಿ ಎನ್ನುತ್ತ ಇದು ಮುಕ್ತ ಹಾಗೂ ನ್ಯಾಯ ಪೂರ್ಣ ಚುನಾವಣೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು ಎಂದಿದೆ.

ಕೇಂದ್ರ ಸರಕಾರ ಹಾಗೂ ಚುನಾವಣಾ ಆಯೋಗ ಮತದಾನದ ದಿನಾಂಕಗಳನ್ನು ನಿಗದಿ ಪಡಿಸುವಾಗ ಇವನ್ನು ಸಂಬಂಧಿಸಿದ ಚುನಾವಣೆಗಳನ್ನು ಎರಡು ಮೂರು ದಿನಗಳ ಅಂತರದಲ್ಲೇ ನಡೆಸಬಹುದು ಎಂದು ತಾನು ನಿರೀಕ್ಷಿಸುವುದಾಗಿ ಪಿ.ಬಿ. ಹೇಳಿದೆ.

ಅದ್ವಾನಿಯವರ ಜನಾದೇಶ ಯಾತ್ರೆ

ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸಬೇಕೆಂಬ ಮಸೂದೆಯು ಲೋಕಸಭೆಯಲ್ಲಿ ಮಂಡಿಸಲ್ಪಟ್ಟಿದ್ದರೂ ನರಸಿಂಹರಾವ್ ಸರಕಾರ ಈ ಮಸೂದೆಯನ್ನು ತಂದಿರುವ ವಿಧಾನದಿಂದಾಗಿ ಈ ಮಸೂದೆ ಸಂಸತ್ತಿನಲ್ಲಿ ಅಂಗೀಕಾರವಾಗಲಿಲ್ಲ. ಧರ್ಮವನ್ನು ಚುನಾವಣಾ ಉದ್ದೇಶಗಳಿಗೆ ಉಪಯೋಗಿಸುವ ಅಪರಾಧ ಮಾಡುವ ಅಭ್ಯರ್ಥಿಗಳನ್ನು ಅನರ್ಹಗೊಳಿಸುವ ಬಗ್ಗೆ ಸೂಕ್ತ ಕಾನೂನುಗಳನ್ನು ಮಾಡಲು ಸಂಸತ್ತಿಗೆ ಅಧಿಕಾರ ನೀಡುತ್ತದೆ. ಮತದಾನದ ಮೊದಲೇ ಅಭ್ಯರ್ಥಿಗಳನ್ನು ಅನರ್ಹಗೊಳಿಸುವ ವಿಧಿ-ವಿಧಾನ ಹಾಗೂ ಕಾರ್ಯತಃ ಬರುವ ತೊಂದರೆಗಳ ಕುರಿತು ಭಿನ್ನಾಭಿಪ್ರಾಯ ಎದ್ದಿದೆ. ಮತದಾನದ ಮೊದಲೇ ಅನರ್ಹಗೊಳಿಸುವ ಈಗಿರುವ ವಿಧಾನವನ್ನು ಆಳುವ ಪಕ್ಷ ದುರುಪಯೋಗ ಪಡಿಸುವ ಸಾಧ್ಯತೆ ಇದೆ ಎಂದೇ ಇದಕ್ಕೆ ವಿರೋಧ ಮಾಡಲಾಗಿದೆ. ಇಂಥ ವಿವಾದವನ್ನು ನ್ಯಾಯಾಂಗ ಸಂಸ್ಥೆಗೆ ಒಪ್ಪಿಸಿ ತುರ್ತು ನಿರ್ಣಯ ಸಿಗುವ ವ್ಯವಸ್ಥೆ ಮಾಡಬೇಕೆಂದು ಎಡಪಕ್ಷಗಳು ಸೂಚಿಸಿವೆ. ಜಾತ್ಯಾತೀತ ಪಕ್ಷಗಳೊಳಗೆ ಈ ಮಸೂದೆ ಕುರಿತು ಇನ್ನೂ ಹೆಚ್ಚಿನ ಚರ್ಚೆ ನಡೆದು ಆದಷ್ಟು ಬೇಗ ಈ ಮಸೂದೆಗೆ ಮಂಜೂರಾತಿ ಪಡೆಯಲು ಸಂಸತ್ತಿನ ಒಂದು ವಿಶೇಷ ಅಧಿವೇಶನ ಕರೆಯಬೇಕೆಂದು ಬೆಂಗಳೂರಿನಲ್ಲಿ ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ನಿರ್ಣಯಿಸಿದೆ.

ಧರ್ಮವನ್ನು ರಾಜಕೀಯದಿಂದ ಬೇರ್ಪಡಿಸುವ ಮಸೂದೆ ತನ್ನ ರಾಜಕೀಯ ಅಸ್ತಿತ್ವಕ್ಕೇನೇ ಅಪಾಯಕಾರಿಯಾಗಿದೆ, ಧರ್ಮವನ್ನೇ ಮೂಲಾಧಾರವಾಗಿಟ್ಟುಕೊಂಡು ರಾಮಮಂದಿರದ ಹೆಸರಿನಲ್ಲಿ ಅಧಿಕಾರ ಗದ್ದುಗೆರುವ ಕನಸು ಕಾಣುತ್ತಿರುವ ಭಾರತೀಯ ಜನತಾಪಕ್ಷದ ಮುಖಂಡರಿಗೆ ನುಂಗಲಾರದ ತುತ್ತಾಗಿದೆ. ರಾಮನ ಹೆಸರಿನಲ್ಲಿ ರಥ ಯಾತ್ರೆ ಮಾಡಿ, ಜನರ ಮೂಢ ನಂಬಿಕೆಯನ್ನು ಪಯೋಗಿಸಿಕೊಂಡು ನಾಲ್ಕು ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದ, ಲೋಕಸಭೆಯಲ್ಲಿ ಅತಿದೊಡ್ಡ ವಿರೋಧ ಪಕ್ಷವಾಗುವಷ್ಟು ಸ್ಥಾನಗಳಿಸಿದ ಬಿಜೆಪಿ, ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟುವ ಆಶ್ವಾಸನೆಯನ್ನು ಪೂರೈಸುವುದರಲ್ಲಿ ವಿಫಲಗೊಂಡು, ಬರೀ ರಾಮನಾಮ ಮಾತ್ರವೇ ತಮ್ಮ ಪಕ್ಷವನ್ನು ಈಗ ನಡೆಯಲಿರುವ ಉತ್ತರ ಪ್ರದೇಶ, ರಾಜಸ್ಥಾನ, ಹಿಮಾಚಲ ಪ್ರದೇಶ ಮತ್ತು ಮಧ್ಯಪ್ರದೇಶಗಳ ಚುನಾವಣೆಯಲ್ಲಿ ಅಧಿಕಾರ ಸ್ಥಾನಕ್ಕೆ ಒಯ್ಯಲಾರದೆಂಬ ಸಂಶಯದಿಂದಲೇ ಧರ್ಮವನ್ನು ರಾಜಕೀಯ ಪ್ರತ್ಯೇಕಿಸುವ ಮಸೂದೆಯ ವಿರುದ್ಧ ಅಂಥ ವಿಚಾರ ಧಾರೆಯ ವಿರುದ್ಧ ಜನರಲ್ಲಿ ತಪ್ಪುತಿಳುವಳಿಕೆ ಮೂಡಿಸುವ ಅದರ ಮೂಲಕ ಮುಂಬರುವ ಚುನಾವಣೆಗಳಲ್ಲಿ ಲಾಭಗಳಿಸುವ ಉದ್ದೇಶದಿಂದಲೇ ಬಿಜೆಪಿ ದೇಶಾದ್ಯಂತ ಜನಾದೇಶ ಯಾತ್ರೆಗಳನ್ನು ಕೈಗೊಂಡಿದೆ. ಬಿಜೆಪಿ ಅಧ್ಯಕ್ಷ ಅದ್ವಾನಿಯವರು ಕರ್ನಾಟಕದಿಂದಲೇ ವಿಜೃಂಭಣೆಯಿಂದಲೇ ತಮ್ಮ ಯಾತ್ರೆಯನ್ನು ಪ್ರಾರಂಭಮಾಡಿದರು.

ರಾಜ್ಯದ ಪ್ರಮುಖ ನಗರಗಳಲ್ಲಿ ಭಾಷಣ ಮಾಡುತ್ತಾ ಬಿಜೆಪಿ ಧರ್ಮವನ್ನು ರಾಜಕೀಯದಿಂದ ಬೇರ್ಪಡಿಸುವ ಮಸೂದೆಯು ಮುಂದಿನ ಚುನಾವಣೆಯಲ್ಲಿ ಜನಮತ ಕೋರಿಕೆಯ ಏಕೈಕ ಪ್ರಶ್ನೆಯನ್ನಾಗಿ ಉಪಯೋಗಿಸುತ್ತದೆಂದು ಘೋಷಿಸಿದರು.

ಧರ್ಮವನ್ನು ರಾಜಕೀಯದಿಂದ ಬೇರ್ಪಡಿಸುವ ಮಸೂದೆ ಪ್ರಕಾರ ಧರ್ಮದ ಸಂಕೇತವಾದ ಕುಂಕುಮವನ್ನು ಹಣೆಯಲ್ಲಿ ಹಚ್ಚಿಕೊಂಡ ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ. ಹಾಗೆಯೇ ನನ್ನ ಆಡಳಿತದಲ್ಲಿ ಯಾರೂ ನಾರಾಯಣ ನಾಮ ಸ್ಮರಣೆ ಮಾಡಬಾರದೆಂಬ ಹಿರಣ್ಯಕಶಿಪು ಕಟ್ಟಪ್ಪಣೆ ಮಾಡಿದಂತೆ ಯಾರೂ ರಾಮನಾಮ ಹೇಳದಂತೆ ಮಾಡಲು ರಾಜಕೀಯದಿಂದ ಧರ್ಮವನ್ನು ಬೇರ್ಪಡಿಸುವ ಸಾಹಸಕ್ಕೆ ಇಳಿದಿದ್ದಾರೆ. ಚುನಾವಣೆಯಲ್ಲಿ ರಾಮನು ಸ್ಪರ್ಧಿಸುವಂತಿಲ್ಲ, ಕೃಷ್ಣನೂ ಕಣಕ್ಕಿಳಿಯುವಂತಿಲ್ಲ. ಜನರ ಪ್ರತಿ ದಿನದ ಆಚರಣೆಯಾಗಿರುವ ಗುಡಿ ಗುಂಡಾರಗಳಿಗೆ ಚುನಾವಣಾ ಕಾಲದಲ್ಲಿ ಸಂದರ್ಶನ ನೀಡುವಂತಿಲ್ಲ. ಈ ರೀತಿಯಲ್ಲಿ ಬಿಜೆಪಿ ಅಧ್ಯಕ್ಷ ಅದ್ವಾನಿಯವರು ಕರ್ನಾಟಕ ರಾಜ್ಯದಲ್ಲಿ ಭಾಷಣ ಮಾಡುತ್ತಾ ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸಿದರೆ ಆಗಬಹುದಾದಂಥಹ ಗಂಡಾಂತರ ಎಂಬ ರೀತಿಯಲ್ಲಿ ಕೀಳ್ಮಟ್ಟದ ಪ್ರಚಾರ ಮಾಡಿದ್ದಾರೆ. ಆದರೆ ಎಲ್.ಕೆ. ಅಡ್ವಾಣಿಯವರ ಕೆಳಮಟ್ಟದ ಪ್ರಚಾರ ರಾಜ್ಯದ ಜನತೆಯಲ್ಲಿ ಹೆಚ್ಚಿನ ಪರಿಣಾಮ ಬೀರಲಿಲ್ಲ. ಬೆಳಗಾವಿಯಲ್ಲಿ ಕನ್ನಡ ವಿರೋಧಿಯಾದ, ಮರಾಠಿ ಪರವಾದ ಹೇಳಿಕೆ, ಭಾಷಾವಾರು ಪ್ರಾಂತ ರಚನೆಯ ಕುರಿತು ಕರ್ನಾಟಕದಲ್ಲಿರುವ ಬೆಳಗಾವಿನಗರದ ಕುರಿತು ಅವರ ನಿಲುಮೆ ಪ್ರತಿಭಟನೆಗೆ ಅವಕಾಶ ಮಾಡಿಕೊಟ್ಟಿದೆ. ಬಿಜಾಪುರದಲ್ಲಿ ಅವರು ಸಾರ್ವಜನಿಕ ಸಭೆಯಲ್ಲಿ ಮಾಡುತ್ತಿದ್ದಾಗ ಮಾನವ ಧರ್ಮ ಉಳಿಸಿ ಸಮಿತಿಯವರು "ರಕ್ತದ ಕೈಯವನೇ ತೊಲಗಾಚೆ" ಎಂಬ ಕರಪತ್ರ ಜನರನ್ನು ಆಕರ್ಷಿಸಿರುವುದು ಧರ್ಮವನ್ನು ರಾಜಕೀಯದಲ್ಲಿ ಸೇರಿಸಿದರೆ ಆಗಬಹುದಾದ ದುರಂತಗಳ ಕುರಿತು ಎಚ್ಚರಿಕೆ ನೀಡಿದೆ.

ಗದಗಿನ ಡಂಬಳ ಮಠದ ತೋಂಟದ ಸಿದ್ಧಲಿಂಗ ಸ್ವಾಮಿಗಳ ಪ್ರಕಾರ ನಮಗಿಂದು ಬೇಕಾಗಿರುವುದು ಮನುಷ್ಯತ್ವವೇ ಹೊರತು ಮಂದಿರ-ಮಸೀದಿಗಳಲ್ಲ. ಧರ್ಮದ ಹೆಸರಲ್ಲಿ ಬೇರೆಬೇರೆ ಮುಖವಾಡ ಹಾಕಿಕೊಂಡು ಬರುತ್ತಿರುವವರನ್ನು ನಂಬಿ ಮೋಸಹೋಗಬಾರದು. ಮಂದಿರ-ಮಸೀದಿ ಹೆಸರಿನಲ್ಲಿ ಬೊಬ್ಬೆಹೊಡೆದು ಕೊಳ್ಳುವವರ ಉದ್ದೇಶ ಬರೇ ಕುರ್ಚಿ. ಮಂದಿರಕ್ಕಾಗಿ ಮಸೀದಿಯನ್ನು ಮಸೀದಿಗಾಗಿ ಮಂದಿರವನ್ನು ಕೆಡವುತ್ತಾ ಹೋದರೆ ಇದಕ್ಕೆ ಕೊನೆ ಎಲ್ಲಿ. ಬಾಬರಿ ಮಸೀದಿಯನ್ನು ಕೆಡವಿದಾಗ ಅದರಡಿಯಲ್ಲಿ ಹನುಮಂತನ ಮೂರ್ತಿ ಸಿಕ್ಕಿದ್ದೆಂಬುದು ಕೆಲವು ಸ್ವಾಮಿಗಳು ಹೇಳಿಕೆ ಸರಿಯಲ್ಲ. ಈ ದೃಷ್ಟಿಯಿಂದ ನೋಡಿದರೆ ಹಲವಾರು ಪೂಜಾ ಕೇಂದ್ರಗಳನ್ನು ಕೆಡವ ಬೇಕಾಗುತ್ತದೆ. ಒಬ್ಬ ಮಹಿಳೆಯ ಮಾನ ಮುಚ್ಚಲು ಕೂಡಾ ಸಾಧ್ಯವಿಲ್ಲದಂತ ಬಾವುಟ ಇಂದಿನ ಪರಿಸ್ಥಿತಿಯಲ್ಲಿ ನೂರಾರು ಜನರನ್ನು ಬಲಿತೆಗೆದುಕೊಳ್ಳಬಹುದು. ಜನರು ಬದುಕಬೇಕೆಂದು ದೇವರು, ಸ್ವಾಮಿಗಳಿದ್ದಾರೆ. ಆದರೆ ಇದೇ ಸಂತರು ಇಂದು ನರಹಂತಕರಾಗಿದ್ದಾರೆ. ಒಂದು ಕಾಲದಲ್ಲಿ ಮುಸಲ್ಮಾನರ ಕೆಲವು ದೊರೆಗಳು ಇಲ್ಲಿ ದಾಳಿ ನಡೆಸಿ ಲೂಟಿ ಮಾಡಿದರೆಂದು ಇಡೀ ಮುಸ್ಲಿಂ ಸಮುದಾಯವನ್ನೇ ಅಪರಾಧಿಗಳನ್ನಾಗಿ ಮಾಡುವುದು ಸರಿಯಲ್ಲ. ಈ ರೀತಿ ಅವರನ್ನು ದೂರವಿಟ್ಟಾಗ ಅವರು ದಾವೂದ್- ಮೆಮೊನ್‌ಗಳಾಗಿ ಪರಿವರ್ತಿತರಾಗುತ್ತಾರೆ. ದೇಶದ್ರೋಹದ ಕೆಲಸ ಕೇವಲ ಕೆಲವು ಜಾತಿ ಧರ್ಮಕ್ಕೆ ಸೀಮಿತವಲ್ಲ. ಕಲ್ಯಾಣ-ಕಿತ್ತೂರುಗಳ ನಾಶಕ್ಕೆ ಕಾರಣ ಹಿಂದುಗಳೇ ಎಂಬ ಇತಿಹಾಸ ನಮ್ಮ ಕಣ್ಣ ಮುಂದಿದೆ. ಅವರು ಧಾರವಾಡದಲ್ಲಿ ರಾಮಕೃಷ್ಣ -ವಿವೇಕಾನಂದ ಆಶ್ರಮದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಿದರು.

ಎಲ್.ಕೆ. ಅಡ್ವಾಣಿಯವರಿಗೂ ಬಿಜೆಪಿಗೂ ಪಥ್ಯವಾಗದ ಮಾತುಗಳಿವು.

ಅದ್ವಾನಿಯವರು ಹಾಗೆಯೇ ಬಿಜೆಪಿಯವರು ಧರ್ಮವನ್ನು ರಾಜಕೀಯದಿಂದ ಬೇರ್ಪಡಿಸಬೇಕೆಂಬ ವಿಚಾರದಲ್ಲಿ ನಡೆಸಿರುವ ಅಪಪ್ರಚಾರದ ವಿರುದ್ಧ ತೀವ್ರ ಪ್ರಚಾರ ಕೈಗೊಂಡು ಜನರ ಮಧ್ಯೆ ರಾಜಕೀಯವನ್ನು ಧರ್ಮದಿಂದ ಬೇರ್ಪಡಿಸುವ ಅವಶ್ಯಕತೆಯ ಕುರಿತು ತಿಳುವಳಿಕೆ ಉಂಟು ಮಾಡುವುದು ಅತ್ಯಗತ್ಯ.

-- ಕಾಂ. ಎಸ್.ಕೆ. ಉಪಾಧ್ಯಾಯ

ಕೇವಲ್ ರಮಣಿ ಕಾರ್ಮಿಕರ ಹೋರಾಟ ಮುಖ್ಯಮಂತ್ರಿ ಮನೆ ಮುಂದೆ ಧರಣಿ

ಕೇವಲ್ ರಮಣಿ ಕಾರ್ಖಾನೆಯ ಕಾರ್ಮಿಕರು ಪೋಲೀಸ್ ದೌರ್ಜನ್ಯಕ್ಕೆ ಒಳಗಾಗಿರುವುದನ್ನು ಪ್ರತಿಭಟಿಸಿ, ಸಚಿವ ಕೃಷ್ಣಪ್ಪನ ರಾಜೀನಾಮೆಯನ್ನು ನೀಡುವಂತೆ ಒತ್ತಾಯಿಸಿ ಮುಖ್ಯಮಂತ್ರಿಗಳ ಸರಕಾರೀ ನಿವಾಸವಾದ ಕೃಷ್ಣಾದೆದುರು ಧರಣಿ ಸತ್ಯಾಗ್ರಹ ನಡೆಯಿತು. ಅಲ್ಲಿ ನೆರೆದಿದ್ದ ಧರಣಿಕಾರರನ್ನು ಉದ್ದೇಶಿಸಿ ಹಲವಾರು ನಾಯಕರು ಮಾತನಾಡುತ್ತಾ ಕೇವಲ್ ರಮಣಿ ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸದಿದ್ದರೆ ರಾಜ್ಯವ್ಯಾಪಿ ಪ್ರತಿಭಟನೆಯನ್ನು ನಡೆಸುವುದಾಗಿ ಎಚ್ಚರಿಕೆ ನೀಡಲಾಯಿತು. ಪೋಲೀಸರ ಈ ದೌರ್ಜನ್ಯ ಹಾಗೂ ಕೃಷ್ಣಪ್ಪನ ಮಾಲೀಕರ ಪರ ಗೂಂಡಾ ಪ್ರವೃತ್ತಿಯನ್ನು ಕೂಡಲೇ ತಡೆಯಬೇಕೆಂದು ಆಗ್ರಹಿಸಿದರು. ಧರಣಿ ಕಾರರನ್ನುದ್ದೇಶಿಸಿ, ಸಿ.ಐ.ಟಿ.ಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಮಾತನಾಡುತ್ತಾ ಕಾರ್ಮಿಕರ ನ್ಯಾಯಯುತ ಹೋರಾಟದ ದಾರಿ ತಪ್ಪಿಸಲು ಸಚಿವ ಕೃಷ್ಣಪ್ಪ ಮತ್ತು ಅವರ ಚೇಲಾಗಳಾದ ರಾಮದಾಸ್, ತುಳಸಿ ರಾಂ ರವರ ಪತ್ರಿಕಾ ಹೇಳಿಕೆಯನ್ನು ಖಂಡಿಸುತ್ತಾ ಇಂದಿನ ಪರಿಸ್ಥಿತಿಯಲ್ಲಿ ಕಾರ್ಮಿಕರನ್ನು ತುಳಿಯುತ್ತಿರುವುದು ಯಾರು ಎಂಬುದು ಕಾರ್ಮಿಕರಿಗೆ ಚೆನ್ನಾಗಿ ಗೊತ್ತಿದೆ ಎಂದರು. ಪತ್ರಿಕಾ ಹೇಳಿಕೆಯಲ್ಲಿ ಸಿಐಟಿಯು ಗೂಂಡಾಗಳು ಕಾರ್ಮಿಕರನ್ನು ಹಿಂಸಿಸುತ್ತಿದ್ದಾರೆಂಬುದು ಉಲ್ಲೇಖಿಸಿ ಗೂಂಡಾ ಸಂಸ್ಕೃತಿಯನ್ನು ಬೆಳೆಸಿ ಪೋಷಿಸಿದ ಕಾಂಗ್ರೆಸ್ ಸರಕಾರ ಮಾತ್ರ ಕಾರ್ಮಿಕರ ಮೇಲೆ ದೌರ್ಜನ್ಯ ವೆಸಗಲು ಸಾಧ್ಯ ಎಂಬುದನ್ನು ಈ ದೇಶದ ಹಲವಾರು ಘಟನೆಗಳು ತೋರಿಸಿವೆ. ಆದ್ದರಿಂದ ಈ ಹಾಸ್ಯಾಸ್ಪದ ಸುಳ್ಳು ಹೇಳಿಕೆಗಳನ್ನು ನೀಡುವುದನ್ನು ಕೂಡಲೇ ನಿಲ್ಲಿಸಿ ಅನ್ಯಾಯಕ್ಕೊಳಗಾದ ಕಾರ್ಮಿಕರಿಗೆ ನ್ಯಾಯ ದೊರಕಿಸಲು ಮುಖ್ಯಮಂತ್ರಿಯವರನ್ನು ಆಗ್ರಹ ಪಡಿಸಿದರು.

ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಆರ್. ಶ್ರೀನಿವಾಸ್, ಸಿ.ಐ.ಟಿ.ಯು ಬೆಂಗಳೂರು ಜಿಲ್ಲಾ ಸಮಿತಿಯ ಸದಸ್ಯರಾದ ಗೋಪಾಲ[…]
ಕೇವಲ್ ರಮಣಿ ಕಾರ್ಮಿಕರ
ನಿಧಿ ಕೃಷ್ಣವೇಣಿ ಮುಂತಾದವರು [...]
ನಾಡಿದರು. ಕೇವಲ್ [...]
ಕಾರ್ಮಿಕರ ನ್ಯಾಯಯುತ ಹ[...]
ಟಕ್ಕೆ ಬೆಂಬಲ ಸೂಚಿಸಿ ಎಸ್.[...]
ಐನ ಮೀನಾಕ್ಷಿ ಸುಂದರಂ, ಡಿ.ವೈ.[...]
ಐನ ಗೋಪಾಲಕೃಷ್ಣ, ಜೆ.ಎಂ.[...]
ಶಾರದಾ, ಎ.ಆರ್.ಡಿ.ಯುನ [...]
ಯಣ ಮೂರ್ತಿ, ಡಿ.ಎಸ್.ಎಫ್‌ನ[...]
ನಾರಾಯಣ ಮುಂತಾದವರು [...]
ನಾಡಿದರು. ಅನಂತರ ವಿ.ಜೆ.[...]
ಯರ್, ಆರ್. ಶ್ರೀನಿವಾಸ್
ಕಾರ್ಖಾನೆಯ ಕಾರ್ಮಿಕರಿದ್ದ [...]
ನಿಯೋಗ ಮುಖ್ಯಮಂತ್ರಿಯವ[...]
ಭೇಟಿ ಮಾಡಿತು. ಆ ನಿ[...]
ಗಕ್ಕೆ ಮುಖ್ಯಮಂತ್ರಿಯವರು ಈ [...]
ನೆಯನ್ನು ನಾನು ಪರಿಶೀಲಿಸುತ್ತೇ[...]
ಹೇಳಿದ್ದಾರೆಂದು ವರದಿಯಾಗಿದೆ.

ಬಿಜೆಪಿ ಮತ್ತೆ ಅಧಿಕಾರಕ್ಕೆ.....................

...... ಪುಟ 1 ರಿಂದ

ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಲ್ಲಿ ದೇಶದ ಐಕ್ಯತೆಗೆ ಭಾರೀ ಏಟು ನೀಡಿದೆ. ಅಲ್ಪಸಂಖ್ಯಾತರಲ್ಲಿ ಒಂದು ಭಯದ ಭಾವನೆ ತುಂಬಿದೆ. ಕೆಲವು ಸಮಯಗಳಿಂದ ಹಿಂದಕ್ಕೆ ಸರಿಯಬೇಕಾಗಿ ಬಂದಿದ್ದ ಅಲ್ಪಸಂಖ್ಯಾಕರ ನಡುವಿನ ಮೂಲಭೂತವಾದಿಗಳು ಪರಿಸ್ಥಿತಿ ಹೀಗೇ ಮುಂದುವರಿದರೆ ಮತ್ತೆ ತಲೆಯೆತ್ತುವ ಸಂಭವವಿದೆ. ನಮ್ಮ ದೇಶದಲ್ಲಿ ಮುಸ್ಲಿಮರ ಸಂಖ್ಯೆ 16.5 ಕೋಟಿ. ಹಲವು ಯುರೋಪಿಯನ್ ದೇಶಗಳನ್ನು ಒಟ್ಟಾಗಿ ತೆಗೆದುಕೊಂಡರೂ ಇಷ್ಟು ದೊಡ್ಡ ಸಂಖ್ಯೆಯಾಗುವುದಿಲ್ಲ. ದೇಶದ ಇಷ್ಟೊಂದು ದೊಡ್ಡ ವಿಭಾಗದ ಜನ ಹತಾಶರಾಗಿ ಮೂಲಭೂತವಾದಿಗಳ ಮೊರೆ ಹೋದರೆ ಪರಿಸ್ಥಿತಿ ಅತ್ಯಂತ ಸ್ಫೋಟಕವಾಗುತ್ತದೆ. ಹಿಂದಿನ ಯುಗೋಸ್ಲಾವಿಯಾದ ಬೋಸ್ನಿಯಾ-ಹೆರ್ಝಗೋವಿನಾ ಮತ್ತಿತರ ಕೊಲೆ-ಸುಲಿಗೆಗಳ ತಾಣವಾಗಿಬಿಟ್ಟ ಪ್ರದೇಶಗಳಲ್ಲಿ ಕಾಣುತ್ತಿರುವ ಮಧ್ಯಯುಗದ ಬರ್ಬರತೆಯಿಂದ ನಗರ-ನಗರಗಳೇ ಧೂಳಿಪಟವಾದವು. ಆರ್ಥಿಕ ಚಟುವಟಿಕೆ ನಿಂತೇ ಹೋಗಿವೆ. ಜನಗಳಲ್ಲಿ ಹಸಿವು ದಾರಿದ್ರ್ಯದಿಂದ ಹಾಹಾಕಾರ ಹಬ್ಬಿದೆ. ನಮ್ಮ ದೇಶದಲ್ಲೂ ಕಳೆದ ಕೆಲವು ವರ್ಷಗಳಿಂದ ಇಂತಹ ಪರಿಸ್ಥಿತಿ ಸಣ್ಣ ಪ್ರಮಾಣದಲ್ಲಿ ಕಂಡುಬಂದಿದೆ. ಮುಂಬೈ ದಂಗೆಗಳು, ಸೂರಜ್ ಸಾಮೂಹಿಕ ಅತ್ಯಾಚಾರಗಳನ್ನು ನೆನೆಪಿಸಿಕೊಂಡರೆ ಸಾಕು.

ಆದ್ದರಿಂದ ಎಲ್ಲಾ ಜಾತ್ಯಾತೀತ, ದೇಶಪ್ರೇಮಿ, ಪ್ರಜಾಪ್ರಭುತ್ವವಾದಿ, ಪ್ರಜ್ಞಾಶೀಲ ನಾಗರಿಕರು ಮಧ್ಯಪ್ರವೇಶಿಸಿ ದೇಶಬಾಂಧವರನ್ನು ಪರಸ್ಪರ ಎತ್ತಿ ಕಟ್ಟಿ ರಕ್ತ ಪಿಪಾಸುಗಳನ್ನಾಗಿ ಮಾಡುತ್ತಿರುವ ಈ ಕೋಮುವಾದಿ, ಪ್ರತಿಗಾಮಿ ಪಕ್ಷವನ್ನು ಸೋಲಿಸಬೇಕು.

ಈ ನಾಲ್ಕು ರಾಜ್ಯಗಳಲ್ಲಿ ಉತ್ತರಪ್ರದೇಶ ಚುನಾವಣೆ ಎಲ್ಲಕ್ಕೂ ಹೆಚ್ಚು ಮಹತ್ವದ್ದು. 12 ಕೋಟಿಗೂ ಹೆಚ್ಚು ಜನರಿರುವ ಉತ್ತರ ಪ್ರದೇಶ ರಾಷ್ಟ್ರೀಯ ಆಂದೋಲನದ ಕೇಂದ್ರವಾಗಿತ್ತು ದುರದೃಷ್ಟವಶಾತ್ ಅದೀಗ ಕೋಮುವಾದೀ ಚಟುವಟಿಕೆಗಳ ಕೇಂದ್ರವಾಗಿದೆ. ಆ ರಾಜ್ಯದ ಅಯೋಧ್ಯಾ ಮಥುರಾ, ವಾರಾಣಾಸಿಗಳ ಪೂಜಾಸ್ಥಗಳು ಇಂತಹ ದುಷ್ಟ ಚಟುವಟಿಕೆಗಳ ತಾಣಗಳಾಗಿವೆ. ಕಳೆದ ಕೆಲವು ವರ್ಷಗಳಲ್ಲಿ ಬಿಜೆಪಿ ಕೂಟದ ದುಷ್ಟ ಅಪಪ್ರಚಾರ ಹಾಗೂ ಜಾತ್ಯಾತೀತ ವಿರೋಧಪಕ್ಷಗಳಲ್ಲಿನ ಒಡಕಿನಿಂದಾಗಿ ಕಳೆದ ಬಾರಿ ಬಿಜೆಪಿ ಗೆದ್ದಿತ್ತು. ಆದರೂ ಆಗಲೂ ಅದಕ್ಕೆ ದೊರತದ್ದು 32 ಶೇ. ಮತಗಳಷ್ಟೆ ಇದೇ ಅಲ್ಲಿನ ಸನ್ನಿವೇಶದ ಬಗ್ಗೆ ಸಾಕಷ್ಟು ಹೇಳುತ್ತದೆ.

ಕೋಮುವಾದಿ ಶಕ್ತಿಗಳ ಎದುರು ಶರಣಾಗತವಾದುದರಿಂದ ಕಾಂಗ್ರೆಸ್(ಐ)ನ ಬೆಂಬಲಿಗರ ಸಂಖ್ಯೆ ಆ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಇಳಿದಿದೆ. ಅವರ ಜತೆಗಿದ್ದ ಅಲ್ಪಸಂಖ್ಯಾಕರೂ ಈಗ ಬೇಸರದಿಂದ ಅವರತ್ತ ನೋಡುತ್ತಲೇ ಇಲ್ಲ. ಹರಿಜನರು, ಹಿಂದುಳಿದ ಜಾತಿಗಳವರು ಕ್ರಮೇಣ ಅವರಿಂದ ದೂರ ಸರಿದಿದ್ದಾರೆ. ಉತ್ತಮ ಸ್ಥಿತಿಯಲ್ಲಿರುವ ಕೋಮುಗಳ ಜನಗಳಲ್ಲೂ ಕೆಲವು ವಿಭಾಗಗಳು ಅವರಿಂದ ದೂರಸರಿದಿವೆ. ಒಟ್ಟಿನಲ್ಲಿ ಕಾಂಗ್ರೆಸ್(ಐ) ಈಗ ಉತ್ತರ ಪ್ರದೇಶ ಹಣ್ಣು-ಹಣ್ಣಾಗಿರುವ ರಾಷ್ಟ್ರೀಯ ಪಕ್ಷಗಳಲ್ಲಿ ಅತೀ ಕಡಿಮೆ ಗೌರವ ಪಡೆದಿರುವ ಪಕ್ಷ.

ಜಾತ್ಯಾತೀತ ವಿರೋಧ ಪಕ್ಷಗಳು- ಸಮಾಜವಾದೀ ಪಕ್ಷ, ಜನತಾದಳ, ಜನತಾದಳ (ಅಜಿತ್‌ಸಿಂಗ್) ಹಾಗೂ ಬಿ.ಎಸ್.ಪಿ. ಎಡಪಕ್ಷಗಳೊಡಗೂಡಿ ಬಿಜೆಪಿಯನ್ನು ಸೋಲಿಸುವ ಸಾಮರ್ಥ್ಯ ಪಡೆದಿದ್ದರೂ ದುರದೃಷ್ಟವಶಾತ್ ಒಡಕುಗಳು ಇನ್ನೂ ಇವೆ. ಕಳೆದ ಕೆಲವು ತಿಂಗಳಿಂದ ಕೋಮುವಾದ-ವಿರೋಧಿ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ಸಮಾಜವಾದಿ ಪಕ್ಷ- ಬಿ.ಎಸ್.ಪಿ. ಮೈತ್ರಿಕೂಟ ಎಡಪಕ್ಷಗಳ ಜತೆಗೂಡಿ ಬಿಜೆಪಿಯನ್ನು ಸೋಲಿಸಿ ಅಧಿಕಾರಕ್ಕೆ ಬರಬಹುದು ಎಂದು ಭಾವಿಸಿದ್ದಾರೆ. ಇದು ವಾಸ್ತವ ಲೆಕ್ಕಾಚಾರವಲ್ಲ. ಎಲ್ಲಾ ಜಾತ್ಯಾತೀತ ವಿರೋಧ ಪಕ್ಷಗಳು ಒಟ್ಟಾಗಿ ಹೋರಾಡಬೇಕು ಎಂದು ಎಡಪಕ್ಷಗಳು ಹೇಳುತ್ತವೆ. ಜನತಾದಳವೂ ಅದೇ ದೃಷ್ಟಿಕೋಣವನ್ನು ಮುಂದಿಟ್ಟಿದೆ. ವಿ.ಪಿ.ಸಿಂಗ್‌ರವರು ತಮ್ಮ ಇತ್ತೀಚಿನ ಉತ್ತರ ಪ್ರದೇಶದ ಪ್ರವಾಸ ಕಾಲದಲ್ಲಿ ಪಡೆದ ಜನಸ್ಪಂದನ ಜನತಾದಳಕ್ಕೆ ಹಿಂದುಳಿದ ವಿಭಾಗಗಳು ಮತ್ತು ಅಲ್ಪಸಂಖ್ಯಾತರ ನಡುವೆ ಗಮನಾರ್ಹ ಜನಬೆಂಬಲವಿದೆಯೆಂದು ತೋರಿಸಿದೆ.

ಬಿಜೆಪಿ ಮುಖಂಡರು ಸಂಸತ್ತಿನಲ್ಲಿರುವ ಎರಡು ಮಸೂದೆಗಳ ವಿರುದ್ಧವೆಂದು ಹೇಳಿ ಕೈಗೊಂಡಿರುವ ಯಾತ್ರೆಗಳಲ್ಲಿ ಮತ್ತೊಮ್ಮೆ ಕೋಮು ಭಾವನೆಗಳನ್ನು ಉದ್ರೇಕಿಸಲು ಅದನ್ನು ಈ ನಾಲ್ಕು ರಾಜ್ಯಗಳ ಚುನಾವಣೆಗಳಲ್ಲಿ ಬಳಸಲು ಪ್ರಯತ್ನಿಸಲಾಗುತ್ತಿದೆ. ಆದರೆ ಆ ಪಕ್ಷದ ಹಿಂದಿನ ಯಾತ್ರೆಗಳಂತೆ ಈ ಬಾರಿ ಜನಸ್ಪಂದನ ಪಡೆಯುವುದು ಅವರಿಗೆ ಸಾಧ್ಯವಾಗಿಲ್ಲ. ಉತ್ತರ ಪ್ರದೇಶದಲ್ಲಿ ಈ ವರ್ಷ ನಡೆದ ವಿಶ್ವವಿದ್ಯಾಲಯ ವಿದ್ಯಾರ್ಥಿ ಸಂಘ ಚುನಾವಣೆಗಳಲ್ಲಿ ಬಿಜೆಪಿಯ ವಿದ್ಯಾರ್ಥಿ ವಿಭಾಗ ಅಲಹಾಬಾದ್, ಬನಾರಸ್ ಹಾಗೂ ಲಕ್ನೌ ವಿಶ್ವವಿದ್ಯಾಲಯಗಳಲ್ಲಿ ಸೋತಿದೆ ಎಂಬುದು ಇನ್ನೊಂದು ಗಮನಿಸಬೇಕಾದ ಸಂಗತಿ.

ಈ ರಾಜ್ಯಗಳಲ್ಲಿ ಎಡ ಪಕ್ಷಗಳು ದುರ್ಬಲವಾಗಿದ್ದರೂ ಇತ್ತೀಚೆಗೆ ಕೋಮುವಾದ ವಿರುದ್ಧ ಜಾತ್ಯಾತೀತತೆ, ರಾಷ್ಟ್ರೀಯ ಐಕ್ಯತೆ ಹಾಗೂ ಸಮಗ್ರತೆಗಾಗಿನ ಹೋರಾಟದಲ್ಲಿ ಎಡೆಬಿಡದೆ ಶ್ರಮಿಸುತ್ತಿರುವುದರಿಂದ ಅವುಗಳ ಪ್ರತಿಷ್ಠೆ ಹೆಚ್ಚಿದೆ. ಎಡಪಕ್ಷಗಳು ತಾವೇ ಮುತುವರ್ಜಿ ವಹಿಸಿ ವಿರೋಧಿ ಜಾತ್ಯಾತೀತ ಶಕ್ತಿಗಳು ಒಂದು ಹೊಂದಾಣಿಕೆಗೆ ಬರುವಂತೆ ಚರ್ಚೆ ಆರಂಭಿಸಿವೆ. ಮೇಲೆ ಹೇಳಿದ ಸನ್ನಿವೇಶದ ಚಿತ್ರವನ್ನು ಅವರೆಂದುರು ಇಡುತ್ತಾ ತಂತಮ್ಮ ಶಕ್ತಿಗಳ ಬಗ್ಗೆ ತಪ್ಪು ಕಲ್ಪನೆ, ಅತಿಶಯ ಕಲ್ಪನೆಗಳು ಜಾತ್ಯಾತೀತ ಶಕ್ತಿಗಳ ನಡುವೆ ಒಡಕು ಉಂಟು ಮಾಡಿ ಬಿಜೆಪಿ ಗರಿಷ್ಠ ಲಾಭ ಪಡೆಯುತ್ತದೆ ಎಂದೂ ಎಚ್ಚರಿಸಿದ್ದೇವೆ. ಬಿಜೆಪಿಯನ್ನು ಐಕ್ಯತೆಯಿಂದ ಎದುರಿಸುವಲ್ಲಿ ವಿಫಲರಾದರೆ ತಂತಮ್ಮ ಕಾರ್ಯಕರ್ತರ ನಡುವೆಯೇ ಕಿತ್ತಾಟ, ಬಿಕ್ಕಟ್ಟುಗಳು ಉಂಟಾಗಿ ಕೊನೆಗೆ ತಮ್ಮ-ತಮ್ಮ ಸಂಘಟನೆಗಳಿಗೇ ಅನಾಹುತ ಉಂಟಾಗಬಹುದು ಎಂಬುದನ್ನು ವಿರೋಧಿ ಜಾತ್ಯಾತೀತ ಪಕ್ಷಗಳು ಅರಿತುಕೊಳ್ಳಬೇಕಾಗಿದೆ. ನಮ್ಮೆದುರು ಇರುವ ಬೆದರಿಕೆ ಎಷ್ಟು ದೊಡ್ಡದು ಎಂದು ಮೇಲೆ ಹೇಳಿದ ದೃಷ್ಟಿಕೋಣದತ್ತ ಗಮನ ನೀಡಿದರೆ ಬಹುಪಾಲು ಅಲ್ಪಸಂಖ್ಯಾಕರು ಹಾಗೂ ಹಿಂದುಳಿದ ವರ್ಗಗಳ ಗಣನೀಯ ವಿಭಾಗವನ್ನು ಅಣಿನೆರೆಸುವುದು ಸಾಧ್ಯ. ಈ ರೀತಿ ಬಿಜೆಪಿಯನ್ನು ಸೋಲಿಸಲು ಒಟ್ಟಾಗಿ ದುಡಿಯುವ ವಿರೋಧಿ ಜಾತ್ಯಾತೀತ ಪಕ್ಷಗಳ ಇಂತಹ ಒಂದು ರಂಗ ಮೂಡಿದೆ ಎಂಬುದೇ ಒಂದು ಹೊಸ ಉತ್ಸಾಹವನ್ನು ಸೃಷ್ಟಿಸಿ ಅದು ಬಹುಪಾಲು ಜನಗಳನ್ನು ಆಕರ್ಷಿಸಲು ಸಾಧ್ಯ.

ಉತ್ತರ ಪ್ರದೇಶ ಮತ್ತು ಅದು ಅಧಿಕಾರದಲ್ಲಿದ್ದ ಇತರ ರಾಜ್ಯಗಳಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವ ಅಪಾಯವನ್ನು ತಪ್ಪಿಸಲೇ ಬೇಕು. ಏಕೆಂದರೆ ಈ ಅತ್ಯಂತ ಕೋಮುವಾದಿ, ಫ್ಯಾಸಿಸ್ಟ್ ಸ್ವರೂಪದ ಪಕ್ಷಕ್ಕೆ ಅಧಿಕಾರದ ಗದ್ದುಗೆ ದೊರೆತರೆ ಅದರ ನೀತಿಗಳು, ವರ್ತನೆಗಳು ದೇಶದಲ್ಲಿ ಅನಾಹುತ ಉಂಟುಮಾ[...]
ತ್ತವೆ. ಈ ಅಪಾಯವನ್ನು ಪೂರ್ತಿಯಾಗಿ [...]
ಅದನ್ನು ಎದುರಿಸಬೇಕಾಗಿದೆ. ಜಯಶ[...]
ಳಾಗಬೇಕಾದ್ದು ನಮ್ಮ-ನಮ್ಮ ಪಕ್ಷಗಳ ಬ[...]
ಲವಲ್ಲ, ಜನತೆಯ ತೀವ್ರ ಆಕಾಂಕ್ಷೆ[...]
ನಿರ್ಧಾರಕ್ಕೆ ಜಯ ದೊರಕಬೇಕಾಗಿದೆ.

ಐಕ್ಯರಂಗದ ಸಂಗಾತಿ[...] ವಿವಾಹಕ್ಕೆ ಐಕ್ಯರಂಗ ಬಳಗದ[...] ಶುಭ ಹಾರೈಕೆ

ಐಕ್ಯರಂಗದಲ್ಲಿ ಪೂರ್ಣಕಾಲ[...]
ಕಾರ್ಯಕರ್ತರಾಗಿ ದುಡಿಯುತ್ತಿರು[...]
ಕಾಂ. ರಾಜಶೇಖರ್‌ರವ[...]
ಆಗಸ್ಟ್ 12, 1993 ರಂದು ತ[...]
ಬಾಳಸಂಗಾತಿಯಾಗಿ ಉಮಾ ಮ[...]
ಶ್ವರಿಯವರನ್ನು ವಿವಾಹವಾದರ[...]
ಈ ಸಂದರ್ಭದಲ್ಲಿ ಐಕ್ಯರ[...]
ಗವು ಇದೇ ತಿಂಗಳ 20ರಂ[...]
ಅವರ ವಿವಾಹದ ಸವಿನೆನಪಿಗಾ[...]
ಒಂದು ಶುಭಾಶಯ ಕೂಟವೊ[...]
ದನ್ನು ಏರ್ಪಡಿಸಿತ್ತು. ಈ ಕೂ[...]
ದಲ್ಲಿ ಪಾಲ್ಗೊಂಡಿದ್ದ ಪಕ್ಷದ ಕಾ[...]
ದರ್ಶಿ ಕಾಂ.ಪಿ.ರಾಮಚಂದ್ರರಾ[...]
ರವರು ಮಾತನಾಡಿ ವಧೂ[...]
ರರನ್ನು ಹಾರೈಸಿದರು. ಪಕ್ಷ[...]
ಇನ್ನೊಬ್ಬ ಹಿರಿಯ ಮುಖಂ[...]
ಕಾಂ. ಸೂರ್ಯನಾರಾಯಣ[...]
ವ್‌ರವರು ಮಾತನಾಡಿ ನೂತ[...]
ವಧೂವರರನ್ನು ಹಾರೈಸುತ್ತಾ ಪ[...]
ಪೂರ್ಣಕಾಲದ ಕಾರ್ಯಕರ್ತರಾ[...]
ರುವ ರಾಜಶೇಖರ್‌ರವರು ಇನ್ನ[...]
ಹೆಚ್ಚಿನ ಸಮಯವನ್ನು ಪಕ್ಷಕ್ಕ[...]
ಆ ಮೂಲಕ ಎಡ ಚ[...]
ವಳಿಗೆ ತಮ್ಮನ್ನು ಸಮರ್ಪಿಸಿ[...]
ಳ್ಳಲು ಕರೆ ನೀಡಿದರು.
ದಿಸೆಯಲ್ಲಿ ಅವರ ಬಾಳಸಂ[...]
ತಿಯಾದ ಉಮಾಮಹೇಶ್ವರಿ[...]
ವರೂ ಕೂಡ ಪಕ್ಷದ ಬೆಳ[...]
ಗೆಗೆ ತಮ್ಮ ಕಾಣಿಕೆಯನ್ನು ನೀಡ[...]
ಎಂದು ಹಾರೈಸಿದರು. ಪಕ್ಷದ ಬೆಂ[...]
ಳೂರು ಜಿಲ್ಲಾ ಸಮಿತಿಯ ಸದಸ್[...]
ಗಳಾದ ಕಾಂ.ಪಿ.ಕೆ.ಸುಬ್ರಮಣಿ, [...]
ವಾದಿ ಮಹಿಳಾ ಸಂಘಟನೆ[...]
ಕಾಂ.ವಿಮಲಾ ಹಾಗೂ ಇನ್ನಿ[...]
ಕಾರ್ಮಿಕ ಮುಖಂಡರು ಕಿರು ಕಾ[...]
ಕೆಗಳನ್ನು ಅರ್ಪಿಸಿ ವಧೂವರ[...]
ಶುಭ ಹಾರೈಸಿದರು.

ಮಹಿಳಾ ಕಾರ್ಮಿಕರ ಮೇಲೆ ಪೋಲೀಸ್ ದೌರ್ಜನ್ಯ: ರಾಜ್ಯದ್ಯಂತ ಪ್ರತಿಭಟನೆಗೆ ಸಿಐಟಿಯು ಕರೆ

ಬೆಂಗಳೂರು ವೈಟ್‌ಫೀಲ್ಡ್‌ನಲ್ಲಿರುವ ಕೇವಲ್ ರಮಣಿ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ 78 ಮಹಿಳಾ ಕಾರ್ಮಿಕರನ್ನು ಸೆಪ್ಟೆಂಬರ್ 20 ರಂದು ಹೊಸಕೋಟೆ ಪೋಲೀಸರು ಬಂಧಿಸಿ ಅಪಮಾನ ಗೊಳಿಸಿ ಅವರಿಗೆ ಹೊಡೆದು ಬಡಿದು ಜೈಲಿಗೆ ಹಾಕಿದ್ದಾರೆ. ಅವರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಪೋಲೀಸರ ದಬ್ಬಾಳಿಕೆಯಿಂದ 28 ಮಹಿಳಾ ಕಾರ್ಮಿಕರಿಗೆ ಗಾಯಗಳಾಗಿವೆ. ಐದು ಮಹಿಳಾ ಕಾರ್ಮಿಕರಿಗೆ ಪೋಲೀಸರ ಬೂಟುಗಾಲಿನ ಒದೆತದಿಂದ ಸ್ಮತಿ ತಪ್ಪಿದ್ದಾರೆ.

ರಾಜ್ಯ ಸರ್ಕಾರ ಕಾರ್ಖಾನೆ ಮುಚ್ಚಿರುವುದು ಕಾಯ್ದೆಗೆ ವಿರುದ್ಧವೆಂದು ಘೋಷಿಸಿದ ನಂತರ ಆಡಳಿತ ವರ್ಗಕ್ಕೆ ಸರ್ಕಾರದವರು ನೋಟೀಸ್ ಕಳಿಸಿದ ನಂತರ ಕಾರ್ಮಿಕರು ಕೆಲಸಕ್ಕೆ ಹೋಗಲು ಗೇಟಿನ ಹತ್ತಿರ ಹೋದಾಗ ಕಾರ್ಮಿಕರಿಗೆ ಕೆಲಸ ಕೊಡಲು ಆಡಳಿತ ವರ್ಗ ನಿರಾಕರಿಸಿತು. ಹೊಸಕೋಟೆ ಪೋಲೀಸರು ಕಾರ್ಮಿಕರಿಗೆ ಕೆಲಸ ನಿರಾಕರಿಸುವ ಆಡಳಿತ ವರ್ಗದ ಮೇಲೆ ಕ್ರಮ ಕೈಗೊಳ್ಳದೆ ಕಾರ್ಮಿಕರನ್ನು ಬಂಧಿಸಿ ಅಲ್ಲಿಯೇ ಸಿದ್ಧತೆಯಲ್ಲಿದ್ದ ಪೋಲೀಸ್ ವ್ಯಾನ್‌ನಲ್ಲಿ ಕಾರ್ಮಿಕರನ್ನು ಹೊಡೆದು ಬಡಿದು ಅವರನ್ನು ಹೊಸಕೋಟೆ ಮತ್ತು ಸೂಲಿಬೆಲೆ ಪೋಲೀಸ್ ಸ್ಟೇಷನ್‌ಗಳಿಗೆ ಹಾಕಿ ಅನಂತರ ಸೆಂಟ್ರಲ್ ಜೈಲ್‌ನಲ್ಲಿ ಹಾಕಿದರು. ಅನಂತರ ಇಪ್ಪತ್ತೈದು ಮಹಿಳೆಯರಿಗೆ ಚಿಕಿತ್ಸೆ ಮಾಡಿಸಿದರು. ಈ ಮಹಿಳಾ ಕಾರ್ಮಿಕರ ತಂದೆತಾಯಿಗಳು ನೋಡಲು ಬಂದಾಗ ಅವರ ಮೇಲೂ ಪೋಲೀಸರು ದಬ್ಬಾಳಿಕೆ ನಡೆಸಿದರು. ಕಾರ್ಮಿಕರಿಗೆ ಕನಿಷ್ಠ ವೇತನ ಫ್ಯಾಕ್ಟರಿ ಆಕ್ಟ್‌ನ ಪ್ರಕಾರ ಕ್ಯಾಂಟೀನ್ ಸೌಲಭ್ಯ ಮತ್ತು ಮಕ್ಕಳಿಗಾಗಿ ಶಿಶುಪಾಲನಾ ಕೇಂದ್ರ ಇದರ ಕುರಿತು ಜೂನ್ 16, 1993 ರಂದು ಯೂನಿಯನ್‌ನ ಜೊತೆಯಲ್ಲಿ ಒಪ್ಪಂದ ಆಗಿದ್ದರೂ ಕೂಡಾ ಆಡಳಿತವರ್ಗ ಅದೇ ದಿವಸ ಕಾರ್ಖಾನೆಯ ಹತ್ತಿರ ಬೀಗ ಮುದ್ರೆ ಘೋಷಿಸಿದೆ. ಅನಂತರ ಮಾಲೀಕ ವರ್ಗ ಮಂತ್ರಿ ಕೃಷ್ಣಪ್ಪನವರ ಜೊತೆಯಲ್ಲಿ ಒಪ್ಪಂದಕ್ಕೆ ಸಹಿ ಮಾಡಿ ಕಾರ್ಮಿಕರಿಗೆ ಅನ್ಯಾಯವೆಸಗಿದೆ. ಕಾರ್ಮಿಕ ಮಂತ್ರಿ ಬೀಗಮುದ್ರೆ ಕಾನೂನಿಗೆ ವಿರುದ್ಧವೆಂದು ಘೋಷಿಸದರೂ ಕೂಡಾ ಮಾಲಿಕ ವರ್ಗ ತೋಟಗಾರಿಕೆ ಮಂತ್ರಿ ಕೃಷ್ಣಪ್ಪ ಅವರ ಜೊತೆಯಲ್ಲಿ ಕಾರ್ಮಿಕ ಕಾಯ್ದೆಗೆ ವಿರುದ್ಧ ಮಹಿಳಾ ಕಾರ್ಮಿಕರ ಮೇಲೆ ಅನ್ಯಾಯ ದಬ್ಬಾಳಿಕೆ ನಡೆಸುತ್ತಿದೆ. 78 ಮಹಿಳಾ ಕಾರ್ಮಿಕರ ಮೇಲೆ ಪೋಲೀಸರು ನಡೆಸಿದ ದಬ್ಬಾಳಿಕೆ ಕುರಿತು ಕೂಡಲೇ ನ್ಯಾಯಾಂಗ ವಿಚಾರಣೆ ನಡೆಸಬೇಕೆಂದು ಹೊಸಕೋಟೆ ಸರ್ಕಲ್ ಇನ್ಸ್‌ಪೆಕ್ಟರ್‌ರನ್ನು ಕೂಡಲೇ ಅಮಾನತ್ತುಗೊಳಿಸಬೇಕೆಂದು ಅವನ ಜೊತೆಯಲ್ಲಿ ದಬ್ಬಾಳಿಕೆಯಲ್ಲಿ ಭಾಗವಹಿಸಿದ ಪೋಲೀಸರನ್ನು ಅಮಾನತುಗೊಳಿಸಿ ವಿಚಾರಣೆ ನಡೆಸಬೇಕೆಂದು ಸಿಐಟಿಯು ರಾಜ್ಯ ಸಮಿತಿ ಒತ್ತಾಯಿಸಿದೆ. ಸೆಪ್ಟೆಂಬರ್ 24 ರಂದು ಮುಖ್ಯಮಂತ್ರಿ ಮನೆಯ ಮುಂದೆ ಧರಣಿ ನಡೆಸಲು ಸೆಪ್ಟೆಂಬರ್ 30 ರಂದು ರಾಜ್ಯಾದ್ಯಂತ ಪ್ರತಿಭಟನಾ ಮತ ಪ್ರದರ್ಶನ ನಡೆಸಲು ಸಿಐಟಿಯು ರಾಜ್ಯ ಸಮಿತಿ ಕರೆ ಕೊಟ್ಟಿದೆ. ಕೈಗಾರಿಕಾ ಮಂತ್ರಿ ಕೃಷ್ಣಪ್ಪನವರು ಕೂಡಲೇ ರಾಜೀನಾಮೆ ಕೊಡಬೇಕೆಂದು ಸಿಐಟಿಯು ರಾಜ್ಯ ಸಮಿತಿ ಒತ್ತಾಯ ಮಾಡಿದೆ.

ಇದಕ್ಕೆ ದುಡಿಯುವ ಮಹಿಳಾ ಸಮನ್ವಯ ಸಮಿತಿ ಬೆಂಬಲ ಸೂಚಿಸಿದೆ.

ಸಿಐಟಿಯು ಬೆಂಗಳೂರು ಜಿಲ್ಲಾ ಸಮಿತಿ ಪೋಲೀಸ್ ದಬ್ಬಾಳಿಕೆಯನ್ನು ಖಂಡಿಸಿದೆ. ಕಾರ್ಮಿಕ ವಿರೋಧಿ ನೀತಿಯನ್ನು ತಳೆಯುತ್ತಿರುವ ಪೋಲೀಸ್ ನೀತಿಯನ್ನು ಉಗ್ರವಾಗಿ ಖಂಡಿಸಿ ಮುಖ್ಯಮಂತ್ರಿಯವರು ಮಧ್ಯಪ್ರವೇಶಿಸಿ ಕಾರ್ಮಿಕರ ನ್ಯಾಯಯುತ ಹೋರಾಟದಲ್ಲಿ ಪೋಲೀಸರ ಹಸ್ತಕ್ಷೇಪವನ್ನು ತಡೆಹಿಡಿಯಬೇಕೆಂದು ಒತ್ತಾಯಿಸಿದೆ.

ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಮೇಲೆ ಲಾಠಿ ಚಾರ್ಜು ಖಂಡನೆ

ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿಯಲ್ಲಿ 4,000 ಕಾರ್ಮಿಕರು ದುಡಿಯುತ್ತಿದ್ದಾರೆ. ಇವರಿಗೆ ಬರಬೇಕಾದ ತುಟ್ಟಿಭತ್ಯೆಯನ್ನು ಕಳೆದ 3-4 ವರ್ಷಗಳಿಂದಲೂ ಕೊಟ್ಟಿಲ್ಲ, ಹೀಗಾಗಿ ಕಾರ್ಮಿಕರಿಗೆ ಆಡಳಿತವರ್ಗದಿಂದ ಪ್ರತಿಯೊಬ್ಬರಿಗೂ 4,000 -5000 ರೂ ಹಣ ಬರಬೇಕಾಗಿದೆ. ಈ ನ್ಯಾಯವಾದ ಬೇಡಿಕೆ ಕೇಳಲು ಶಾಂತಿಯುತ ಪ್ರದರ್ಶನ ನಡೆಸುತ್ತಿದ್ದಾಗ ಆಡಳಿತ ವರ್ಗ ಅವರ ಸಮಸ್ಯೆಯನ್ನು ಬಗೆಹರಿಸುವುದರ ಬದಲು ಪೋಲೀಸ್‌ರನ್ನು ಕರೆಸಿ ದಬ್ಬಾಳಿಕೆ ನಡೆಸಿದೆ. ಪೋಲೀಸರ ಲಾಠಿ ಪ್ರಹಾರದಿಂದ ಅನೇಕ ಜನರಿಗೆ ಗಾಯವಾಗಿದೆ. 120 ಜನರನ್ನು ದಸ್ತಗಿರಿ ಮಾಡಿದ್ದಾರೆ. ಆಡಳಿತ ವರ್ಗದ ಮತ್ತು ಪೋಲೀಸರ ವರ್ತನೆಯನ್ನು ಸಿಐಟಿಯು ರಾಜ್ಯ ಸಮಿತಿ ತೀವ್ರವಾಗಿ ಖಂಡಿಸುತ್ತದೆ. ಆಡಳಿತ ವರ್ಗ ತುಟ್ಟಿಭತ್ಯೆ ಪಾವತಿ ಮಾಡಲು ಹಾಕಿರುವ ಶರತ್ತು ಅಸಂಬದ್ಧ ಅನ್ಯಾಯದಿಂದ ಕೂಡಿದೆ. ಈ ಕೂಡಲೇ ಆಡಳಿತ ವರ್ಗ ಅವರಿಗೆ ಬರಬೇಕಾದ ತುಟ್ಟಿಭತ್ಯೆಯ ಬಾಕಿ ಹಣದ ಬಗ್ಗೆ ಕ್ರಮ ತೆಗೆದುಕೊಂಡು ಪಾವತಿ ಮಾಡಬೇಕು. ಪೋಲೀಸರ ವರ್ತನೆ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸಬೇಕೆಂದೂ ಹಾಗೂ ಮುಖ್ಯಮಂತ್ರಿಯವರು ಮಧ್ಯಪ್ರವೇಶಿಸಿ ಕಾರ್ಮಿಕರ ನ್ಯಾಯವಾದ ಬೇಡಿಕೆ ಈಡೇರಿಸಬೇಕು ಹಾಗೂ ಬಂಧಿತರನ್ನು ಬಿಡುಗಡೆ ಮಾಡಬೇಕೆಂದು ಸಿಐಟಿಯು ರಾಜ್ಯ ಸಮಿತಿ ಒತ್ತಾಯಿಸಿದೆ.

ಸಿಪಿಐ(ಎಂ)ನ ಖಂಡನೆ

ರಾಯಚೂರ ಜಿಲ್ಲೆಯ ಹಟ್ಟಿ ಚಿನ್ನದ ಗಣಿ ಕೆಲಸಗಾರರು ತಮಗೆ ಕಳೆದ ವರ್ಷಗಳಿಂದ ಕೊಡದೆ ಬಾಕಿ ಉಳಿದಿರುವ ತುಟ್ಟಿಭತ್ಯೆಯನ್ನು ಕೊಡಬೇಕೆಂದು ಒತ್ತಾಯಪಡಿಸಿದಾಗ ಯಾವ ಮುನ್ಸೂಚನೆಯೂ ಇಲ್ಲದೆ ಚಿನ್ನದ ಗಣಿಗೆ ಬೀಗಮುದ್ರೆ ಹಾಕಿರುವ ಆಡಳಿತ ವರ್ಗದ ಕ್ರಮವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬಲವಾಗಿ ಖಂಡಿಸಿದೆ. ತಿಂಗಳಿಗೆ 80 ಕೆಜಿ ಚಿನ್ನ ಉತ್ಪಾದಿಸಿದರೆ ಮಾತ್ರ ಬಾಕಿ ತುಟ್ಟಿಭತ್ಯೆ ಕೊಡಲಾಗುವುದೆಂಬ ಆಡಳಿತ ವರ್ಗದ ವಾದ ಅಸಮರ್ಥನೀಯ. ತುಟ್ಟಿಭತ್ಯೆಗೂ ಉತ್ಪಾದನೆಗೂ ಸಂಬಂಧ ಹಚ್ಚುವುದು ಸರಿಯಲ್ಲ. ಕಾರ್ಮಿಕರ ಮೇಲೆ ಲಾಠಿ ಚಾರ್ಜ್ ಮಾಡಿರುವುದನ್ನು ನಿರ್ಬಂಧಕಾಜ್ಞೆ ವಿಧಿಸಿರುವುದನ್ನು ಸಿಪಿಐ(ಎಂ) ಖಂಡಿಸಿದೆ. ಸರಕಾರಿ ಕ್ಷೇತ್ರದಲ್ಲಿರುವ ಚಿನ್ನದ ಗಣಿ ಆಡಳಿತವರ್ಗ ಕಾರ್ಮಿಕರಿಗೆ ಸಲ್ಲ ತಕ್ಕ ತುಟ್ಟಿಭತ್ಯೆ ಕೊಟ್ಟು ಬೀಗ ಮುದ್ರೆ ತೆಗೆದು ಪರಿಸ್ಥಿತಿಯನ್ನು ತಿಳಿಗೊಳಿಸಬೇಕೆಂದು ಒತ್ತಾಯಿಸಿದೆ.

ಮಂಗಳೂರು ತೈಲಾಗಾರ ಸಂತ್ರಸ್ತರ ಮೇಲಿನ ದಬ್ಬಾಳಿಕೆಯ ಖಂಡನೆ

ಮಂಗಳೂರು ತೈಲಾಗಾರ, ಜಯಪ್ರಕಾಶ್ ಇಂಜಿನಿಯರಿಂಗ್ ಮತ್ತು ಸ್ಟೀಲ್ ಕಂಪೆನಿ, ಕೊಂಕಣ ರೇಲ್ವೆ, ನಂದಿಕೂರು ಉಷ್ಣ ವಿದ್ಯುತ್ ಸ್ಥಾವರ ಮೊದಲಾದ ಅಭಿವೃದ್ಧಿ ಕಾರ್ಯಗಳಿಗೆ 2,350 ಕ್ಕಿಂತಲೂ ಹೆಚ್ಚು ಭೂಮಿಯನ್ನು ಸರಕಾರ ಸ್ವಾಧೀನ ಪಡಿಸಿಕೊಂಡು 7-8 ವರ್ಷಗಳ ಮೇಲಾದರೂ ಯಾವ ಅಭಿವೃದ್ಧಿ ಕೆಲಸ ನಡೆಯುತ್ತಿಲ್ಲ. ಮಾತ್ರವಲ್ಲ ಈ ಭೂಮಿಗಳಲ್ಲಿರುವ ಬಡರೈತರಿಗೆ, ಕೃಷಿ ಕೂಲಿಗಾರರಿಗೆ, ಕಾರ್ಮಿಕರಿಗೆ, ಬಾಡಿಗೆದಾರರಿಗೆ ಯಾವ ಪರಿಹಾರವನ್ನು, ಆಶ್ರಯವನ್ನೂ ಒದಗಿಸದಿರುವಾಗ, ಆಶ್ರಯಕ್ಕಾಗಿ ಯೋಗ್ಯ ನ್ಯಾಯಯುತವಾದ ಪರಿಹಾರಕ್ಕಾಗಿ ಸಾವಿರಾರು ಜನ ಧರಣಿ ಸತ್ಯಾಗ್ರಹ ನಡೆಸುತ್ತಿರುವಾಗ ಅವರ ಮೇಲೆ ದಬ್ಬಾಳಿಕೆ ನಡೆಸುತ್ತಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಖಂಡಿಸುತ್ತದೆ. ಭೂ ಸ್ವಾಧೀನ ಅಧಿನಿಯಮದ ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ ಈ ಭೂಮಿಗಳ ಮಾರ್ಕೆಟ್ ಬೆಲೆಯನ್ನು ಗಣನೆಗೆ ತೆಗೆದುಕೊಳ್ಳದೆ ನಿಜವಾದ ಬೆಲೆಯ 1/10 ರಷ್ಟು ಬೆಲೆ ನಿರ್ಧರಿಸಿರುವುದು ಮಾತ್ರವಲ್ಲ ಇನ್ನೂ ಮುಂದೆ ಹೆಚ್ಚಿನ ಬೆಲೆ ಕೇಳುವುದಿಲ್ಲ ಎಂಬ ಕರಾರು ಪತ್ರಕ್ಕೆ ನಿರಕ್ಷರಿ ಜನರಿಂದ ಹೆಬ್ಬೆಟ್ಟು ಒತ್ತಿಸಿಕೊಂಡು ಮೋಸ ಮಾಡುವುದು ನಾಗರೀಕರತೆಗೆ ವಿರುದ್ಧವಾದ ಕ್ರಮವನ್ನು ಅಧಿಕಾರಿಗಳು ನಡೆಸುತ್ತಿದ್ದಾರೆ.

ನವಮಂಗಳೂರು ನಂದಿಕೂರು ಮತ್ತು ಕೊಂಕಣ ರೈಲ್ವೆ ಹಿತರಕ್ಷಣಾ ಸಂಘದವರು ನಿರಂತರ ಹೋರಾಟ ನಡೆಸಿ, ಮುಖ್ಯಮಂತ್ರಿಯವರ ಗಮನ ಸೆಳೆದರೂ ಕೂಡಾ ಸಾವಿರಾರು ಬಡವರನ್ನು ಬಾಧಿಸುತ್ತಿರುವ ಯೋಗ್ಯ ಪರಿಹಾರ ಧನ ನೀಡಲಿಕ್ಕೆ ಭೂಮಿ ಕಳೆದುಕೊಳ್ಳುವವರಿಗೆ ವಸತಿಯ ಏರ್ಪಾಟಿಗೆ ಸರಿಯಾದ ವ್ಯವಸ್ಥೆ ಮಾಡದೆ, ಮಳೆಗಾಲದಲ್ಲಿ ಕೂಡ ಈ ಬಡಜನರನ್ನು ಪೋಲೀಸರ ಸಹಾಯದಿಂದ ಹೊರಗೆ ದಬ್ಬುತ್ತಿರುವುದು ಅತ್ಯಂತ ಅಮಾನವೀಯ ಕೃತ್ಯವಾಗಿದೆ. ಪೋಲೀಸರ, ಅಧಿಕಾರಿಗಳ ಇಂಥ ದಬ್ಬಾಳಿಕೆಯನ್ನು ಎಲ್ಲರೂ ವಿರೋಧಿಸಬೇಕೆಂದು, ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರು ಕೂಡಲೇ ಇದರಲ್ಲಿ ಮಧ್ಯಪ್ರವೇಶಿಸಿ ಸರಿಯಾದ ಪರಿಹಾರ ಒದಗಿಸಬೇಕೆಂದೂ ಸಿಪಿಐ(ಎಂ) ಒತ್ತಾಯಿಸಿದೆ.



ಕೃಷಿ ಕೂಲಿಕಾರರ ಹೋರಾಟಕ್ಕೆ ಕರೆ

ಗಂಗಾವತಿ : ಈ ತಿಂಗಳ 3 ಮತ್ತು 4 ರಂದು ಇದೇ ತಾಲೂಕಿನ ಸಿಂಗನಾಳ ಗ್ರಾಮದಲ್ಲಿ ಕೃಷಿ ಕೂಲಿಕಾರರ ಸಂಘಟನೆ ಕೃಷಿ ಕೂಲಿಕಾರರ ತರಬೇತಿ ಶಿಬಿರವನ್ನು ಯಶಸ್ವಿಯಾಗಿ ನಡೆಸಿತು. ಇದರ ಅಂಗವಾಗಿ 4ನೇ ತಾರೀಖಿನಂದು ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಜಿ.ಎನ್. ನಾಗರಾಜ್‌ರವರು ಮಾತನಾಡುತ್ತಾ, ದೇಶದ ಇಂದಿನ ಆರ್ಥಿಕ ಪರಿಸ್ಥಿತಿಗೆ ಐ.ಎಂ.ಎಫ್.-ವಿಶ್ವಬ್ಯಾಂಕ್‌ನ ಕೊಡುಗೆ ಎಷ್ಟು ಎಂದು ವಿವರಿಸಿದರು. ಕೋಮುವಾದ ಹೇಗೆ ಕೃಷಿ ಕಾರ್ಮಿಕರನ್ನು ಭಾದಿಸುತ್ತದೆ ಎಂಬುದನ್ನು ವಿವರಿಸುತ್ತಾ ಕೇಂದ್ರ ಸರಕಾರದ ಆರ್ಥಿಕ ನೀತಿಯ ವಿರುದ್ಧ ಹಾಗೂ ಕೋಮುವಾದದ ವಿರುದ್ಧ ಕೃಷಿ ಕಾರ್ಮಿಕರು ತೀವ್ರವಾದ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಸಂತಾಪ

ಇತ್ತೀಚೆಗೆ ನಿಧನರಾದ ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾದ ಹಾಗೂ ಕ್ರಾಂತಿಕಾರಿ ರೈತ ನಾಯಕರಾದ ಅಚಿಂತ್ಯಾ ಭಟ್ಟಾಚಾರ್ಯರ ನಿಧನಕ್ಕೆ ಎ.ಐ.ಕೆ.ಎಸ್.ನ ಕೇಂದ್ರ ಸಮಿತಿ ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ.

ಬೀಡಿ ಕಾರ್ಮಿಕರಿಗೆ ಶೇ. 20 ಬೋನಸ್ ನೀಡದಿದ್ದಲ್ಲಿ ತೀವ್ರ ಪ್ರತಿಭಟನೆ

ಕರ್ನಾಟಕ ಸ್ಟೇಟ್ ಬೀಡಿ ಫೆಡರೇಶನ್(ಸಿಐಟಿಯು) ಇದರ ರಾಜ್ಯ ಸಮಿತಿಯು ಮಂಗಳೂರಿನಲ್ಲಿ 18-9-93ರಂದು ವಿ.ಜೆ.ಕೆ. ನಾಯರ್‌ರವರ ಅಧ್ಯಕ್ಷತೆಯಲ್ಲಿ ಸೇರಿ ಬೀಡಿ ಉದ್ದಿಮೆ ಮತ್ತು ಕಾರ್ಮಿಕರ ಪರಿಸ್ಥಿತಿ ಬಗ್ಗೆ ವಿಮರ್ಶಿಸಿತು. ಅಖಿಲ ಭಾರತ ಬೀಡಿ ಕಾರ್ಮಿಕರ ಸಮ್ಮೇಳನ ಡಿಸೆಂಬರ್ 3, 4 ಮತ್ತು 5 ರಂದು ಕೇರಳ ರಾಜ್ಯದ ಕಣ್ಣಾನೂರಿನಲ್ಲಿ ಜರುಗಲಿದ್ದು ಸಮ್ಮೇಳನವನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು.

ರಾಜ್ಯದ ಕಾರ್ಮಿಕ ಆಯುಕ್ತರ ಸಮಕ್ಷಮದಲ್ಲಿ ರಾಜ್ಯದ ಬೀಡಿ ಕಾರ್ಮಿಕರ ಬೋನಸ್ ಬೇಡಿಕೆ ಇದ್ದು, ಈಗಾಗಲೇ ಎರಡು ಬಾರಿ ಜಂಟಿ ಸಭೆ ಕಾರ್ಮಿಕ ಆಯುಕ್ತರ ಕಛೇರಿಯಲ್ಲಿ ಸೇರಿದ್ದು, ಇತ್ಯರ್ಥವಾಗದೇ ಮುಂದಿನ ಸಭೆ ಅಕ್ಟೋಬರ್ 5ರಂದು ನಿಗದಿಯಾಗಿದೆ. 1992-93ರ ಸಾಲಿನಲ್ಲಿ ಶೇ. 20ರಷ್ಟು ಬೋನಸ್ ಸಿಗಬೇಕೆಂಬ ಬೇಡಿಕೆ ಬೀಡಿ ಮಾಲಕರ ಮುಂದಿದೆ. ಈಗಾಗಲೇ ಸ್ವಾಪ್‌ನವರಿಗೆ ಶೇ. 20ರಷ್ಟು ಹಾಗೂ ಕಾರ್ಮಿಕರಿಗೆ 8.33ರಷ್ಟು ಬೋನಸ್ ನೀಡುತ್ತಿದ್ದು ಕಾಯಿದೆಗೆ ವಿರುದ್ಧವಾಗಿ ಒಂದೇ ಕೈಗಾರಿಕೆಯಲ್ಲಿ ಎರಡು ರೀತಿಯಲ್ಲಿ ಬೋನಸ್ ನೀಡುವುದನ್ನು ಸಭೆಯು ಖಂಡಿಸಿದೆ. ಬೀಡಿ ಕಾರ್ಮಿಕರೆಲ್ಲರಿಗೂ ಶೇಕಡಾ 20ರಷ್ಟು ಬೋನಸ್ ಅಕ್ಟೋಬರ್ 5ರ ಒಳಗೆ ನೀಡುವ ಬಗ್ಗೆ ಇತ್ಯರ್ಥವಾಗದಿದ್ದಲ್ಲಿ ರಾಜ್ಯಾದ್ಯಂತ ಬೀಡಿ ಕಾರ್ಮಿಕರು ಅಕ್ಟೋಬರ್ ಎರಡನೇ ವಾರದಲ್ಲಿ ತೀವ್ರ ಪ್ರತಿಭಟನೆಗೆ ಸಿದ್ಧತೆ ನಡೆಸಲು ಕರೆ ನೀಡಿದೆ ಎಂದು ಪ್ರಧಾನ ಕಾರ್ಯದರ್ಶಿ ಕೆ. ಶಂಕರ್ ತಿಳಿಸಿದ್ದಾರೆ.

ಶಾಸಕರ ರಾಜಿನಾಮೆಗೆ ಆಗ್ರಹ

ಹೊನಗನಹಳ್ಳಿ (ಬಿಜಾಪುರ) : ಸ್ಥಳೀಯ ಶಾಸಕರಾದ ಬಿ.ಎಸ್. ಪಾಟೀಲರ ರಾಜೀನಾಮೆಗೆ ಕರ್ನಾಟಕ ಪ್ರಾಂತ ರೈತ ಸಂಘದ ಹೊನಗನ ಹಳ್ಳಿ ಶಾಖೆಯು ಒತ್ತಾಯಿಸಿದೆ.

ಈ ಶಾಸಕರು ತಮ್ಮ ಕ್ಷೇತ್ರದಲ್ಲಿ ಕನಿಷ್ಠ ಸೌಲಭ್ಯ ಒದಗಿಸಲು ಅಸಮರ್ಥರಾಗಿದ್ದಾರೆ. ತಮ್ಮ ಕ್ಷೇತ್ರದ ಮತದಾರರಿಗೆ ಸುಳ್ಳು ಆಶ್ವಾಸನೆ ನೀಡಿ ಶಾಸಕರಾದ ಇವರು ಈವರೆಗೆ ಈ ಗ್ರಾಮಕ್ಕೆ ಭೇಟಿ ನೀಡಿಲ್ಲ. ಆದ್ದರಿಂದ ಇವರು ತಮ್ಮ ಶಾಸಕನ ಸ್ಥಾನಕ್ಕೆ ರಾಜೀನಾಮೆ ನೀಡುವುದು ಒಳ್ಳೆಯದು ಎಂದು ಡಿ.ವೈ.ಎಫ್.ಐ, ಪ್ರಾಂತ ರೈತ ಸಂಘದ ಹೊನಗನಹಳ್ಳಿಯ ಶಾಖೆಯು ಕಾರ್ಯದರ್ಶಿಗಳಾದ ಪಣಬ್ಬ ಒಡೆಯರು ಪತ್ರಿಕಾ ಹೇಳಿಕೆ ನೀಡಿ ಒತ್ತಾಯಿಸಿದ್ದಾರೆ.

ಪ್ರಾಂತ ರೈತ ಸಂಘದ ಸಭೆ

ಬಳ್ಳಾರಿ : ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿಯು ಸಭೆಯು ದಿನಾಂಕ ಸೆಪ್ಟೆಂಬರ್ 14, 1993 ರಂದು ನಡೆದು ಜಿಲ್ಲೆಯ ಬರಗಾಲ ಪರಿಸ್ಥಿತಿಯನ್ನು ಸರಕಾರಕ್ಕೆ ಮನದಟ್ಟು ಮಾಡಿಸಲು ಅನೇಕ ಹಳ್ಳಿಗಳನ್ನು ನಡೆಸಿದ ಪ್ರತಿಭಟನೆ, ಮೆರವಣಿಗೆಗಳ ನಂತರದ ಪರಿಸ್ಥಿತಿಯನ್ನು ಸಭೆಯು ಅವಲೋಕಿಸಿತು. ಜಿಲ್ಲೆಯಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಸದಸ್ಯತ್ವವನ್ನು ಸೆಪ್ಟೆಂಬರ್ 31 ರೊಳಗೆ ನೊಂದಾಯಿಸಲು ತೀರ್ಮಾನ ಕೈಗೊಂಡಿತು.

ರಾಜ್ಯ ಸಮಿತಿಯು ಡಂಕೆಲ್ ಪ್ರಸ್ತಾಪಗಳ ಬಗ್ಗೆ ಹಳ್ಳಿ ಹಳ್ಳಿಗೂ ಅದರ ಸಾರದ ಬಗ್ಗೆ, ಅದನ್ನು ಒಪ್ಪಿಕೊಂಡರೆ ಮುಂದೊದಗುವ ಅನಾಹುತಗಳ ಬಗ್ಗೆ ವಿವರಿಸಲು ವ್ಯಾಪಕ ಪ್ರಚಾರ ನಡೆಸುವ ತೀರ್ಮಾನಕ್ಕೆ ಜಿಲ್ಲೆಯಲ್ಲಿ ನಡೆಸುವ ಬಗ್ಗೆ ವ್ಯಾಪಕ ಚರ್ಚೆ ನಡೆಸಿ ಸುಮಾರು 7 ತಾಲೂಕುಗಳಲ್ಲಿ ಮೆರವಣಿಗೆ ಬಹಿರಂಗ ಸಭೆಗಳನ್ನು ನಡೆಸಲು ತೀರ್ಮಾನಿಸಲಾಯಿತು. ಶಿರುಗುಪ್ಪ, ಮೊಳಕಾಲ್ಮೂರು ತಾಲೂಕುಗಳಲ್ಲಿ ಭೂಮಿ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಲಾಯಿತೆಂದು ಪತ್ರಿಕಾ ಹೇಳಿಕೆ ತಿಳಿಸಿದೆ.

ತಿಮ್ಮಣ್ಣ ದೊಡ್ಡಮನಿಯವರ ನಿಧನ

ಸಿ.ಐ.ಟಿ.ಯು. ಸಂತಾಪ

ಹಿಂದುಳಿದ ಬಡಕುಟುಂಬದಲ್ಲಿ ಜನಿಸಿ ಗುಲ್ಬರ್ಗ ಎಂ.ಎಸ್.ಕೆ. ಮಿಲ್ಲಿನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಮುಖಂಡರಾದ ತಿಮ್ಮಣ್ಣ ದೊಡ್ಡಮನಿಯವರು ದಿನಾಂಕ 22 ಸೆಪ್ಟೆಂಬರ್ 1993 ರಂದು ಮಧ್ಯರಾತ್ರಿಯಲ್ಲಿ ಆಕಸ್ಮಿಕವಾಗಿ ಮರಣಹೊಂದಿದ್ದಾರೆ. ಎಂ.ಎಸ್.ಕೆ. ಮಿಲ್ಲಿನ ಕಾರ್ಮಿಕರನ್ನು ಸಿಐಟಿಯು ಸಂಘಟನೆಯ ನೇತೃತ್ವದಲ್ಲಿ ಹಲವಾರು ಹೋರಾಟಗಳನ್ನು ನಡೆಸಿ ಗುಲ್ಬರ್ಗ ಜಿಲ್ಲೆಯಲ್ಲಿ ಸಿಐಟಿಯುವಿನ ಪ್ರಭಾವ ಬೆಳೆದು ಬರುವಂತೆ ತಿಮ್ಮಣ್ಣ ನಿರಂತರ ದುಡಿದಿದ್ದಾರೆ. ಅವರು ಸಿಐಟಿಯು ರಾಜ್ಯ ಮಂಡಳಿ ಸದಸ್ಯರಾಗಿ ರಾಜ್ಯ ಸಂಘಟನೆಗೆ ಸಹಾಯ ಮಾಡಿದ್ದಾರೆ. ಸಿಐಟಿಯು ರಾಜ್ಯ ಸಮಿತಿಯು ಅಪಾರ ಸಂತಾಪ ಸೂಚಿಸುತ್ತದೆ. ಅವರ ಹೆಂಡತಿ ಮತ್ತು ಮಕ್ಕಳ ದುಃಖದಲ್ಲಿ ಪಾಲ್ಗೊಳ್ಳುತ್ತದೆ.

ಸಿಪಿಐ(ಎಂ)ನ ಸಂತಾಪ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಗುಲ್ಬರ್ಗಾ ಜಿಲ್ಲಾ ಸಮಿತಿ ಸದಸ್ಯರಾದ, ಹಲವಾರು ವರ್ಷಗಳಿಂದ ಗುಲ್ಬರ್ಗ ಜಿಲ್ಲೆಯಲ್ಲಿ ಪಕ್ಷ ಮತ್ತು ಕಾರ್ಮಿಕ ಸಂಘಟನೆಗಳನ್ನು ಬೆಳೆಸಲು ನಿಷ್ಠೆಯಿಂದ ದುಡಿಯುತ್ತಿದ್ದ ತಿಮ್ಮಣ್ಣ ದೊಡ್ಡಮನಿಯವರು ಅವರ ಅಗಲಿಕೆಗೆ ಸಿಪಿಐ(ಎಂ) ರಾಜ್ಯ ಸಮಿತಿ ತನ್ನ ಅತೀವ ದುಃಖವನ್ನು ವ್ಯಕ್ತಪಡಿಸಿದೆ.

ಐಕ್ಯರಂಗದ ಸಂತಾಪ

ಪಕ್ಷದ, ಸಿಐಟಿಯು ಸಂಘಟನೆಗಳನ್ನು ಕಟ್ಟಿ ಬೆಳೆಸಿದ ಗುಲ್ಬರ್ಗಾದ ಕಾರ್ಮಿಕ ಮುಖಂಡರಾದ ಕಾಂ. ತಿಮ್ಮಣ್ಣಾ ದೊಡ್ಡಮನಿಯವರ ನಿಧನಕ್ಕೆ 'ಐಕ್ಯರಂಗ'ವು ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಇವರು ಐಕ್ಯರಂಗದ ಏಜೆಂಟರಾಗಿ ಪಕ್ಷದ ಸಂದೇಶವನ್ನು ಜನರಿಗೆ ಮುಟ್ಟಿಸುವಲ್ಲಿಯೂ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಕುಟುಂಬದ ದುಃಖದಲ್ಲಿ ಐಕ್ಯರಂಗವೂ ಭಾಗಿಯಾಗಿರುತ್ತದೆ.

ಡಿ.ವೈ.ಎಫ್.ಐ ಸಂತಾಪ

ಪಕ್ಷದ ಸಂಗಾತಿ ಕಾಂ. ತಿಮ್ಮಣ್ಣಾ ದೊಡ್ಡಮನಿಯವರ ನಿಧನಕ್ಕೆ ಡಿ.ವೈ.ಎಫ್.ಐ ರಾಜ್ಯ ಸಮಿತಿಯು ತನ್ನ ಅತೀವ ದುಃಖ ವ್ಯಕ್ತಪಡಿಸಿ, ಸಂತಾಪ ಸೂಚಿಸಿದೆ. ದುಡಿಯುವ ವರ್ಗದ ಚಳುವಳಿಗೆ ಆ ಮೂಲಕ ಪ್ರಜಾಸತ್ತಾತ್ಮಕ ಚಳುವಳಿಗೆ ಅವರ ಶ್ರಮ ಸ್ಮರಣೀಯ, ಸ್ಫೂರ್ತಿದಾಯಕವೆಂದು ಡಿ.ವೈ.ಎಫ್.ಐ ರಾಜ್ಯ ಸಮಿತಿ ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ಸಂದೇಶದಲ್ಲಿ ತಿಳಿಸಿದ್ದಾರೆ.

ಎಸ್.ಎಫ್.ಐ ಸಂತಾಪ

ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಸಿಐಟಿಯು ಸಂಘಟನೆಯಲ್ಲಿ ದುಡಿಯುತ್ತಿದ್ದ ಸಂಗಾತಿ ತಿಮ್ಮಣ್ಣ ದೊಡ್ಡಮನಿಯವರ ಅಕಾಲಿಕ ನಿಧನಕ್ಕೆ ಎಸ್.ಎಫ್.ಐ. ರಾಜ್ಯ ಸಮಿತಿ ತನ್ನ ಅತೀವ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಮೃತರ ಕುಟುಂಬ ತಿಮ್ಮಣ್ಣ ದೊಡ್ಡಮನಿಯವರ ನಿಧನದಿಂದ ಉಂಟಾಗಿರುವ ಆಘಾತದಿಂದ ಶೀಘ್ರವಾಗಿ ಚೇತರಿಸಿಕೊಳ್ಳಲೆಂದು ಎಸ್.ಎಫ್.ಐ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿಯವರು ತಮ್ಮ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.

ಪ್ರಾಂತ ರೈತ ಸಂಘದ ಗ್ರಾಮ ಘಟಕಗಳು

ಕರ್ನಾಟಕ ಪ್ರಾಂತ ರೈತ ಸಂಘದ ಚಿಂಚೋಳಿ ತಾಲೂಕು ಸಮಿತಿಯು ಇತ್ತೀಚೆಗೆ ಸದಸ್ಯತ್ವದ ಪ್ರಚಾರ ನಡೆಸಿ ಸುಮಾರು 25 ಗ್ರಾಮ ಘಟಕಗಳನ್ನು ರಚಿಸಿದ್ದಾರೆಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಪಕ್ಷದಿಂದ ಉಚ್ಚಾಟನೆ

ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯ ಸದಸ್ಯರಾದ ಟಿ.ಎಸ್. ಅನಂತರಾಮ್‌ರವರನ್ನು ಸಸ್ಪೆಂಡ್ ಮಾಡಲಾಗಿತ್ತು. ಅವರನ್ನು ಈಗ ಪಕ್ಷದಿಂದ ಹೊರಗೆ ಹಾಕಲಾಗಿದೆ ಎಂದು ಪಕ್ಷದ ರಾಜ್ಯ ಸಮಿತಿಯು ಪ್ರಕಟಣೆ ಹೊರಡಿಸಿದೆ.

ಕೋಟ್ಯಂತರ ಜನ ಸಾಮಾನ್ಯರನ್ನು ಪ್ರತಿನಿಧಿಸುವ ಸಾಮೂಹಿಕ ಸಂಘಟನೆಗಳು ನೀಡಿದ 'ಬಾರತ್ ಬಂದ್' ಕರೆಯನ್ನು ಆಳುವ ಕಾಂಗ್ರೆಸ್(ಐ)ನೊಂದಿಗೆ ಪ್ರಮುಖ ವಿರೋಧ ಪಕ್ಷವೆಂದುಕೊಳ್ಳುವ ಬಿಜೆಪಿಯೂ ವಿರೋಧಿಸಿತು. ಕುತೂಹಲದ ಸಂಗತಿಯೆಂದರೆ ಎರಡೂ ಪಕ್ಷಗಳೂ ತಮ್ಮ ವಿರೋಧಕ್ಕೆ ನೀಡಿದ ಕಾರಣ ಒಂದೇ. ಏಕೆ ಹೀಗೆ? ಗಾಂಧೀಜಿಯ "ಸ್ವದೇಶಿ"ಗೆ ಕಾಂಗ್ರೆಸ್ ತಿಲಾಂಜಲಿ ನೀಡಿತು. ಆರ್.ಎಸ್.ಎಸ್.- ಬಿಜೆಪಿ ಹೊಸದಾಗಿ ಆರಂಭಿಸಿದ "ಸ್ವದೇಶಿ" ತಮಾಷೆಯ ಗತಿಯೇನಾಯಿತು? - ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಪ್ರಕಾಶ್ ಕಾರಟ್ ಇತ್ತ ಗಮನ ಸೆಳೆದಿದ್ದಾರೆ. ಬಿಜೆಪಿಯ ಗೋಸುಂಬೆತನವನ್ನು ಬಯಲಿಗೆಳೆದಿದ್ದಾರೆ.

ಕಾಂಗ್ರೆಸ್ ಮತ್ತು ಬಿಜೆಪಿ : ಉದಾರೀಕರಣದ ಅವಳಿ-ಜವಳಿಗಳು

-- ಪ್ರಕಾಶ್ ಕಾರಟ್

ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ನೀಡಿದ ಹಾಗೂ ಎಡಪಕ್ಷಗಳು, ರಾಷ್ಟ್ರೀಯ ರಂಗದ ಪಕ್ಷಗಳು ಬೆಂಬಲಿಸಿದ ಬಂದ್ ಕರೆಗೆ ಕಾಂಗ್ರೆಸ್(ಐ) ಮತ್ತು ಬಿಜೆಪಿ ಎರಡೂ ವಿರೋಧ ವ್ಯಕ್ತಪಡಿಸಿವೆ. ಕುತೂಹಲಕಾರಿಯಾದ ಸಂಗತಿಯೆಂದರೆ ಎರಡೂ ಪಕ್ಷಗಳೂ ತಮ್ಮ ವಿರೋಧಕ್ಕೆ ಕೊಟ್ಟ ಕಾರಣ ಒಂದೇ.

ಕಾಂಗ್ರೆಸ್(ಐ) ವಕ್ತಾರ ವಿ.ಎನ್. ಗಾಡ್ಗೀಳ್ ಇದು ರಾಜಕೀಯ ಉದ್ದೇಶದ್ದು ಎಂದು ಹೇಳುತ್ತಾ ಪಶ್ಚಿಮಬಂಗಾಳದಲ್ಲಿ ಬಹಳಷ್ಟು ಕಾರ್ಖಾನೆಗಳು ಖಾಸಗೀಕರಣಗೊಂಡಿವೆ. ಕಾರ್ಮಿಕರ ರಿಟ್ರೆಂಚ್‌ಮೆಂಟ್ ಆಗಿವೆಯಾದರೂ ಎಡರಂಗ ಕೇಂದ್ರ ಸರಕಾರದ ಆರ್ಥಿಕ ನೀತಿಗಳನ್ನು ಬಯಲಿಗೆಳೆಯುತ್ತೇನೆಂದು ಸೊಕ್ಕು ತೋರಿದೆ ಎಂದರು.

ಅತ್ತ ಬಿಜೆಪಿ ಮುಖಂಡ ಕೆ.ಎಲ್. ಶರ್ಮಾ ಕೂಡಾ ಇದು ಅಸಮರ್ಥನೀಯ ಕ್ರಮ, ಸಿಪಿಐ(ಎಂ) ದೇಶದ ಇತರೆಡೆ ವಿರೋಧಿಸುವುದನ್ನು ಪಶ್ಚಿಮಬಂಗಾಳದಲ್ಲಿ ತಾನೇ ಮಾಡುತ್ತಿದೆ ಎಂದು ಆಪಾದಿಸಿದ್ದಾರೆ.

ಇವರೆಡೂ ಪಕ್ಷಗಳ ಇಂತಹ ಟೀಕೆಗಳಿಗೆ ಆಶ್ಚರ್ಯಪಡಬೇಕಿಲ್ಲ. ಏಕೆಂದರೆ ಎರಡೂ ಪಕ್ಷಗಳು ಖಾಸಗೀಕರಣ ಉದಾರೀಕರಣದ ಆರಾಧಕರು. ಜನಗಳ ಸಿಟ್ಟನ್ನು ಎದುರಿಸಲಾಗದ ಆ ಪಕ್ಷಗಳು ಜನಗಳನ್ನು ಈ ರೀತಿ ಗೊಂದಲಕ್ಕೆ ಸಿಕ್ಕಿಸುವುದಲ್ಲದೆ ಬೇರೇನು ಮಾಡಿಯಾರು? ಈ ಎರಡೂ ಪಕ್ಷಗಳ ಇನ್ನೊಂದು ಉದ್ದೇಶವೆಂದರೆ ಬಂದ್ ಕರೆ ನೀಡಿದ್ದು ಕೋಟಿಗಟ್ಟಲೆ ಜನರನ್ನು ಪ್ರತಿನಿಧಿಸುವ ಹತ್ತಾರು ಸಾಮೂಹಿಕ ಸಂಘಟನೆಗಳಲ್ಲ ಸಿಪಿಐ(ಎಂ) ಮಾತ್ರ ಎಂಬಂತೆ ಜನ ನಂಬುವಂತೆ ಮಾಡುವುದು.

ಈ ಎರಡೂ ಪಕ್ಷಗಳ ಹೇಳಿಕೆಗಳಲ್ಲಿನ ಸುಳ್ಳು ಆ ಹೇಳಿಕೆಗಳನ್ನು ನೀಡಿದ ದಿನವೇ ಬಯಲಾಯಿತು ಕೂಡಾ. ಏಕೆಂದರೆ ಅಂದೇ ಸೆಪ್ಟೆಂಬರ್ 7 ರಂದು ಪಶ್ಚಿಮಬಂಗಾಳದ ಬರ್ನ್‌ಪುರದಲ್ಲಿ ಇರುವ ಇಸ್ಕೋ ಉಕ್ಕು ಕಾರ್ಖಾನೆಯ ಖಾಸಗೀಕರಣವನ್ನು ವಿರೋಧಿಸಿ ದೊಡ್ಡ ಮುಷ್ಕರ ನಡೆಯಿತು. ಉಕ್ಕು ರಂಗದಲ್ಲಿರುವ ಎಲ್ಲಾ ಕಾರ್ಮಿಕ ಪಕ್ಷಗಳು ಉದಾರೀಕರಣದ ಅವಳಿ- ಜವಳಿಗಳಾದ ಕಾಂಗ್ರೆಸ್(ಐ) ನೇತೃತ್ವದ ಇಂಟಕ್, ಬಿಜೆಪಿ ನೇತೃತ್ವದ ಬಿಎಂಎಸ್ ಕೂಡಾ ಈ ಮುಷ್ಕರದಲ್ಲಿ ಭಾಗವಹಿಸಿದ್ದವು.

ಪಶ್ಚಿಮಬಂಗಾಳದಲ್ಲಿ ಕಾರ್ಖಾನೆಗಳನ್ನು ಮುಚ್ಚುತ್ತಿರುವುದು ಕೇಂದ್ರ ಸರಕಾರದ ನೀತಿಗಳು, ಆ ಕಾರ್ಖಾನೆಗಳ ಪುನರುಜ್ಜೀವನಕ್ಕಾಗಿ ಸಾಲ ನೀಡುವ ಸಂಸ್ಥೆಗಳು ಸಾಲ ನೀಡದಂತೆ ಮಾಡಿದ್ದು ಸರಕಾರದ ನೀತಿಗಳೇ ಹೊರತು ನಮ್ಮ ಸಂವಿಧಾನದಲ್ಲಿ ಸೀಮಿತ ಅಧಿಕಾರಗಳಿರುವ ರಾಜ್ಯ ಸರಕಾರವಲ್ಲ. ರಾಜ್ಯ ಸರಕಾರ ಈ ನೀತಿಗಳನ್ನು ಜನರ ನಡುವೆ ಪ್ರಚಾರ ಮಾಡಬಹುದಷ್ಟೇ. ತದ್ವಿರುದ್ಧವಾಗಿ ಹಿಂದೆ ಬಿಜೆಪಿ ಆಳ್ವಿಕೆಯಿದ್ದ ನಾಲ್ಕು ರಾಜ್ಯಗಳಲ್ಲಿ ಖಾಸಗೀಕರಣವನ್ನು ಅತ್ಯುತ್ಸಾಹದಿಂದ ಆಲಂಗಿಸಿಕೊಳ್ಳಲಾಯಿತು. ಆದ್ದರಿಂದ ಪಶ್ಚಿಮಬಂಗಾಳದ ಎಡರಂಗ ಸರ್ಕಾರದ ಇಂತಹ ನೀತಿಗಳನ್ನು ಬೆಂಬಲಿಸುತ್ತದೆ, ಪ್ರತಿಪಾದಿಸುತ್ತದೆ ಎಂದು ಗಾಡ್ಗೀಳ್ ಹಾಗೂ ಶರ್ಮಾರನ್ನೂ ಜನ ನಂಬುತ್ತಾರೆಂದು ನಿರೀಕ್ಷಿಸುವುದು ಮೂರ್ಖತನ. ವಾಸ್ತವವಾಗಿ ಐ.ಎಂ.ಎಫ್. -ವಿಶ್ವಬ್ಯಾಂಕ್ ಶರತ್ತುಗಳ ಅಗತ್ಯವಿಲ್ಲದ ಪರ್ಯಾಯ ಆರ್ಥಿಕ ಧೋರಣೆಯನ್ನು ಪಶ್ಚಿಮಬಂಗಾಳದ ಎಡರಂಗ ಆರಂಭದಲ್ಲೇ ನೀಡಿತ್ತು ಎಂದು ಜನಗಳಿಗೆ ತಿಳಿದಿದೆ.


ಕಾಂಗ್ರೆಸ್(ಐ) ಮು...
ವಿರೋಧಿಸಿದರೂ ಭಾರತ...
ದ್ಯಂತ ದೊಡ್ಡ ಯಶಸ್ಸು ...
ಬಂಗಾಳದಲ್ಲಂತೂ ಭಾರಿ...
ಯಿತು. ಕಾಂಗ್ರೆಸ್(ಐ) ...
ಮಾಡಿದರೂ ಎಡ- ಜಾತ...
ತ್ವದ ಆಂದೋಲನ ಮುಂ...
ಹೂಡಿಸಿಕೊಳ್ಳುತ್ತದೆ.

"ಸ್ವದೇಶಿ" ಯೆಂಬ...

ಆರ್ಥಿಕ ನೀತಿಗಳ...
ಪಿಯ ಗೋಸುಂಬೆತನ ಬ...
ಘಟನೆಯೂ ನಡೆದಿದೆ. "...
ಎಂಬ ಹೆಸರಲ್ಲಿ 'ಸ್ವದೇಶಿ...
ಎಂಬ ಸಂಘಟನೆ ಏರ್ಪಡಿ...
ಮುರಳಿ ಮನೋಹರ ಜೋ...
ರಾಷ್ಟ್ರೀಯ ಕಂಪೆನಿಗಳ ...
ಅವಕ್ಕೆ ಅನುಮತಿ ನೀಡಿ...
ವನ್ನು ತರಾಟೆಗೆ ತೆಗೆದುಕೊ...
ಒಂದು ತಿಂಗಳ ಹಿಂದೆ ವಾ...
ಒಂದು ಪ್ರಭಾವಶಾಲೀ ಗು...
ಉದಾರೀಕರಣಕ್ಕೆ ವಿರೋ...
ಸನೆ ನೀಡಿದ್ದರು!

ಕಳೆದ ವರ್ಷ ಆರಂ...
ಸದ್ದು-ಗದ್ದಲದೊಂದಿಗೆ ಸ್ವ...
ಆರಂಭಿಸಿರುವುದಾಗಿ ಹೇ...
ಕಂಪೆನಿಗಳು ತಯಾರಿಸಿದ...
ರಕ್ಕೆ ಕರೆ ನೀಡಿತು. ಭ...
ರರು ಖರೀದಿಸಬಹುದಾ...
ಗಳ ಹಾಗೂ ಬಹಿಷ್ಕರಿಸಬ...

ಕೃಪೆ: ಟೈಮ್ಸ್ ಆಫ್ ಇಂಡಿಯಾ



ಮತ್ತೆ ಬಿಜೆಪಿ ಮುಂಖಡರ ಯಾತ್ರೆಗಳು ಆರಂಭವಾಗಿವೆ--ಒಂದಲ್ಲ, ಒಂದೇ ಬಾರಿಗೆ ನಾಲ್ಕು. ಏಕೆ ಮತ್ತೆ ಈ ಯಾತ್ರೆಗಳು ಎಂಬ ಮುಗ್ಧ ಪ್ರಶ್ನೆಯನ್ನು ಈಗ ಯಾರೂ ಕೇಳುತ್ತಿಲ್ಲ. ಏಕೆಂದರೆ ನಾಲ್ಕು ರಾಜ್ಯ ವಿಧಾನಸಭೆಗಳ ಚುನಾವಣೆಗಳು ಸದ್ಯದಲ್ಲೇ ನಡೆಯದೇಕಾಗಿದೆಯಲ್ಲ! ಬಿಜೆಪಿಯ ಈ ಹೊಸ ಯಾತ್ರೆಗಳ ಘೋಷಿತ ಉದ್ದೇಶವೇನು ಎಂಬ ಪ್ರಶ್ನೆ ಮಾತ್ರ ಸಹಜವಾಗಿಯೇ ಬರುತ್ತದೆ. ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಿಸುವ ಮಸೂದೆಗಳು ರಾಜಕೀಯದಲ್ಲಿ ಅಧರ್ಮ ತುಂಬುತ್ತವೆ ಎಂದು ಜನಗಳಲ್ಲಿ ಗೊಂದಲ ಹುಟ್ಟಿಸುವುದೇ ಉದ್ದೇಶ. ನಿಜ, ಚುನಾವಣೆಯೆಂದರೆ ಈ ಪಕ್ಷಕ್ಕೆ ಧರ್ಮದ ನೆನಪಾಗುತ್ತದೆ. ಏಕೆಂದರೆ ಬಿಜೆಪಿಗೆ ರಾಜಕೀಯ ಅಧಿಕಾರ ನೀಡುವುದೇ ಎಲ್ಲರ ಧರ್ಮ! ಈ ಬಗ್ಗೆ ಬಿಜೆಪಿ ಯಾವ ರೀತಿ ಗೊಂದಲ ಹುಟ್ಟಿಸಲು ಪ್ರಯತ್ನಿಸುತ್ತಿದೆ? ಕಾಂಗ್ರೆ ಈ ಮಸೂದೆಗಳನ್ನು ಅವಸರದಲ್ಲಿ ತಂದು ಈಗ ಹಿಂದೇಟು ಹಾಕುತ್ತಿದ್ದರೂ ಸಿಪಿಐ(ಎಂ) ಏಕೆ ಆ ಮಸೂದೆಗಳನ್ನು ಬೆಂಬಲಿಸುತ್ತಿದೆ?-ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಎಸ್.ರಾಮಚಂದ್ರನ್ ಪಿಳ್ಳೈ ಈ ಇಲ್ಲಿ ವಿವರಿಸಿದ್ದಾರೆ.

ಜಾತ್ಯಾತೀತ ನೀತಿಗೆ ಚ್ಯುತಿ ಬಂದರೆ ಜನಗಳ ಜೀವನಕ್ಕೇ ಚ್ಯುತಿ

-- ರಾಮಚಂದ್ರನ್ ಪಿಳ್ಳೈ

ಸೆಪ್ಟೆಂಬರ್ 11 ರಂದು ದೇಶದ ವಿವಿದೆಡೆ ಆರಂಭವಾಗಿ ಸೆಪ್ಟೆಂಬರ್ 29 ರಂದು ಭೂಪಾಲದಲ್ಲಿ ಕೊನೆಗೊಳ್ಳುವ ಬಿಜೆಪಿ ಜಾಥಾಗಳ ಉದ್ದೇಶವೇನು ಎಂಬ ಬಗ್ಗೆ ಈಗ ಅತ್ಯಂತ ಮುಗ್ಧರನ್ನು ಮೋಸಮಾಡಲು ಸಾಧ್ಯವಿಲ್ಲ. ನಾಲ್ಕು ರಾಜ್ಯಗಳಲ್ಲಿನ ಚುನಾವಣೆಗಳು ಮುಗಿಯುವವರೆಗೆ ಬಹುಸಂಖ್ಯಾಕ ಕೋಮಿನ ಭಾವನೆಗಳನ್ನು ಉದ್ರೇಕಿಸಿ ಅದರ ಬೇಗೆ ಉಳಿಯುವಂತೆ ಮಾಡಬೇಕಾಗಿದೆ. ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವ ಮಸೂದೆಯ ಬಗ್ಗೆ ಆ ಪಕ್ಷದ ಸಿಟ್ಟನ್ನು ಅರ್ಥಮಾಡಿಕೊಳ್ಳಬಹುದು. ಈ ಮಸೂದೆ ಶಾಸನವಾಗಿ ಅದನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ಈ ರೀತಿ ಭಾವೋದ್ರೇಕ ಎಬ್ಬಿಸಲು ಧರ್ಮವನ್ನು ಚುನಾವಣಾ ಲಾಭಕ್ಕೆ ಬಳಸಲು ಬಿಜೆಪಿಯಂತಹ ಕೋಮುವಾದಿ ಪಕ್ಷಗಳಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಈ ಮಸೂದೆಗಳ ಬಗ್ಗೆ ಜನಗಳಲ್ಲಿ ಗೊಂದಲವುಂಟುಮಾಡಿ ಕೋಮು ಭಾವೋದ್ರೇಕ ಹಬ್ಬಿಸಲೆಂದೇ ಈ ಜಾಥಾಗಳು.

ಈ ಮಸೂದೆಗಳ ಬಗ್ಗೆ ಬಿಜೆಪಿಯ ಆಕ್ಷೇಪಗಳು ಎರಡು. ಮೊದಲನೆಯದ್ದು ಈ ಮಸೂದೆಯ ಅಂಶಗಳು ಪ್ರಜಾಪ್ರಭುತ್ವ ವಿರೋಧಿ. ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವ ಹೆಸರಲ್ಲಿ ಪ್ರಜಾಪ್ರಭುತ್ವದ ಕತ್ತು ಹಿಸುಕಲಾಗುತ್ತದೆ. ಅವರ ಎರಡನೇ ಪ್ರಮುಖ ಆಕ್ಷೇಪ- ಚುನಾವಣೆಯ ಮೊದಲೇ ಅಭ್ಯರ್ಥಿಗಳನ್ನು ಅನರ್ಹಗೊಳಿಸುವ ಅಂಶದ ಉದ್ದೇಶ ಬಿಜೆಪಿ ಅಭ್ಯರ್ಥಿಗಳನ್ನು ಸಾರಾಸಗಟಾಗಿ ಅನರ್ಹಗೊಳಿಸಿ ಕಾಂಗ್ರೆಸ್(ಐ)ಗೆ ಸುಲಭ ವಿಜಯ ಗಿಟ್ಟಿಸುವುದು.

ಬಿಜೆಪಿಯ ಈ ಆಕ್ಷೇಪಗಳ ಸತ್ಯಾಸತ್ಯತೆಯ ಬಗ್ಗೆ ಚರ್ಚಿಸುವ ಮೊದಲು ಸಿಪಿಐ(ಎಂ) ಈ ಮಸೂದೆಗಳನ್ನು ಏಕೆ ಬೆಂಬಲಿಸಿದೆ ಎಂದು ಹೇಳಬಯಸುತ್ತೇವೆ. ನಾವು ಈ ಮಸೂದೆಗಳನ್ನು ಬೆಂಬಲಿಸುತ್ತೇವೆ ಎಂದರೆ ಅವುಗಳಲ್ಲಿ ದೋಷಗಳಿಲ್ಲ ಎಂಬರ್ಥವಲ್ಲ. ದೋಷಗಳನ್ನು ನಿವಾರಿಸಲೇಬೇಕು. ಸಂಸತ್ತು ಇವನ್ನು ಶಾಸನಗಳಾಗಿ ಮಾಡಿದರೂ ಅದನ್ನು ಜ್ಯಾರಿಗೆ ತರುವ ದೃಢ ನಿರ್ಧಾರವಿಲ್ಲದಿದ್ದರೂ ಏನೂ ಉಪಯೋಗವಿಲ್ಲ. ಕೇವಲ ಕಾನೂನಿನಿಂದಲೇ ರಾಜಕೀಯದಲ್ಲಿ ಧರ್ಮವನ್ನು ಬಳಸುವ ಪಿಡುಗನ್ನು ನಿವಾರಿಸಲು ಸಾಧ್ಯವಿಲ್ಲ. ಎಲ್ಲಕ್ಕೂ ಮಿಗಿಲಾಗಿ ಈ ಹೋರಾಟದ ಯಶಸ್ಸು ಜನಗಳ ಪ್ರಜ್ಞೆಯನ್ನು ಅವಲಂಬಿಸಿದೆ. ಕೋಮುವಾದೀ ಸವಾಲನ್ನು ಎದುರಿಸಲು ಅವರನ್ನು ಎಷ್ಟರಮಟ್ಟಿಗೆ ಜಾಗೃತಗೊಳಿಸಲಾಗಿದೆ ಎಂಬುದರ ಮೇಲೆ ಅವಲಂಬಿಸಿದೆ.

ಭಾರತದಂತಹ ಸುಮಾರಾಗಿ ಜಗತ್ತಿನ ಎಲ್ಲಾ

ಸಿ.ಪಿ.ಐ(ಎಂ) ಬೆಂಬಲ ಏಕೆ?

ಧರ್ಮಗಳ ಅನುಯಾಯಿಗಳು ಇರುವ ದೇಶದಲ್ಲಿ ಒಂದು ಧರ್ಮದ ಜನ ಇನ್ನೊಂದರ ಮೇಲೆ ಪ್ರಾಬಲ್ಯ ಹೇರುವ ಪ್ರಯತ್ನ ನಡೆಸಿದರೆ ಇತರ ಧರ್ಮಗಳ ಜನರಲ್ಲಿ ಅಭದ್ರತೆಯ ಭಾವನೆ ಬೆಳೆದು ಅವರೂ ಅಂತಹುದೇ ತಂತ್ರ ಬಳಸಿ ಪ್ರತಿಕ್ರಿಯಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಕೋಮುದಂಗೆಗಳಾಗುವುದು ಸಹಜ. ಭಾರತದಲ್ಲೀಗ ಅದೇ ನಡೆಯುತ್ತಿರುವುದು.

ಆದ್ದರಿಂದ ದೇಶದ, ಜನರ ಐಕ್ಯತೆ ಕಾಪಾಡಬೇಕಾದರೆ ಧರ್ಮವನ್ನು ಪ್ರಭುತ್ವದಿಂದ ಪ್ರತ್ಯೇಕಿಸುವುದು ಅತ್ಯಗತ್ಯ. ಪ್ರಭುತ್ವ ಅಥವಾ ಸರಕಾರ ಮನುಷ್ಯ-ಮನುಷ್ಯ ನಡುವಿನ ಸಂಬಂಧಗಳ ಬಗ್ಗೆ ಯೋಚಿಸಬೇಕಷ್ಟೇ ಹೊರತು ಮನುಷ್ಯ ಮತ್ತು ದೇವರ ನಡುವಿನ ಸಂಬಂಧಗಳ ಬಗ್ಗೆ ಅಲ್ಲ. ಇದು ಒಂದು ಜಾತ್ಯಾತೀತ ಪ್ರಭುತ್ವದ ಮೂಲಭೂತ ಅಂಶ. ಮನುಷ್ಯ ಮತ್ತು ದೇವರ ನಡುವಿನ ಸಂಬಂಧಗಳ ಬಗ್ಗೆ ಯೋಚಿಸುವುದು ಧರ್ಮದ ಕ್ಷೇತ್ರಕ್ಕೆ ಸೇರಿದ್ದು. ಇವರೆಡನ್ನು ಬೆರೆಸುವುದು, ಸರಿಯಲ್ಲ ಅನಗತ್ಯ. ಇದರರ್ಥ ಪ್ರಭುತ್ವ ಅಥವಾ ಸರಕಾರ ಧರ್ಮ- ವಿರೋಧಿಯಾಗಬೇಕೆಂದಲ್ಲ. ಪ್ರತಿಯೊಬ್ಬ ನಾಗರಿಕನಿಗೂ ತಾನು ನಂಬುವ ಧರ್ಮವನ್ನು ಆಚರಿಸುವ ಹಕ್ಕು ಇರಬೇಕು. ಯಾರಾದರೂ ಯಾವುದೇ ಧರ್ಮವನ್ನು ತಾನು ನಂಬುವುದಿಲ್ಲ ಎಂದರೆ ಅವರ ಆ ಹಕ್ಕನ್ನೂ ರಕ್ಷಿಸಬೇಕು. ಇದು ಜಾತ್ಯಾತೀತ ಪ್ರಭುತ್ವದ ಕರ್ತವ್ಯ.

ನಾವು ಹಲವು ಬಾರಿ ಹೇಳಿರುವಂತೆ ಚಾರಿತ್ರಿಕ ಕಾರಣಗಳಿಂದಾಗಿ ಈಗಲೂ ಭಾರತೀಯ ಸಮಾಜ ಒಂದೆಡೆ ಗುತ್ತೇದಾರಿ ಬಂಡವಾಳ ಶಾಹಿಯ ಪ್ರಾಬಲ್ಯ ಇರುವ, ಇನ್ನೊಂದೆಡೆ ಜಾತಿ, ಕೋಮು, ಬುಡಕಟ್ಟು ಸಂಸ್ಥೆಗಳು ಜೀವಂತವಾಗಿರುವ ಒಂದು ವಿಚಿತ್ರ ಮಿಶ್ರಣ. ಇತ್ತೀಚೆಗೆ ಈ ಅಂಶಗಳನ್ನು ತಮ್ಮ ಲಾಭಕ್ಕಾಗಿ ಬಳಸಲು ಪ್ರತಿಗಾಮಿ ಪಟ್ಟಭದ್ರ ಹಿತಾಸಕ್ತಿಗಳು ಉದ್ದೇಶಪೂರ್ವಕವಾಗಿ ಪ್ರಯತ್ನಿಸಿದ್ದಾರೆ. ಇಂತಹ ಸನ್ನಿವೇಶದಲ್ಲಿ ಕೆಲವರಿಗೆ ಧರ್ಮವನ್ನು ಸಂಕುಚಿತ ಚುನಾವಣಾ ಲಾಭಕ್ಕಾಗಿ ಬಳಸುವ ಚಪಲ ಹತ್ತಿಕೊಂಡಿದೆ. ಇತರ ಕೆಲವರು ಇದನ್ನು ಕಂಡು ತಾವೂ ಸ್ಪರ್ಧೆಗಿಳಿದಿದ್ದಾರೆ. ಇವೆಲ್ಲದರ ಫಲವಾಗಿ ಇಡೀ ವಾತಾವರಣವೇ ಕಲುಷಿತಗೊಂಡಿದೆ. ಜನಗಳ, ಅವರ ಆಂದೋಲನಗಳ ಐಕ್ಯತೆಗೆ ಅಪಾಯ ಬಂದಿದೆ.

ಇದನ್ನು ಬಹಳ ವರ್ಷಗಳ ಹಿಂದೆಯೇ ನಮ್ಮ ಪಕ್ಷ ಮನಗಂಡಿತ್ತು. ಪಕ್ಷದ ಕಾರ್ಯಕ್ರಮ ಈ ಬಗ್ಗೆ ಹೇಳಿರುವ ಸ್ಪಷ್ಟ ನುಡಿಗಳನ್ನು ನೋಡಿ-

"ಹಿರಿಬೂರ್ಜ್ವಾ ಮುಖಂಡತ್ವ ನಮ್ಮದು ಒಂದು ಜಾತ್ಯಾತೀತ ಪ್ರಜಾಪ್ರಭುತ್ವ, ಅದರೊಳಗೆ ಧಾರ್ಮಿಕ, ಮತಾಂಧ ನೀತಿಗಳನ್ನು ಆಮದು ಮಾಡುವುದನ್ನು ವಿರೋ-ಧಿಸುತ್ತದೆ ಎಂದು ದೊಡ್ಡದಾಗಿ ಘೋಷಿಸಿತ್ತು. ಆದರೆ ಸತ್ಯ ಸಂಗತಿಯೆಂದರೆ ಬೂರ್ಜ್ವಾ ವರ್ಗ ಜಾತ್ಯಾತೀತ--ವಿರೋಧಿ ಪ್ರವೃತ್ತಿಗಳನ್ನು ಎದುರಿಸಿಲ್ಲ ಮಾತ್ರವಲ್ಲ, ಅವು-ಗಳಿಗೆ ರಿಯಾಯ್ತಿ ನೀಡಿ ಅವನ್ನು ಬಲಪಡಿಸಿದೆ. ಬೂರ್ಜ್ವಾ ಮುಖಂಡರು ಒಂದು ಸತತವಾದ ಜಾತ್ಯಾತೀತ ನಿಲುವು ತಳೆಯುವುದಿಲ್ಲ. ಬದಲಾಗಿ ಅವರೇ ಸ್ವತಃ ಮತಾಂಧತೆಗೆ ಬಲಿಯಾಗುತ್ತಾರೆ. ಜಾತ್ಯಾತೀತತೆಯ ಇಡೀ ಪರಿಕಲ್ಪನೆ-ಯನ್ನೇ ವಿಕೃತಗೊಳಿಸುತ್ತಾರೆ. ಜಾತ್ಯಾತೀತೆಯಿಂದ ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಿಸುವ ಬದಲು ಎಲ್ಲಾ ಧರ್ಮಗಳೂ ಜನಗಳ ರಾಜಕೀಯ ಜೀವನದಲ್ಲಿ ಮೂಗು-ತೂರಿಸುವ ಸಮಾನ ಸ್ವಾತಂತ್ರ್ಯ ಎಂದು ಜನ ನಂಬಬೇಕೆಂದು ಅವರ ಆಶಯ."

"ಆದ್ದರಿಂದ ಜಾತ್ಯಾತೀತತೆಯ ನೀತಿಯನ್ನು ಚಾಚೂ ತಪ್ಪದೆ ಪಾಲಿಸುವ ಬಗ್ಗೆ ಯಾವುದೇ ರಾಜಿಗೆ ಅವಕಾಶವಿ-ಲ್ಲದ ಹೋರಾಟ ನಡೆಸುವ ಕರ್ತವ್ಯ ನಮ್ಮ ಪಕ್ಷದ ಮೇಲಿದೆ. ಈ ನೀತಿಯಿಂದ ತುಸುವೇ ಚ್ಯುತಿ ಕಂಡರೂ ಅದನ್ನು ಬಯ-ಲಿಗೆಳೆದು ಹೋರಾಡಬೇಕು. ಪ್ರತಿಯೊಂದು ಧಾರ್ಮಿಕ ಕೋಮಿನ- ಅದು ಬಹುಸಂಖ್ಯಾಕವಾಗಿರಲಿ, ಅಲ್ಪಸಂಖ್ಯಾ-ಕವಾಗಿರಲಿ - ಹಾಗೂ ಯಾವುದೇ ಧರ್ಮದಲ್ಲಿ ನಂಬಿಕೆಯಿ-ಲ್ಲದವರ ಹಕ್ಕುಗಳನ್ನು ರಕ್ಷಿಸುತ್ತಲೇ ನಮ್ಮ ಪಕ್ಷ ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ, ಆಡಳಿತ ಜೀವನ-ದಲ್ಲಿ ಧರ್ಮವನ್ನು ನುಸುಳಿಸುವ ಎಲ್ಲಾ ವಿಧಾನಗಳ ವಿರುದ್ಧ ಹೋರಾಡಬೇಕು"

ಸಂಸತ್ತಿನಲ್ಲಿ ಈ ಮಸೂದೆಗಳನ್ನು ಮಂಡಿಸಿದಾಗ ನಮ್ಮ ಪಕ್ಷ ಇದು ಅವಸರದಿಂದ, ಜಾತ್ಯಾತೀತ ಪಕ್ಷಗಳೊಡನೆ ಸಮಾಲೋಚನೆ ನಡೆಸದೆ ತಂದ ಮಸೂದೆ ಎಂದು ಟೀಕಿಸಿತು. ಅವನ್ನು ಜಂಟಿ ಸಮಿತಿಗೆ ಕಳಿಸಿದಾಗ ಆ ಘಟ್ಟದಲ್ಲಿ ಜಾತ್ಯಾತೀತ ಪಕ್ಷಗಳು ಪರಿಣಾಮಕಾರಿಯಾಗಿ ಮಧ್ಯ ಪ್ರವೇಶಿಸಿ ಆ ಮಸೂದೆಗಳಲ್ಲಿ ಅರ್ಥಪೂರ್ಣ ಹಾಗೂ ಗಮನಾರ್ಹ ಬದಲಾವಣೆ ತಂದವು.

ಬಿ.ಜೆ.ಪಿ.ಯ ವಿರೋದವೇಕೆ?

ಕೋ...
ಹಕ್ಕು...

ಈ ಅಂಶಗಳ ಬಗ್ಗೆ, ಬಿಜೆಪಿಯ ಟೀಕೆಗಳ ಬಗ್ಗೆ ಈಗ ಪರೀಕ್ಷಿಸೋಣ.

80ನೇ ಸಂವಿಧಾನ ತಿದ್ದುಪಡಿ ಮಸೂದೆ ಸಂವಿಧಾನಕ್ಕೆ ಮೂರು ಪ್ರಮುಖ ತಿದ್ದುಪಡಿಗಳನ್ನು ತರಬಯಸುತ್ತದೆ. ಮೊದಲನೆಯದು ಪ್ರಭುತ್ವ ಜಾತ್ಯಾತೀತ ಸ್ವರೂಪದ ಬಗ್ಗೆ ಸರಕಾರ ತಂದ ಮೂಲ ಮಸೂದೆಯಲ್ಲಿ ಪ್ರಭುತ್ವ ಎಲ್ಲಾ ಧರ್ಮಗಳಿಗೆ ಸಮಾನ ಗೌರವ ನೀಡುತ್ತದೆ ಎಂದು ಹೇಳಲಾಗಿತ್ತು. ವಾಸ್ತವವಾಗಿ ಈ ತಿದ್ದುಪಡಿಯ ಅವಶ್ಯಕತೆಯೂ ಇರಲಿಲ್ಲ. ಏಕೆಂದರೆ ಸಂವಿಧಾನದ ಕಲಮುಗಳಲ್ಲಿ ಆ ಅಂಶ ಈಗಾಗಲೇ ಇದೆ. ಆಯ್ಕೆ ಸಮಿತಿಯ ಹಂತದಲ್ಲಿ ನಮ್ಮ ಮುತುವರ್ಜಿಯಿಂದಾಗಿ ಜಾತ್ಯಾತೀತತೆಯ ಪರಿಕಲ್ಪನೆಯನ್ನು ಇನ್ನಷ್ಟು ವಿಶದೀಕರಿಸಲಾಯಿತು. ಪ್ರಭುತ್ವ ಯಾವುದೇ ಧರ್ಮವನ್ನು ಪ್ರತಿಪಾದಿಸುವುದಿಲ್ಲ, ಆಚರಿಸುವುದಿಲ್ಲ ಹಾಗೂ ಪ್ರಚಾರ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸುವ ಅಂಶವನ್ನು ಸೇರಿಸಲಾಯಿತು.

ಇದನ್ನು ಬಿಜೆಪಿ ತೀವ್ರವಾಗಿ ವಿರೋಧಿಸಿತು. ಅದು ಸಹಜ ಕೂಡಾ. ಹಿಂದುತ್ವವನ್ನು ಮಾರ್ಗದರ್ಶಕ ನೀತಿಯಾಗಿ ಮಾಡುವ ಎಲ್ಲಾ ಅವಕಾಶಗಳನ್ನು ಬಳ-ಸಲು ಯತ್ನಿಸುತ್ತಿರುವ ಒಂದು ಪಕ್ಷ ಇಂತಹ ತಿದ್ದುಪ-ಡಿಯನ್ನು ಹೇಗೆ ತಾನೇ ಬೆಂಬಲಿಸಬಲ್ಲುದು?

ಎರಡನೆಯ ತಿದ್ದುಪಡಿಯೆಂದರೆ ಧರ್ಮದ ಆಧಾರದ ಮೇಲೆ ವಿವಿಧ ಧಾರ್ಮಿಕ ಗುಂಪುಗಳ ನಡುವೆ ವಿರಸ, ಹಗೆತನ, ದ್ವೇಷದ ಭಾವನೆಗಳನ್ನು ಪ್ರಚೋದಿಸುವ ಸಂಘ, ಸಂಸ್ಥೆ, ವ್ಯಕ್ತಿಗಳನ್ನು ನಿರ್ಬಂಧಿಸುವ ಬಗ್ಗೆ ಸಂಸತ್ತು ಅಥವಾ ರಾಜ್ಯ ಶಾಸನ ಸಭೆಗಳಿಗೆ ಶಾಸನ ರಚಿಸುವ ಅಧಿಕಾರ ನೀಡುವುದು. ಇದಕ್ಕೆ ಬಿಜೆಪಿಯ ಆಕ್ಷೇಪವೇನು?- "ಪ್ರಜಾಪ್ರಭುತ್ವವೆಂದರೆ ಎಲ್ಲಾ ರಾಜಕೀಯ ಪಕ್ಷಗಳು, ಸಿದ್ಧಾಂತಗಳು ಬೆಳೆಯಲು ಅವಕಾಶ ನೀಡುವ ವ್ಯವಸ್ಥೆ. ಯಾವುದು ಸರಿ ಯಾವುದು ತಪ್ಪು ಎಂದು ಜನರೇ ನಿರ್ಧರಿಸಲಿ. ಶಾಸನಗಳ ಮೂಲಕ ಸಿದ್ಧಾಂತಗಳನ್ನು ದಮನ ಮಾಡಬಾರದು"

ರಾಷ್ಟ್ರೀಯ ಸಮಗ್ರತಾ ಮಂಡಳಿಗೆ, ಸುಪ್ರೀಂ ಕೋರ್ಟಿಗೆ ನೀಡಿದ ಗಂಭೀರ ಆಶ್ವಾಸನೆಗಳನ್ನು ಗಾಳಿಗೆ ತೂರಿದ ಪಕ್ಷದ, ಬಾಬ್ರಿ ಮಸೀದಿ-ರಾಮಜನ್ಮಭೂಮಿ ಪ್ರಶ್ನೆಯ ಮೇಲೆ ಭಾರತದ ನ್ಯಾಯಾಂಗದ ಯಾವುದೇ ತೀರ್ಪನ್ನು ಒಪ್ಪಲು ಸಾಧ್ಯವಿಲ್ಲ ಎನ್ನುತ್ತಾ ತನ್ನ ಭುಜಬಲವನ್ನೇ ಬಳಸಿ ಬಾಬ್ರಿಮಸೀದಿಯನ್ನು ಧ್ವಂಸ ಮಾಡಿದ ಪಕ್ಷ ಪ್ರಜಾಪ್ರಭುತ್ವದ ಬಗ್ಗೆ ಈ ಉಪದೇಶ ನೀಡುವುದು ಕುತೂಹಲಕಾರಿಯಲ್ಲವೇ?

ಪ್ರಜಾಪ್ರಭುತ್ವವೆಂದರೆ ಮನಬಂದಂತೆ ವರ್ತಿಸುವ, ಉಪದೇಶ ನೀಡುವ ಲಂಗುಲಗಾಮಿಲ್ಲದ ಸ್ವಾತಂತ್ರ್ಯವಲ್ಲ, ಅರಾಜಕತೆಯಲ್ಲ. ಸಮಾಜದ ಬೆಳವಣಿಗೆ, ಕಲ್ಯಾಣಕ್ಕಾಗಿ ಸಂಘಗಳು, ವ್ಯಕ್ತಿಗಳ ಮೇಲೆ ಸಾಮಾಜಿಕವಾಗಿ ತರ್ಕಬದ್ಧವಾದ ಮಿತಿಗಳನ್ನು ಪ್ರಭುತ್ವ ಹಾಕಬಹುದು, ಹಾಕಬೇಕು. ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆ ಸಮಾಜದ ಬುನಾದಿಗೇ ಅಪಾಯ ತರುವ ಜನಾಂಗೀಯ, ಧಾರ್ಮಿಕ ದ್ವೇಷ

ಕುಗಳ ಪಟ್ಟಿಯನ್ನು ಪ್ರಕಟಿಸಿತ್ತು. ಟಾಟಾ, ಬಿರ್ಲಾಗಳ ಉತ್ಪಾದನೆಗಳನ್ನು ಕೊಳ್ಳಿರೆಂದು ಪ್ರೋತ್ಸಾಹಿಸುವ, ದೇಶೀ ಗುತ್ತೇದಾರಿಗಳು ಹಾಗೂ ವಿದೇಶೀ ಗುತ್ತೇದಾರಿಗಳ ನಡುವೆ ವ್ಯತ್ಯಾಸ ಕಾಣುವ ಈ ನಿಲುವು ಹಾಸ್ಯಾಸ್ಪದ, ಏಕೆಂದರೆ ಭಾರತದ ದೊಡ್ಡ ಗುತ್ತೇದಾರಿಗಳು ವಿದೇಶೀ ಬಂಡವಾಳದ ಶಾಮೀಲಿನೊಂದಿಗೇ ತಮ್ಮ ಉದ್ದಿಮೆ ನಡೆಸುತ್ತಿದ್ದಾರೆ ಎಂದು ನಾವಾಗ ಹೇಳಿದ್ದೆವು. ಅದು ಈಗ ಸ್ವತಃ ಅವರನ್ನೇ ಮುಜುಗರಕ್ಕೊಳಪಡಿಸಿದೆ. ಮೇಲೆ ಹೇಳಿದ ಸಮಾವೇಶದಲ್ಲಿ ಕಳೆದ ವರ್ಷ ಪ್ರಕಟಿಸಿದ ಪಟ್ಟಿಯಲ್ಲಿ ಕೆಲವೆಲ್ಲಾ ಸರಕುಗಳ ಹೆಸರನ್ನು ತೆಗೆದು ಹಾಕಬೇಕಾಯಿತು. ಉದಾಹರಣೆ ಟಾಟಾ ಗುಂಪಿನ ಟೋಮ್ಕೋ ಬಹುರಾಷ್ಟ್ರೀಯ ಗುಂಪಿನ ಹಿಂದುಸ್ತಾನ ಲೀವರ್‌ನೊಂದಿಗೆ ವಿಲೀನವಾದ ಮೇಲೆ ಟಾಟಾಗಳ ಸಾಬೂನನ್ನು ಬಳಸಲು ಹೇಗೆ ಶಿಫಾರಸು ಮಾಡುವುದು? ಗೋಡ್ರೆಜ್ ಕಂಪೆನಿ ಇನ್ನೊಂದು ಬಹುರಾಷ್ಟ್ರೀಯ ಕಂಪೆನಿಯೊಂದಿಗೆ ವಿಲೀನವಾಗುವ ಸಂಭವವಿರುವಾಗ ಗೋಡ್ರೆಜ್ ಸೋಪ್ ಉತ್ಪಾದನೆಗಳನ್ನು ಕೊಳ್ಳಿ ಎಂದು "ಸ್ವದೇಶಿ" ಹೆಸರಿನಲ್ಲಿ ಹೇಗೆ ಹೇಳುವುದು? ಆದ್ದರಿಂದ ಇವೆರಡೂ ಹೆಸರುಗಳನ್ನು ಪಟ್ಟಿಯಿಂದ ತೆಗೆಯಬೇಕಾಯಿತು.

ಅಡ್ವಾಣಿಯವರ ಮುಜುಗರ

ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಿಗೆ ಎದುರಾಗಿ ಭಾರತೀಯ ಗುತ್ತೇದಾರಿಗಳನ್ನು ಪ್ರೋತ್ಸಾಹಿಸುವ "ಸ್ವದೇಶಿ" ಪ್ರಚಾರದ ವಂಚಕ ಸ್ವರೂಪ ಆರ್ಥಿಕ ನೀತಿಗಳನ್ನು ಕುರಿತಂತೆ ಬಿಜೆಪಿಯ ಮೂಲಭೂತ ಗೋಸುಂಬೆತನವನ್ನು ಎತ್ತಿತೋರಿದೆಯಷ್ಟೆ. ಆಂತರಿಕ ಉದಾರೀಕರಣವನ್ನು ಬೆಂಬಲಿಸುತ್ತೇವೆ, ಬಾಹ್ಯ ಉದಾರೀಕರಣವನ್ನು ವಿರೋಧಿಸುತ್ತೇವೆ ಎಂದು ಹೇಳಿ ಅಡ್ವಾಣಿ ಮತ್ತವರ ಸಹಯೋಗಿಗಳ ತಮ್ಮನ್ನು ತಾವೇ ಕಗ್ಗಂಟಿನಲ್ಲಿ ಬಂಧಿಸಿಕೊಂಡಿದ್ದಾರೆ. ಭಾರತದಲ್ಲಿ ಉದಾರೀಕರಣ ಐ.ಎಂ.ಎಫ್.-ವಿಶ್ವಬ್ಯಾಂಕ್‌ನ ಆದೇಶದಿಂದ ನಡೆಯುತ್ತಿರುವುದರಿಂದ ಅದು ಕೇವಲ. ಆಂತರಿಕವಾಗಿರಲು ಸಾಧ್ಯವೇ ಇಲ್ಲ, ಭಾರತವನ್ನು ಅಂತರ್ರಾಷ್ಟ್ರೀಯ ಬಂಡವಾಳಕ್ಕೆ ತೆರೆಯುವುದು ಆ ಪ್ರಕ್ರಿಯೆಯ ಅಭಿನ್ನ ಅಂಶ.

ಆದ್ದರಿಂದ ಒಂದೆಡೆ ಆರ್.ಎಸ್.ಎಸ್. ಬಹುರಾಷ್ಟ್ರೀಯ ಕಂಪೆನಿಗಳ ವಿರುದ್ಧ ರೈಲುಬಿಡುತ್ತಿರುವಾಗ ಬಿಜೆಪಿ ಅಧ್ಯಕ್ಷ ವಿದೇಶೀ ಸರಕುಗಳನ್ನು ಬಹಿಷ್ಕರಿಸಲು ಸಾಧ್ಯವಿಲ್ಲ ಎಂದು ಹೇಳುತ್ತಾ ಆ ಸ್ವದೇಶೀ ವೇದಿಕೆಯಿಂದ ತಮ್ಮನ್ನು ಪ್ರತ್ಯೇಕಿಸಿಕೊಂಡಿದ್ದಾರೆ.

ವಾಸ್ತವ ಸಂಗತಿಯೆಂದರೆ ಬಿಜೆಪಿ ಯಾವ ನಾಚಿಕೆಯೂ ಇಲ್ಲದೆ ಭಾರತದ ದೊಡ್ಡ ಬಂಡವಾಳಿಗರ ವಕೀಲಿ ನಡೆಸುವ ಪಕ್ಷವಾದ್ದರಿಂದ ಕಾಂಗ್ರೆಸ್(ಐ) ಸರಕಾರ ಆರಂಭಿಸಿದ ಮೂಲಭೂತ ಆರ್ಥಿಕ ಸುಧಾರಣೆಗಳನ್ನು ಅದು ವಿರೋಧಿಸಲಾರದು. ಏಕೆಂದರೆ ಇಡೀ ದೊಡ್ಡ ಬಂಡವಾಳ ವರ್ಗ ಈ ನೀತಿಗಳ ಬೆಂಬಲಕ್ಕೆ ನಿಂತಿದೆ. ಹಾಗಿರುವಾಗ ಬಿಜೆಪಿ ಇಂತಹ ನೀತಿಗಳ ವಿನಾಶಕಾರೀ ಪರಿಣಾಮಗಳ ಬಗ್ಗೆ ಸುಮ್ಮನೇ ಗದ್ದಲ ಎಬ್ಬಿಸಬಲ್ಲುದಷ್ಟೆ. ಆ ಮೂಲಕ ಜನಗಳನ್ನು ಮರುಳುಗೊಳಿಸಬಹುದು ಎಂದು ಅವರ ನಂಬಿಕೆ.

...ದ್ವೇಷ ಹರಡಿಸುವ ...ಲೇ ಬೇಕಂತೆ!

...ಗಲೀ ಅಥವಾ ಸಮಾಜ-ವಿರೋಧಿ, ಅನೀತಿ ...ತ ಚಟುವಟಿಕೆಗಳಾಗಲೀ ಅವಕಾಶ ಕೊಡಲು ...ವಿಲ್ಲ.

ಈ ತಿದ್ದುಪಡಿ ಧರ್ಮದ ಆಧಾರದ ಮೇಲೆ ...ರ್ಭಾವನೆ, ದ್ವೇಷ ಹಗೆತನವನ್ನು ಪ್ರಚೋದಿಸಲು ...ರ್ಮವನ್ನು ಬಳಸುವವರನ್ನಷ್ಟೇ ತಟ್ಟುತ್ತದೆ. ಇಲ್ಲಿ... ನಿಜವಾದ ಪ್ರಶ್ನೆಯೆಂದರೆ ಕೋಮು ಭಾವನೆ...ನ್ನು ಉದ್ರೇಕಿಸಿ ಕೋಮು ದಂಗೆಗಳಿಗೆ ಕಾರಣ...ಲು ಕೋಮುವಾದೀ ಶಕ್ತಿಗಳಿಗೆ ನಾವು ಅವಕಾಶ ...ಬೇಕೇ ಎಂಬುದು. ಈ ತಿದ್ದುಪಡಿಯನ್ನು ಆಕ್ಷೇ...ವ ಮೂಲಕ ಬಿಜೆಪಿ ಆ ಹಕ್ಕು ತನಗಿರಬೇಕು ...ತ್ತಿದೆ. ಯಾವ ನಾಗರಿಕ ಸಮಾಜವೂ ಇಂತಹ ...ನಲ್ ಚಟುವಟಿಕೆಗಳಿಗೆ ಅವಕಾಶ ಕೊಡಲು ...ವಿಲ್ಲ. ಭಾರತೀಯ ದಂಡ ಸಂಹಿತೆ 1969 ರಲ್ಲೇ ...ತಹ ಚಟುವಟಿಕೆಗಳನ್ನೆಲ್ಲಾ ಕ್ರಿಮಿನಲ್ ಚಟುವಟಿ...ಂದು ಗುರುತಿಸಿದೆ.

ಮೂರನೇ ಪ್ರಮುಖ ತಿದ್ದುಪಡಿ ಸಂಸತ್ತಿಗೆ, ...ವ ವಿಧಾನಮಂಡಳಕ್ಕೆ ಸದಸ್ಯರಾಗಲು ಅನರ್ಹ...ವ ಹೊಸದೊಂದು ಅಂಶವನ್ನು ಸೇರಿಸಬಯಸು... ಸದ್ಯ ಸಂವಿಧಾನ, ಜನತಾ ಪ್ರಾತಿನಿಧ್ಯದ ಶಾಸನದ ...ವ ಅಂಶಗಳು ಎರಡು ತರದ ಅನರ್ಹತೆಗಳನ್ನು ...ಮಾಡಿದೆ. ಒಂದು ಅಭ್ಯರ್ಥಿಯ ಅರ್ಜಿ ಪತ್ರಗಳ ...ಶೀಲನೆಯ ಸಮಯದಲ್ಲಿ ಮತಗಣನಾ ಅಧಿಕಾರಿ, ...ನಾವಣೆಗಳ ನಂತರ ಚುನಾವಣಾ ಆಯೋಗ ...ಕಬಹುದಾದ ಇನ್ನೊಂದು ಭ್ರಷ್ಟ ನಡವಳಿಕೆಗಳ ...ಆರದ ಮೇಲೆ ಚುನಾವಣಾ ಅಪೀಲಿನ ಮೂಲಕ ...ಕೋರ್ಟ್‌ಗಳು ಹಾಕಬಹುದಾದ ಅನರ್ಹತೆ.

ಈಗ ತರಬೇಕೆಂದಿರುವ ತಿದ್ದುಪಡಿ ಯಾವುದೇ ...ರ್ಥಿ ಅಥವಾ ಆತನ ಒಪ್ಪಿಗೆ ಪಡೆದ ಬೇರೆ ... ಧರ್ಮದ ಆಧಾರದ ಮೇಲೆ ಮತ ನೀಡಬೇಕು ...ವಾ ಮತದಾನ ಮಾಡಬಾರದು ಎಂದು ಮನವಿ ...ಡಿಕೊಂಡರೇ, ಧಾರ್ಮಿಕ ಸಂಕೇತಗಳನ್ನು ಬಳ...ರೆ, ಅವುಗಳ ಮೂಲಕ ಮನವಿ ಮಾಡಿಕೊಂ..., ತನ್ನ ಚುನಾವಣಾ ಪ್ರಯೋಜನಕ್ಕಾಗಿ ವಿವಿಧ ...ರ್ಮಿಕ ಗುಂಪುಗಳ ನಡುವೆ ಧರ್ಮದ ಆಧಾರದ ...ಲೆ ವಿರಸ, ಹಗೆತನ, ದ್ವೇಷ, ದುರ್ಭಾವನೆಗಳನ್ನು ...ತ್ಸಾಹಿಸಿದರೆ, ಅಥವಾ ಪ್ರೋತ್ಸಾಹಿಸಲು ಪ್ರಯತ್ನಿ...ರೆ ಅಂತಹ ಅಭ್ಯರ್ಥಿಯನ್ನು ಅನರ್ಹಗೊಳಿಸಲು ...ಕಾಶ ಮಾಡಿಕೊಡುತ್ತದೆ. ಈ ಅನರ್ಹತೆಯ ...ಯನ್ನು ಹೇಗೆ ನಿರ್ಧರಿಸುವುದು ಎಂದು ಸಂಸತ್ತು ...ದು ಕಾನೂನು ಮಾಡಿ ಅವಕಾಶ ಮಾಡಿಕೊಡು... ಎಂದೂ ಈ ತಿದ್ದುಪಡಿ ಹೇಳಿದೆ. ಈ ಆಧಾರದ ...ಲೆ ಅಭ್ಯರ್ಥಿಯನ್ನು ಅನರ್ಹ ಗೊಳಿಸುವ ಅಂಶ ...ಕಾರದ ಮುಸೂದೆಯಲ್ಲಿದ್ದುದನ್ನು ಆಯ್ಕೆ ಸಮಿತಿ ...ದುಹಾಕಿದೆ.

ಈಗ ಸಂವಿಧಾನದಲ್ಲಿ, ಜನತಾ ಪ್ರಾತಿ...ಧ್ಯ ಕಾನೂನಿನಲ್ಲಿ ಮತಪತ್ರಗಳ ಪರಿಶೀಲನೆಯಾದ ...ತರ ಇಂತಹ ಸಂದರ್ಭಗಳಲ್ಲಿ ಪರಿಹಾರ ಪಡೆ...ಲು ಇರುವ ಏಕೈಕ ಮಾರ್ಗವೆಂದರೆ ಚುನಾವಣಾ ...ಪೀಲು ಹಾಕುವುದು. ಇಂತಹ ಅಪೀಲುಗಳ ವಿಲೇವಾರಿ ಬಹಳ ದುರ್ಗಮವಾದದ್ದು, ಸಾಮಾನ್ಯವಾಗಿ ಐದು ವರ್ಷಗಳ ಅವಧಿ ಮುಗಿಯುವವರೆಗೂ ಅದರ ತೀರ್ಪು ಬರುವುದಿಲ್ಲ. ತಪ್ಪು ಮಾಡಿದಾತ ತನ್ನ ತಪ್ಪಿನ ಪ್ರಯೋಜನ ಪಡೆಯುತ್ತಲೇ ಇರುತ್ತಾರೆ.

ಕೆಲವು ಅಭ್ಯರ್ಥಿಗಳು ಧರ್ಮವನ್ನು ಬಳಸಿ ಹಗೆತನ, ದುರ್ಭಾವನೆಗೆ ಪ್ರೋತ್ಸಾಹ ನೀಡಿದರೆ ಇಡೀ ಚುನಾವಣಾ ವಾತಾವರಣ ಕೆಡುತ್ತದೆ. ಆಗ ಮುಕ್ತ, ನ್ಯಾಯಪೂರ್ಣ ಚುನಾವಣೆ ಸಾಧ್ಯವಾಗುವುದಿಲ್ಲ. ಹೀಗಾಗದಂತೆ ಮಾಡುವುದು ಹೇಗೆ ಎಂಬುದೇ ನಮ್ಮ ಮುಂದಿರುವ ಮುಖ್ಯ ಅಂಶ. ಬಿಜೆಪಿ ಕೋಮು-ದ್ವೇಷ ಹರಡಿ, ಕೋಮು ದಂಗೆ ನಡೆಸಿ ಇಡೀ ಚುನಾವಣಾ ಪ್ರಕ್ರಿಯೆಯನ್ನೇ ಬುಡಮೇಲು ಮಾಡುವ ಹಕ್ಕಿರಬೇಕು ಎನ್ನುತ್ತದೆ. ಯಾವ ಪ್ರಜಾಪ್ರಭುತ್ವ ದೇಶ ತಾನೇ ಇದಕ್ಕೆ ಅವಕಾಶ ನೀಡಲು ಸಾಧ್ಯ?

ಮೇಲೆ ಹೇಳಿದ ತಿದ್ದುಪಡಿಯ ಅಂಶದ ದುರುಪಯೋಗದ ಅವಕಾಶವಿಲ್ಲದಂತೆ ಮಾಡುವುದು ಅಗತ್ಯ. ಅನರ್ಹತೆಯನ್ನು ಯಾರು ಘೋಷಿಸಬಹುದು ಹೇಗೆ ಎಂಬ ಬಗ್ಗೆ ಸರ್ಕಾರ ತನ್ನ ಪ್ರಸ್ತಾಪಗಳನ್ನು ಇಡಲು ಹಿಂದೇಟು ಹಾಕುತ್ತಿರುವುದು ಕೆಲವು ಜಾತ್ಯಾತೀತ ವಲಯಗಳಲ್ಲೂ ಸಂಶಯ ಮೂಡಿಸುತ್ತದೆ.

ಅನರ್ಹತೆಯ ಬಗ್ಗೆ ಒಂದು ನ್ಯಾಯಾಂಗ ಅಧಿಕಾರಿಯೇ ನಿರ್ಧರಿಸಬೇಕು. ಇಂತಹ ತೀರ್ಪಿಗೆ ಅಗತ್ಯವಾದ ಸಾಕ್ಷಿ, ಸಾಕ್ಷಿಯ ಪರೀಕ್ಷೆ ಇತ್ಯಾದಿ ನಡೆಯಬೇಕು. ಈ ಇಡೀ ಪ್ರಕ್ರಿಯೆ ಚುನಾವಣೆ ನಡೆದ ಮೂರು ತಿಂಗಳ ಒಳಗೆ ಮುಗಿಯಬೇಕು.

ಜನತಾ ಪ್ರಾತಿನಿಧ್ಯ ಕಾನೂನಿಗೆ ಎರಡು ತಿದ್ದುಪಡಿಗಳನ್ನು ಸೂಚಿಸಲಾಗಿದೆ. ಮೊದಲನೆಯದ ಪ್ರಕಾರ ಧಾರ್ಮಿಕ ಹೆಸರು ಹೊಂದಿರುವ ಯಾವುದೇ ಸಂಸ್ಥೆ, ಸಂಘಟನೆಯನ್ನು ರಾಜಕೀಯ ಪಕ್ಷವೆಂದು ಚುನಾವಣಾ ಆಯೋಗ ರಿಜಿಸ್ಟರ್ ಮಾಡುವುದಿಲ್ಲ. ಎರಡನೇ ತಿದ್ದುಪಡಿ ಧರ್ಮದ ಆಧಾರದ ಮೇಲೆ ವಿವಿಧ ಕೋಮುಗಳ ನಡುವೆ ಹಗೆತನ, ದ್ವೇಷ, ದುರ್ಭಾವನೆ ಹರಡಿಸಿವೆ, ಹರಡಲು ಪ್ರಯತ್ನಿಸುವ ರಾಜಕೀಯ ಪಕ್ಷಗಳ ಮಾನ್ಯತೆಯನ್ನು ರದ್ದು ಮಾಡುವ ಹಕ್ಕನ್ನು ಹೈಕೋರ್ಟ್‌ಗಳಿಗೆ ನೀಡುತ್ತದೆ. ಕೇವಲ ಬಿಜೆಪಿ, ಮುಸ್ಲಿಂ ಲೀಗ್‌ನಂತಹ ಪಕ್ಷಗಳಷ್ಟೇ ಈ ತಿದ್ದುಪಡಿಗಳ ಬಗ್ಗೆ ಆಕ್ಷೇಪವೆತ್ತಲು ಸಾಧ್ಯ.

ಬಿಜೆಪಿ ಮತ್ತಿತರ ಪಕ್ಷಗಳು ಈ ಎಲ್ಲಾ ತಿದ್ದುಪಡಿಗಳ ಮೇಲೆ ವ್ಯಾಪಕ ಸುಳ್ಳು ಪ್ರಚಾರ ಆರಂಭಿಸಿವೆ. ಸುಳ್ಳು ಮಾಹಿತಿಗಳನ್ನು ಹರಡುತ್ತಿದೆ. ಕಾಂಗ್ರೆಸ್ ಇದನ್ನು ಎದುರಿಸಲು ಯಾವುದೇ ಸೈದ್ಧಾಂತಿಕ ಪ್ರಚಾರ ನಡೆಸುತ್ತಿಲ್ಲ. ಅದರ ಮೌನ ಹಾಗೂ ಕೆಲವು ಕಾಂಗ್ರೆಸ್ ಮುಖಂಡರ ಗೊಂದಲ ಬಿಜೆಪಿ ಉದ್ದೇಶಪೂರ್ವಕವಾಗಿಯೇ ಸೃಷ್ಟಿಸುವ ಗೊಂದಲವನ್ನು ಇನ್ನಷ್ಟು ಬಲಗೊಳಿಸುತ್ತಿದೆ. ಈ ಕೋಮುವಾದಿ ಸವಾಲನ್ನು ಎದುರಿಸಲು ಮುಂದೆ ಬಂದರೆ ಮಾತ್ರವೇ ಕಾಂಗ್ರೆಸ್(ಐ) ಪ್ರಾಮಾಣಿಕತೆ ಸಾಬೀತಾಗುತ್ತದೆ.

ಸರಕಾರ ಕೂಡಲೇ ದೇಶದ ಎಲ್ಲಾ ಜಾತ್ಯಾತೀತ ಪಕ್ಷಗಳೊಂದಿಗೆ ಮಾತುಕತೆ ಆರಂಭಿಸಿ, ಒಂದು ವಿಶೇಷ ಅಧಿವೇಶನ ಕರೆದು ನಾಲ್ಕು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳ ಮೊದಲು ಸಂವಿಧಾನದಲ್ಲಿ ಜನತಾ ಪ್ರಾತಿನಿಧ್ಯ ಶಾಸನಕ್ಕೆ ಈ ತಿದ್ದುಪಡಿಗಳು ಅಂಗೀಕಾರಾರ್ಹವಾಗುವಂತೆ ಮಾಡಬೇಕು.

ಲಿಗಚೇವ್‌ರ ಅನುಭವ ಕಥನ

'ಗೋರ್ಬಚೇವ್‌ರ ಕ್ರೆಮ್ಲಿನ್‌ನ ಕಹಿನೆನಪುಗಳು'

ಯೆಗೋರ್ ಲಿಗಚೇವ್ ಈಗ ಮಾಯವಾಗಿರುವ ಸೋವಿಯೆಟ್ ಕಮ್ಯುನಿಸ್ಟ್ ಪಕ್ಷದ ಪ್ರಮುಖ ನಾಯಕರಲ್ಲೊಬ್ಬರು. *1985 ರಿಂದ 1990 ರಲ್ಲಿ ನಡೆದ 28ನೇ ಮಹಾಧಿವೇಶನದವರೆಗೆ ಪಾಲಿಟ್‌ಬ್ಯೂರೋ ಸದಸ್ಯರಾಗಿದ್ದರು. 1987 ರಿಂದ 'ಪೆರೆಸ್ಟ್ರೊಯಿಕಾ' ದಾರಿತಪ್ಪಲು ಆರಂಭವಾದಾಗ ಗೋರ್ಬಚೇವ್‌ರನ್ನು ವಿರೋಧಿಸಿದವರು. 'ಸಂಪ್ರದಾಯವಾದಿ' ಎಂದು ಗೋರ್ಬಚೇವ್ ಗ್ಯಾಂಗ್‌ನಿಂದ ಅನ್ನಿಸಿಕೊಂಡವರು.*

ಅವರ ಗಮನಾರ್ಹ ಪುಸ್ತಕವೊಂದು ಇಂಗ್ಲೀಷ್‌ನಲ್ಲಿ ಪ್ರಕಟವಾಗಿದೆ. ಅದರ ತಲೆಬರಹ "ಗೋರ್ಬಚೇವ್‌ರ ಕ್ರೆಮ್ಲಿನ್‌ನ ಒಳನೋಟ: ಯೆಗೋರ್ ಲಿಗಚೆವ್‌ರ ನೆನಪುಗಳು". ಇದು 1985 ರಿಂದ 1991 ರವರೆಗೆ ಸೋವಿಯೆತ್ ಒಕ್ಕೂಟದಲ್ಲಿ ನಡೆದ ಅಲ್ಲೋಲ್ಲ ಕಲ್ಲೋಲದ ಬಗ್ಗೆ ಉಚ್ಚ ಸೋವಿಯೆತ್ ನಾಯಕನೊಬ್ಬನ ಮೊದಲ ಅನುಭವದ ಕಥನ. ಸಿಪಿಐ(ಎಂ) ಈ ಬೆಳವಣಿಗೆಗಳ ಬಗ್ಗೆ ಮಾಡುತ್ತಾ ಬಂದ ಟೀಕೆ-ಟಿಪ್ಪಣಿಗಳ ಅಂದಾಜು ಎಷ್ಟು ಸರಿಯಾಗಿತ್ತು ಎಂದು ಲಿಗಚೇವ್‌ರ ಅನುಭವ ಸಾರಿ ಹೇಳುತ್ತಿವೆ. 20 ನೇ ಶತಮಾನದ ದಾರುಣ ಘಟನೆ ಸಮಾಜವಾದದ ಹುಟ್ಟೂರಿನಲ್ಲೇ ಅದರ ವಿಘಟನೆ ಮತ್ತು ನಾಶ - 'ಯಾಕೆ?' 'ಹೇಗೆ' ಸಾಧ್ಯವಾಯಿತು ಎಂದು ತಿಳಿಯಬಯಸುವವರು ಓದಲೇಬೇಕಾದ ಪುಸ್ತಕವಿದು ಎಂದಿದ್ದಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಪ್ರಕಾಶ್ ಕಾರಟ್.

ಈ ಪುಸ್ತಕ ಲಿಗಚೇವ್‌ರ ನೆನಪುಗಳ ಮೊದಲ ಸಂಪುಟ. 1985 ರಿಂದ 1991ರ ವರೆಗಿನ ಅವಧಿಯಲ್ಲಿ 'ಪೆರೆಸ್ಟ್ರೊಯಿಕಾ' ದಾರಿ ತಪ್ಪುತ್ತಿದ್ದಾಗ ಸೋವಿಯೆತ್ ಉಚ್ಚಮಟ್ಟದ ನಾಯಕತ್ವದಲ್ಲಿ ಏನು ನಡೆಯಿತು? ಎಂಬ ಬಗ್ಗೆ ಸಾಕಷ್ಟು ವಿವರಗಳನ್ನು ಕೊಡುತ್ತದೆ. ಲಿಗಚೇವ್ ಸ್ವಾಭಾವಿಕವಾಗಿಯೇ ತಮ್ಮದೇ ಕಣ್ಣೋಟದಿಂದಲೇ ನೋಡಿದ್ದಾರೆ. ಆ ಪಕ್ಷದ ಆಂತರಿಕ ಹೋರಾಟದಲ್ಲಿ ಅವರ ನೀತಿಯನ್ನು ಸಮರ್ಥಿಸಿಕೊಂಡಿದ್ದಾರೆ. ಅವರು ಈ ಪುಸ್ತಕದಲ್ಲಿ ಘಟನೆಗಳು, ನಿಜ ಸಂಗತಿಗಳನ್ನು ನಿರೂಪಿಸುವ ಹಾಗೂ ಮಾಡಿರುವ ವಿಶ್ಲೇಷಣೆ, ಸಿಪಿಐ(ಎಂ) ತನ್ನ ವಿವಿಧ ದಸ್ತಾವೇಜುಗಳಲ್ಲಿ ಮಾಡಿದ ಅಂದಾಜು, ವಿಶ್ಲೇಷಣೆಗಳನ್ನು ಪೂರ್ಣವಾಗಿ ಪುಷ್ಟೀಕರಿಸುತ್ತದೆ. ಸಿಪಿಐ(ಎಂ)ಗೆ ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ದಸ್ತಾವೇಜುಗಳನ್ನು ಬಿಟ್ಟರೇ ಇನ್ನೇನೂ ಮೂಲಗಳಿಲ್ಲವಾದರೂ ಇದು ಸಾಧ್ಯವಾದದ್ದು ಸಿಪಿಐ(ಎಂ)ಗೆ ಗೌರವ ತರುವಂತಹುದು.

ಸುದ್ದಿ ಮಾಧ್ಯಮಗಳ ಪಾತ್ರ

ಲಿಗಚೇವ್‌ರ ನಿರೂಪಣೆಯಿಂದ ಸ್ಪಷ್ಟವಾಗಿ ಕಂಡುಬರುವುದು- 'ಗ್ಲಾಸ್‌ನೋಸ್ಟ್' ಹೆಸರಿನಲ್ಲಿ ಕಮ್ಯುನಿಸ್ಟ್ ಪಕ್ಷ ಹಾಗೂ ಸಮಾಜವಾದಿ ಸಾಧನೆಗಳನ್ನು ಹಳಿಯಲು- ಸುದ್ದಿ ಮಾಧ್ಯಮಗಳನ್ನು ಉದ್ದೇಶವಾಗಿ ಬಳಸಿದ ರೀತಿ. ದೊಡ್ಡ ಪ್ರಸಾರವಿರುವ ಪತ್ರಿಕೆ ಹಾಗೂ ನಿಯತಕಾಲಿಕಗಳಲ್ಲಿ ಆರಿಸಲಾದ ಸಂಪಾದಕರುಗಳನ್ನು ನೇಮಿಸಲಾಯಿತು. ಪತ್ರಿಕೆಗಳು ಕ್ರಮೇಣ ಕಮ್ಯುನಿಸ್ಟ್-ವಿರೋಧಿ, ಪಕ್ಷ- ವಿರೋಧಿ ಪ್ರಚಾರದಲ್ಲಿ ಭರದಿಂದ ತೊಡಗಿದ್ದರ ಬಗ್ಗೆ ಕೇಂದ್ರ ಸಮಿತಿಯಲ್ಲಿ ಚರ್ಚೆ, ಹಾಗೂ ಮಧ್ಯಪ್ರವೇಶದ ಪ್ರಯತ್ನಗಳನ್ನು ಗೋರ್ಬಚೇವ್ ಹಾಗೂ ಇಬ್ಬರು ಇತರ ಪಾಲಿಟ್‌ಬ್ಯೂರೋ ಸದಸ್ಯರು ಯಾಕೊವ್ಲೆವ್ ಹಾಗೂ ಮೆಡ್‌ವೆಡವ್ ತಡೆಯುತ್ತಿದ್ದರು. ಈ ಇಬ್ಬರು 'ಸಿದ್ಧಾಂತ'ದ ವಿಭಾಗವನ್ನು ತಮ್ಮ ಕೈಗೆ ತೆಗೆದುಕೊಂಡಿದ್ದರು.

ದಾರಿತಪ್ಪಿದ ಪೆರೆಸ್ಟ್ರೊಯಿಕಾ

ಸಮಾಜವಾದಿ ಪುನರ್ನವೀಕರಣ ಯೋಜನೆ ಬರಬರುತ್ತಾ, ಹೇಗೆ ಅವರ ಉದ್ದೇಶಗಳು ತಿರುವು ಮುರುವಾದವು ಎಂದು ಲಿಗಚೇವ್ ವಿವರವಾಗಿ ನಿರೂಪಿಸಿದ್ದಾರೆ. ಲಿಗಚೆವ್, ರಿಝುಕೊವ್ ಇತ್ಯಾದಿ ನಾಯಕರು ರೂಪಿಸಿದ ಪೆರೆಸ್ಟ್ರೊಯಿಕಾವನ್ನು ಬೆಂಬಲಿಸುತ್ತಿದ್ದ ಗೋರ್ಬಚೇವ್ ಬರಬರುತ್ತಾ ಯಾಕೊವ್ಲೆವ್, ಮೆಡ್‌ವೆಡೆವ್‌ರ ಪ್ರಭಾವದಿಂದ ಸಮಾಜವಾದವನ್ನೇ ಧಿಕ್ಕರಿಸುವುದು ಆರಂಭವಾಯಿತು.

ಉದಾಹರಣೆಗೆ 'ಸಮಾಜವಾದಿ ಬಹುಪಕ್ಷೀಯತೆ' ಬರಬರುತ್ತಾ ಅರಾಜಕೀಯ ಬಹುಪಕ್ಷೀಯತೆ ಆಯಿತು. 'ಸಮಾಜವಾದಿ ಆಸ್ತಿಯ ವಿವಿಧ ರೂಪಗಳು' ಬರಬರುತ್ತಾ 'ವಿವಿಧ ಆಸ್ತಿಯ ರೂಪಗಳು' ಆಯಿತು.

ಪೆರೆಸ್ಟ್ರೊಯಿಕಾದ ಮೂರನೇ ವರ್ಷದಲ್ಲಿ 'ಪೆರೆಸ್ಟ್ರೊಯಿಕಾದ ವಿರೋಧಿ'ಗಳ ಮೇಲೆ ತೀವ್ರ ಆಕ್ರಮಣ ಆರಂಭವಾಯಿತು. ಲಿಗಚೆವ್‌ರನ್ನು ಮುಖ್ಯ 'ಸಂಪ್ರದಾಯವಾದಿ ಎಂದು ಹಳಿಯಲಾಯಿತು. ಸಮಾಜವಾದವನ್ನು ಉಳಿಸಿ ಬೆಳೆಸಬೇಕೆನ್ನುವವರು 'ಸಂಪ್ರದಾಯವಾದಿ'ಗಳು ಎಂದೂ, ಸಮಾಜವಾದವನ್ನು ಕಳಚಿ ಹಾಕಬೇಕೆನ್ನುವವರನ್ನು ಕ್ರಾಂತಿಕಾರಿಗಳು ಅಥವಾ ಪ್ರಜಾಪ್ರಭುತ್ವವಾದಿಗಳು ಎಂಬ ಲೇಬಲ್ ಹಚ್ಚಲಾಯಿತು.

ಈ 'ಸಂಪ್ರದಾಯವಾದಿ'ಗಳ ವಿರುದ್ಧದ ಹೋರಾಟದ ಹೆಸರಲ್ಲಿ ಕ್ರಾಂತಿ-ವಿರೋಧಿ ಚಟುವಟಿಕೆ ತೀವ್ರವಾಯಿತು. 28ನೇ ಮಹಾಧಿವೇಶನಕ್ಕೆ ಹಾಗೂ 1988 ರ ಪಾರ್ಲಿಮೆಂಟು ಚುನಾವಣೆಗಳಲ್ಲಿ ಕಾರ್ಮಿಕರು, ರೈತರ ಪ್ರಾತಿನಿಧ್ಯ ತೀವ್ರವಾಗಿ ಕಡಿಮೆಮಾಡಲಾಯಿತು. ಸಮಾಜವಾದಿ ಸಾಧನೆಗಳು, ಪಕ್ಷದ ಪಾತ್ರ ಹಾಗೂ ಕೆಂಪು ಸೈನ್ಯವನ್ನು ಹಳಿಯುವುದನ್ನು ಪ್ರಶ್ನಿಸಿದವರನ್ನು 'ಪೆರೆಸ್ಟ್ರೊಯಿಕಾದ ವಿರೋಧಿಗಳು' ಎಂದು ಹಣೆಪಟ್ಟಿ ಹಚ್ಚಲಾಯಿತು.

ಬೂರ್ಜ್ವಾ ರಾಷ್ಟ್ರೀಯತಾವಾದ

ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಹಳಿಯುವುದರ ಜತೆ ಬೂರ್ಜ್ವಾ ರಾಷ್ಟ್ರೀಯತಾವಾದ ಹಾಗೂ ಪ್ರತ್ಯೇಕತಾವಾದದ ದಂಕಿ ಉರಿಯಲಾರಂಭಿಸಿತು. ಈ ಅಪಾಯವನ್ನು ಮನಗಂಡು, ಅದನ್ನು ಎದುರಿಸುವುದರ ಬದಲು ಗೋರ್ಬಚೇವ್ ನಾಯಕತ್ವ ಪೆರೆಸ್ಟ್ರೊಯಿಕಾದ ಕೃತಕ 'ವಿರೋಧಿ'ಗಳ ಜತೆ ಹೋರಾಟದಲ್ಲಿ ತನ್ನ ಶಕ್ತಿವ್ಯಯ ಮಾಡುತ್ತಿತ್ತು ಎಂದು ಲಿಗಚೇವ್ ಉದಾಹರಣೆ ಸಹಿತ ಹೇಳುತ್ತಾರೆ. ಲಿಥುವೇನಿಯಾದ ಪ್ರತ್ಯೇಕತವಾದದ ಬೆಳವಣಿಗೆ, ಅಲ್ಲಿನ ಪಕ್ಷದಲ್ಲಿ ಒಡಕು ಹಾಗೂ ಯಾಕೊಲೆವ್ ಅದಕ್ಕೆ ಕುಮ್ಮಕ್ಕು ಕೊಟ್ಟದ್ದು, ಜಾರ್ಜಿಯಾದ ರಾಜಧಾನಿಯಲ್ಲಿ 1989 ಘಟನೆಗಳು- ಇವನ್ನು ಪಕ್ಷ ನಿರ್ವಹಿಸಿದ ರೀತಿ - ಇವನ್ನು ಸಾರಿ ಹೇಳುತ್ತದೆ.

ಗೋರ್ಬಚೇವ್‌ರವರಲ್ಲಿ ಆದ ಈ ಬದಲಾವಣೆ 'ಕ್ರುಶ್ಚೇವ್ ಭಯ'ದಿಂದ ಎಂಬುದು ಲಿಗಚೇವ್ ಅಭಿಪ್ರಾಯ. ಕೇಂದ್ರ ಸಮಿತಿಯ 'ಸಂಪ್ರದಾಯವಾದಿ'ಗಳು ಗೋರ್ಬಚೇವ್‌ರನ್ನು ಕಿತ್ತೊಗೆಯುತ್ತಾರೆ ಎಂದು ಅವರಲ್ಲಿ ಭಯ ಹುಟ್ಟಿಸಲಾಗಿತ್ತು. ಗೋರ್ಬಚೇವ್‌ರೇ ಪ್ರತಿಕ್ರಾಂತಿಯ ಸಾಧನವಾದರು ಎಂದು ಲಿಗಚೇವ್ ಹೇಳಲು ಅವರ ಎರಡನೇ ಸಂಪುಟಕ್ಕೆ ಕಾಯಬೇಕೇನೊ!

ನಿಷ್ಕ್ರಿಯಗೊಳಿಸಲಾದ ಸೆಕ್ರೆಟಾರಿಯೆಟ್

ಲಿಗಚೆವ್ 1985 ರಿಂದ ಕೇಂದ್ರ ಸಮಿತಿಯ ಸೆಕ್ರೆಟಾರಿಯೆಟ್ ಸದಸ್ಯರಾಗಿದ್ದರು. ದ್ವಿತೀಯ ಕಾರ್ಯದರ್ಶಿ ಸಹ ಆಗಿದ್ದರು. 1989ರ ಇಡೀ ವರ್ಷದಲ್ಲಿ ಸೆಕ್ರೆಟಾರಿಯೆಟ್ಟನ್ನು ಗೋರ್ಬಚೇವ್ ಗ್ಯಾಂಗ್ ಹೇಗೆ ನಿಷ್ಕ್ರಿಯಗೊಳಿಸಿತು ಎಂದು ಲಿಗಚೇವ್ ಪುಸ್ತಕದಲ್ಲಿ ನಿರೂಪಿಸುತ್ತಾರೆ. ಇದರಿಂದಾಗಿ ಗೋರ್ಬಚೇವ್ ಗ್ಯಾಂಗ್‌ಗೆ ಪಾರ್ಟಿಯನ್ನು ಧಿಕ್ಕರಿಸಿ ದೇಶಾ ಬಿಟ್ಟ ನಿರ್ಣಯ ಕೈಗೊಳ್ಳಲು ಸಾಧ್ಯವಾಯಿತೆನ್ನುತ್ತಾರೆ. ಲಿಗಚೇವ್ ಇದನ್ನು ಸತತವಾಗಿ ವಿರೋಧಿಸುತ್ತಾ ಬಂದರು. ಪಾಲಿಟ್‌ಬ್ಯೂರೋ ಕೇಂದ್ರ ಸಮಿತಿಗೆ ಹಲವಾರು ಪತ್ರ ಬರೆದರು. ಆದರೆ ಈ ಪತ್ರಗಳು ಪಾಲಿಟ್‌ಬ್ಯೂರೋ ಅಥವಾ ಕೇಂದ್ರ ಸಮಿತಿ ಸದಸ್ಯರಿಗೆ ದೊರೆಯದಂತೆ ಗೋರ್ಬಚೇವ್ ನಾಯಕತ್ವ ನೋಡಿಕೊಂಡಿತು. ಮೇ 1990 ರಲ್ಲಿ ಅವರು ಬರೆದ ಪತ್ರವೊಂದರಲ್ಲಿ ಸಮಾಜವಾದಿ ಪುನರ್ನವೀಕರಣವಾಗುತ್ತದೆ ಅಥವಾ ಪ್ರತಿಯೊಂದು ಗಣರಾಜ್ಯ ಪ್ರತ್ಯೇಕವಾಗಿ ಬೇರೆ ಬೇರೆ ಸಮಾಜ ವ್ಯವಸ್ಥೆ ಜಾರಿಗೆ ಬರಬಹುದು ಎಂದು ಎಚ್ಚರಿಸಿದರು.

ಲಿಗಚೇವ್‌ರ ವಿರುದ್ಧ ವ್ಯಕ್ತಿಗತ ಆಕ್ರಮಣ ಆರಂಭಿಸಿದವು ಕಮ್ಯುನಿಸ್ಟ್-ವಿರೋಧಿ ಪತ್ರಿಕೆಗಳು ಅವರನ್ನು ಭ್ರಷ್ಟಾಚಾರದ ಸುಳ್ಳು ಕೇಸಿನಲ್ಲಿ ಸಿಕ್ಕಿಸಲು ಪ್ರಯತ್ನಿಸಲಾಯಿತು. ಕಮ್ಯುನಿಸ್ಟ್ ವಿರೋಧಿ ಪ್ರಚಾರವನ್ನು ಬಲವಾಗಿ ಟೀಕಿಸಿ ಬರೆದ ಒಂದು ಪತ್ರದ ಹಿಂದೆ ಲಿಗಚೇವ್ ಇದ್ದಾರೆ ಎಂದು ದೊಡ್ಡ ಹುಯಿಲೆಬ್ಬಿಸಲಾಯಿತು. ಈ ಪತ್ರವನ್ನು ಟೀಕಿಸಲು ಯಾವತ್ತೂ ಸಭೆ ಸೇರದ ಪಾಲಿಟ್‌ಬ್ಯೂರೋ ಹಲವು ದಿನಗಳ ಕಾಲ ಚರ್ಚೆ ನಡೆಸಿತು. ಇಂತಹ ಅಪಪ್ರಚಾರಕ್ಕೂ ಸೊಪ್ಪು ಹಾಕದೆ, ಲಿಗಚೇವ್ ರಾಜಿನಾಮೆ ನೀಡದೆ ಆಂತರಿಕ ಹೋರಾಟ ಮುಂದುವರೆಸಿದರು.

ಓದಲೇ ಬೇಕಾದ ಪುಸ್ತಕ

ಯೋಜನೆಗೆ ಅಡ್ಡಗಾಲು

ಸಾಮಾನ್ಯವಾಗಿ ತಿಳಿಯದ ಇನ್ನೊಂದು ಅಪರೂಪದ ಅಂಶ ಲಿಗಚೇವ್‌ರ ಪುಸ್ತಕದಲ್ಲಿ ಹೊರಬಿದ್ದಿದೆ. 1988 ಗೆ ತಯಾರಿಸಿದ ಯೋಜನೆ ಸರ್ಕಾರಿ ಕೆಲಸ ಕಾಯಕದಲ್ಲಿ 'ಕಾಂಟ್ರಾಕ್ಟ್ ಪದ್ಧತಿ'ಯನ್ನು ಹಂತ ಹಂತವಾಗಿ ಜಾರಿಗೆ ತರುವ ಯೋಜನೆಯನ್ನು ರಿಝುಕೊವ್ ಪೊಲಿಟ್‌ಬ್ಯೂರೋಗೆ ಮಂಡಿಸಿದರು. ಮೊದ ಮೊದಲು ಯಾಕೊಲೆವ್ ಹಾಗೂ ಮೆಡ್‌ವೆಡೆವ್ ಮಾತ್ರ ಈ ಯೋಜನೆಯನ್ನು ವಿರೋಧಿಸಿದರು. ಪೊಲಿಟ್‌ಬ್ಯೂರೋ ಬಹುಸಂಖ್ಯಾತ ಸದಸ್ಯರು ಇದಕ್ಕೆ ಬೆಂಬಲವಿದ್ದರು. ಆದರೆ ಗೋರ್ಬಚೆವ್ ಸಹ ಇದನ್ನು ಬಲವಾಗಿ ವಿರೋಧಿಸಿದಾಗ ಹೆಚ್ಚಿನ ಸದಸ್ಯರು ತಡವರಿಸಿದರು. ಈ ಯೋಜನೆ ಮಂಜೂರಾಗಲಿಲ್ಲ. ಇದರಿಂದಾಗಿ 1988 ರಲ್ಲಿ ಹಳೆಯ ನಿರ್ವಹಣಾ ಪದ್ಧತಿಯ ಬದಲು, ಹೊಸ ನಿರ್ವಹಣಾ ಪದ್ಧತಿ ವ್ಯವಸ್ಥಿತವಾಗಿ ಜಾರಿಗೆ ಬರಲಿಲ್ಲ. ಇದು ಪೂರ್ಣ ಅರಾಜಕತೆಗೆ ಎಡೆ ಮಾಡಿಕೊಟ್ಟಿತು. ಈ ಪೂರ್ಣ ಅರಾಜಕತೆಯನ್ನು ಸರಿಪಡಿಸುವ ಹೆಸರಿನಲ್ಲಿ ಬಂಡವಾಳಶಾಹಿ ಪುನಃ ಸ್ಥಾಪಿಸುವ '500 ದಿನಗಳ ಯೋಜನೆ' ಯ ಮಾತು ಬಂದದ್ದು, ಸೋವಿಯೆತ್ ಅರ್ಥವ್ಯವಸ್ಥೆಯನ್ನು ಪೂರ್ತಿ ನಾಶಮಾಡಿದ್ದು ಈ ಯೋಜನೆ.

ಪ್ರಧಾನ ಕಾರ್ಯದರ್ಶಿಯ ಏಕಾಧಿಕಾರ

ಲಿಗಚೇವ್‌ರ ಪುಸ್ತಕದಲ್ಲಿ ಇನ್ನೊಂದು ಎದ್ದು ಕಂಡು ಬರುವ ಅಂಶವೆಂದರೆ ಪಕ್ಷದ ಪ್ರಧಾನ ಕಾರ್ಯದರ್ಶಿಯಲ್ಲಿ ಅಧಿಕಾರದ ಕೇಂದ್ರೀಕರಣ. ಗ್ಲಾಸ್‌ನೊಸ್ತ್‌ನ ಹಾಗೂ 'ಸ್ಟಾಲಿನ್ ಭೂತ' ಓಡಿಸುವ ಬೊಬ್ಬೆ ನಡುವೆ ಪ್ರಧಾನ ಕಾರ್ಯದರ್ಶಿಯಲ್ಲಿ ವಿಪರೀತ ಅಧಿಕಾರ ಕೇಂದ್ರೀಕೃತವಾಗಿತ್ತು. ಬಹುಸಂಖ್ಯಾತ ಕೇಂದ್ರ ಸಮಿತಿ ಅಥವಾ ಪಾಲಿಟ್‌ಬ್ಯೂರೋ ಸದಸ್ಯರು ಗೋರ್ಬಚೇವ್‌ರನ್ನು ವಿರೋಧಿಸಿದಾಗಲೂ ಪ್ರಧಾನ ಕಾರ್ಯದರ್ಶಿಯ ನಿರ್ಣಯವೇ ಕೊನೆಯ ನಿರ್ಣಯವಾಗುತ್ತಿತ್ತು.

ಲಿಗಚೇವ್ ಸಹ ಈ ಧೋರಣೆ... ಯಾಗಿದ್ದಂತೆ ಕಾಣುತ್ತದೆ. ಸರಿಯಾದ ನೀತಿ, ಧೋರಣೆ ಇದ್ದಾಗ್ಯೂ ಪ್ರಧಾನ ಕಾರ್ಯದರ್ಶಿಯ ವಿರುದ್ಧ ರಾಜಕೀಯ ಸೈದ್ಧಾಂತಿಕ ಸವಾಲು ಒಡ್ಡುವುದಕ್ಕೆ ಹಿಂದೇಟು ಹೊಡೆಯುತ್ತಾರೆ. ಗೋರ್ಬಚೆವ್ ನಾಯಕತ್ವದ ಅಪಾಯ ಮನಗಾಣುವ ಬದಲು ಗೋರ್ಬಚೆವ್‌ರ ಬೆಂಬಲ ತನಗೆ ಸಿಗದ್ದು ದುರದೃಷ್ಟ ಎಂಬ ತೀರ್ಮಾನಕ್ಕೆ ಬರುತ್ತಾರೆ. ಇತರ ಸಾವಿರಾರು ನಿಷ್ಠ ಕಮ್ಯುನಿಸ್ಟರಂತೆ ಲಿಗಚೇವ್ ಪಕ್ಷದ ಐಕ್ಯತೆಗೆ ಬದ್ಧವಾಗಿದ್ದವರು. ಪಕ್ಷ ಒಡೆಯಬಾರದು ಎಂದು ಅವರ ಮುಖ್ಯ ಕಳಕಳಿಯಾಗಿತ್ತು. ಆದರೆ ಪಕ್ಷವನ್ನೇ ನಾಶಮಾಡಲಾಗುತ್ತಿದೆ ಎಂದು ಅವರು ಅರಿತುಕೊಳ್ಳುವಷ್ಟು ಹೊತ್ತಿಗೆ ಭಾರಿ ವಿಳಂಬವಾಗಿತ್ತು.

ಸೈದ್ಧಾಂತಿಕ ಮೊನಚಿನಲ್ಲಿ ಇಳಿತ, ಅಧಿಕಾರಶಾಹಿಯ ಬೆಳವಣಿಗೆ, ಜನರಿಂದ ... ದೂರಹೋಗಿರುವುದು ಲಿಗಚೇವ್‌ ... ಳಲ್ಲೂ ಕಾಣಬಹುದು. ಆದರೆ ಅದರ ... ಗಂಭೀರತೆಯನ್ನು ಲಿಗಚೇವ್ ಸಹ ... ಅರ್ಥಮಾಡಿಕೊಂಡಂತಿಲ್ಲ. ಪಾಶ್ಚಿಮಾತ್ಯ ದೇಶಗಳ ಬಗ್ಗೆ ಅವರ 'ಮುಗ್ಧತನ' ಕಂಡುಬರುತ್ತ... ಈ ಕ್ರಾಂತಿ ವಿರೋಧಿಗಳನ್ನು ಪಾಶ್ಚಿಮಾತ್ಯ ದೇಶಗಳು ಯಾಕೆ ಬೆಂಬಲಿಸುತ್ತಿವೆ ಎಂದು ಲಿಗಚೇವ್ ಆಶ್ಚರ್ಯ ವ್ಯಕ್ತಪಡಿಸುತ್ತಾರೆ! ಆದರೂ ಲಿಗಚೇವ್ ಪುಸ್ತಕ ಹಲವಾರು ಒಳನೋಟ ನೋಟಗಳನ್ನು ಕೊಡುವ ಗಮನಾರ್ಹ ಪುಸ್ತಕ.



ತ್ವಸಿದ್ದ ನಿಯೋಗವೊಂದು ಮುಖ್ಯಮಂತ್ರಿಗಳನ್ನು ಭೇಟ ಮಾಡಿ ಓಲ್ಸಾ ಪೋಲೀಸ್ ಗೋಳೀಬಾರಿನ ಬಗ್ಗೆ ಒಂದು ಮನವಿಯನ್ನು ಅರ್ಪಿಸಿ ಪರಿಹಾರಕ್ಕೆ ತನ್ನ ಒತ್ತಾಯಗಳನ್ನು ಮುಂದಿಟ್ಟಿತು. ಮುಖ್ಯಮಂತ್ರಿಗಳು ಈ ಒತ್ತಾಯಗಳನ್ನು ಪರಿಶೀಲಿಸುವ ಆಶ್ವಾಸನೆ ಕೊಟ್ಟರು.

ಮಧ್ಯಪ್ರದೇಶ: ರಾಜ್ಯವ್ಯಾಪಿ ಆಂದೋಳನ ಆರಂಭ

ಮಧ್ಯಪ್ರದೇಶದಲ್ಲಿ ಯಶಸ್ವೀ ಭಾರತ್ ಬಂದ್ ನಂತರ ಸಿಪಿಐ(ಎಂ)ನ ರಾಜ್ಯ ಘಟಕ ಹಾಗೂ ಸಾಮೂಹಿಕ ಸಂಘಟನೆಗಳು ಒಂದು ರಾಜ್ಯವ್ಯಾಪಿ ಆಂದೋಲನವನ್ನು ಆರಂಭಿಸಲು ನಿರ್ಧರಿಸಿವೆ. ಸೆಪ್ಟೆಂಬರ್ 13 ರಂದು ಆರಂಭವಾಗುವ ಈ ಆಂದೋಲನ ವಿವಿಧ ಜನವಿಭಾಗಗಳ ಬೇಡಿಕೆಗಳನ್ನು ಮುಂದಿಡುತ್ತಾ ಸೆಪ್ಟೆಂಬರ್ 20 ರಂದು ಒಂದು ಪ್ರತಿಭಟನಾ ಕಾರ್ಯಾಚರಣೆ ಹಾಗೂ ಸೆಪ್ಟೆಂಬರ್ 28 ರಂದು ರಾಜಭವನದೆದುರು 10 ಸಾವಿರಕ್ಕೂ ಹೆಚ್ಚು ಜನರ ಮತಪ್ರದರ್ಶನ ನಡೆಸಲಿದೆ. ಬೇಡಿಕೆಗಳನ್ನು ಈಡೇರಿಸದಿದ್ದರೆ ಅಕ್ಟೋಬರ್ 6 ರಿಂದ ರಾಜ್ಯಾದ್ಯಂತ ರಾಸ್ತಾ ರೋಕೋ ಕಾರ್ಯಕ್ರಮ ನಡೆಸಲಾಗುವುದು.

ನಾಲ್ಕು ವರ್ಷಗಳಿಂದ ಮಧ್ಯಪ್ರದೇಶದ ಬಹುಭಾಗ ಬರಪೀಡಿತವಾಗಿದೆ. ಆದರೆ ಹಿಂದಿನ ಬಿಜೆಪಿ ಆಡಳಿತವಾಗಲಿ, ಈಗಿನ ರಾಜ್ಯಪಾಲರ ಆಳ್ವಿಕೆಯಾಗಲೀ ಈ ಜಿಲ್ಲೆಗಳನ್ನು ಬರಪೀಡಿತವೆಂದು ಘೋಷಿಸುವ ಯೋಚನೆಯನ್ನು ಮಾಡಿಲ್ಲ. ರಾಜ್ಯಪಾಲರಂತೂ ಸರ್ವಪಕ್ಷ ಸಭೆ ಕರೆಯಲೂ ನಿರಾಕರಿಸಿದ್ದಾರೆ. ಎರಡು ಲಕ್ಷಕ್ಕೂ ಹೆಚ್ಚು ಕ್ಯಾಶುವಲ್ ಕೆಲಸಗಾರರಿಗೆ ಪಟ್ವಾ ಸರಕಾರ ವಾರ್ಷಿಕ ವೇತನ ಹೆಚ್ಚಳ ತುಟ್ಟಿಭತ್ಯೆ ನಿರಾಕರಿಸಿತ್ತು. ಈಗಲೂ ಅದು ಮುಂದುವರೆದಿದೆ. ಸರ್ಕಾರೀ ಇಲಾಖೆಗಳಲ್ಲಿ ಖಾಲಿ ಹುದ್ದೆಗಳಿದ್ದಾಗ್ಯೂ ಇವರನ್ನು ಖಾಯಂ ಮಾಡುತ್ತಿಲ್ಲ. ಶಾಲಾ-ಕಾಲೇಜು ಶುಲ್ಕಗಳನ್ನು ವಿಪರೀತ ಏರಿಸಲಾಗಿದೆ. ವಿದ್ಯಾರ್ಥಿ ಸಂಘಗಳ ಚುನಾವಣೆಗಳನ್ನು ನಿರ್ಬಂಧಿಸಲಾಗಿದೆ. ಇನ್ನು ಬಡರೈತರು, ಕೃಷಿ ಕೂಲಿಕಾರರ ಸಮಸ್ಯೆಗಳತ್ತ ಗಮನವೇ ನೀಡುತ್ತಿಲ್ಲ. ಆದಿವಾಸಿ ಭೂಮಿಯನ್ನು ಕಸಿದುಕೊಂಡಿರುವ ಬಗ್ಗೆ ಒಬ್ಬ ಪ್ರಮುಖ ಬಿಜೆಪಿ ಮುಖಂಡ ದಿಲೀಪ್ ಸಿಂಗ್ ಸುದೇವ್ ಮೇಲೆ ವಿವಿಧ ಕೋರ್ಟ್‌ಗಳಲ್ಲಿ 1,800 ಕೇಸುಗಳಿವೆ. ಕಾಂಗ್ರೆಸ್ ಮುಖಂಡ ಎಂ.ಎಸ್. ಸಿಂಘದೇವ್ ಮೇಲೆ 450 ಕೇಸುಗಳಿವೆ. ಈ ಎಲ್ಲಾ ಸಮಸ್ಯೆಗಳನ್ನು ಎತ್ತಿಕೊಂಡು ಈ ರಾಜ್ಯವ್ಯಾಪಿ ಆಂದೋಲನ ನಡೆಯುತ್ತಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಶೈಲೇಂದ್ರ ಶೈಲಿ ಹೇಳಿದ್ದಾರೆ.

ಒಟ್ಟಪಾಳಂ: ಯು.ಡಿ.ಎಫ್. ನಲ್ಲಿ ಗೊಂದಲ

ಒಟ್ಟಪಾಳಂನಲ್ಲಿ ಯು.ಡಿ.ಎಫ್. ಅಭ್ಯರ್ಥಿಯ ಶೋಚನೀಯ ಸೋಲು ಆ ರಂಗದೊಳಗಿನ ಮುಖ್ಯವಾಗಿ ಕಾಂಗ್ರೆಸ್-ಮುಸ್ಲಿಂ ಲೀಗ್ ಒಳಗಿನ ಗೊಂದಲವನ್ನು ವಿಪರೀತ ಹೆಚ್ಚಿಸಿದೆ.

ಮುಖ್ಯಮಂತ್ರಿ ಕರುಣಾಕಾರನ್ ಸೋಲಿಗೆ ಮುಸ್ಲಿಂ ಮತದಾರರು ಕಾರಣ ಎಂದಿರುವುದು ಕೇಂದ್ರ ಕಾಂಗ್ರೆ ಮುಖಂಡರನ್ನೂ ಕುಪಿತಗೊಳಿಸಿದೆ. ಮುಸ್ಲಿಂ ಲೀಗ್ ಮುಖಂಡರನ್ನೂ ಕುಪಿತಗೊಳಿಸಿದೆ.

ಈ ಉಪಚುನಾವಣೆಯ ಸೋಲಿಗೆ ಮುಸ್ಲಿಂ ಲೀಗ್ ಕಾರಣವಲ್ಲ ಎಂದು ಆ ಪಕ್ಷದ ವಿಧಾನಸಭಾ ಮುಖಂಡ ಹಾಗೂ ಕೈಗಾರಿಕಾ ಮಂತ್ರಿ ಪಿ.ಕೆ. ಕುಂಜಲಿಕುಟ್ಟಿ ಹೇಳಿದ್ದಾರೆ. ಬಾಬ್ರಿ ಮಸೀದಿ ಧ್ವಂಸದ ನಂತರ ಇದು ಮೊದಲ ಚುನಾವಣೆಯಾದ್ದರಿಂದ ಕಾಂಗ್ರೆ ಅಭ್ಯರ್ಥಿಗೆ ಮುಸ್ಲಿಂ ಮತ ಪಡೆಯುವುದು ಕಷ್ಟವಾಯಿತು ಎಂದಿರುವ ಅವರು ಯುಡಿಎಫ್‌ಗೊಳಗಿನ ಪ್ರಶ್ನೆಗಳೂ ಈ ಸೋಲಿಗೆ ಕಾರಣವಲ್ಲ ಎಂದು ಹೇಳುವುದರಿಂದ ಯಾರಿಗೂ ಪ್ರಯೋಜನವಿಲ್ಲ ಎಂದರು. ಲೀಗ್ ರಂಗಕ್ಕಿಳಿದು ಚುನಾವಣಾ ಕೆಲಸ ಮಾಡಿದ ಮೇಲೆಯೇ ಅಲ್ಲಿ ಪ್ರಚಾರ ಶುರುವಾದದ್ದು. ಇಲ್ಲವಾದರೆ ಎಲ್.ಡಿ.ಎಫ್. ಇನ್ನೂ ದೊಡ್ಡ ಅಂತರದಿಂದ ಗೆಲ್ಲುತ್ತಿತ್ತು ಎಂದು ಅವರು ವಾದಿಸಿದ್ದಾರೆ.

ಇದಕ್ಕೆ ಮೊದಲು ಮುಖ್ಯಮಂತ್ರಿಗಳು ಈ ಸೋಲು ಅನಿರೀಕ್ಷಿತ ಎನ್ನುತ್ತಾ ಅದಕ್ಕೆ ಮುಸ್ಲಿ ಮತದಾರರು ಕಾರಣ ಎಂದಿದ್ದರು. ಅವರು ಬಾಬ್ರಿ ಮಸೀದಿ ಧ್ವಂಸದ ಬಗ್ಗೆ ಸಿಟ್ಟನ್ನು ವ್ಯಕ್ತಪಡಿಸಿದ್ದರು. ಆದರೆ ಇದು ತಕ್ಷಣದ ಪ್ರತಿಕ್ರಿಯೆಯಷ್ಟೆ, ಮುಂದೆ ಹೀಗಾಗುವುದಿಲ್ಲ ಎಂದು ತನ್ನನ್ನೇ ಸಮಾಧಾನಮಾಡಿಕೊಂಡಿದ್ದರು.

ಕಾಂಗ್ರೆ ಭಿನ್ನಮತೀಯ ಮುಖಂಡ ಹಾಗೂ ಕೇರಳದ ಕಾಂಗ್ರೆ ಉಪಾಧ್ಯಕ್ಷ ಕಾರ್ತಿಕೇಯನ್ ಈ ರೀತಿ ಯಾವುದೇ ಜನವಿಭಾಗವನ್ನು ದೂರುವುದು ಸರಿಯಲ್ಲ ಎಂದರೆ, ಮಾಜಿ ಕೇಂದ್ರ ಮಂತ್ರಿ ಎಂ. ರಾಮಚಂದ್ರನ್ ಇದನ್ನೊಂದು ಆಘಾತವಾಗಿ ಪರಿಗಣಿಸಿ ನಿಜವಾದ ಆತ್ಮಪರೀಕ್ಷೆ ಮಾಡಿಕೊಳ್ಳಬೇಕು ಎಂದಿದ್ದಾರೆ. ಮಾಜಿ ಸ್ಪೀಕರ್ ಹಾಗೂ ಇನ್ನೊಬ್ಬ ಕಾಂಗ್ರೆ ಭಿನ್ನಮತೀಯ ವಿ.ಎಂ. ಸುಧೀರನ್ ತಪ್ಪು ನೀತಿಗಳನ್ನು, ತಪ್ಪು ಕಾರ್ಯವೈಖರಿಗಳನ್ನು ಪರೀಕ್ಷಿಸಿ ಸರಿಪಡಿಸಿಕೊಳ್ಳದಿದ್ದರೆ ಕಾಂಗ್ರೆ ರಾಜ್ಯದಲ್ಲಿ ಇನ್ನೂ ಹೆಚ್ಚಿನ ಬೆಲೆ ತೆರಬೇಕಾದೀತು ಎಂದು ಎಚ್ಚರಿಸಿದ್ದಾರೆ.

ಮುಸ್ಲಿಂ ಲೀಗ್‌ನ ಭಿನ್ನಮತೀಯರು, ಅಖಿಲ ಭಾರತ ಅಧ್ಯಕ್ಷ ಸುಲೇಮಾನ್ ಸೇಟ್‌ರ ಬೆಂಬಲಿಗರು ರಾಜ್ಯ ಮುಖಂಡರು ವಿಫಲರಾಗಿದ್ದಾರೆ ಎಂದು ದೂಷಿಸಿದ್ದಾರೆ. ಈ ಚುನಾವಣಾ ಕ್ಷೇತ್ರದಲ್ಲಿ ಮುಸ್ಲಿಂ ಲೀಗಿನ ರಾಜ್ಯ ಅಧ್ಯಕ್ಷರು 170 ಕ್ಕೂ ಹೆಚ್ಚು ಸಭೆ ನಡೆಸಿದರೂ ಮಂಗಳಾರತಿ ಮಾಡಿಸಿಕೊಂಡರು ಎಂದು ಅವರು ಹೇಳಿದ್ದಾರೆ.

ಕೇರಳ ಬಿಜೆಪಿಯಲ್ಲಿ ಒಡಕು

ಕೇರಳದಲ್ಲಿ ಬಿಜೆಪಿ ಇಬ್ಭಾಗವಾಗುತ್ತಿದೆ. ಕಾಸರಗೋಡಿನಲ್ಲಿ ಸೆಪ್ಟೆಂಬರ್ 8 ರಂದು ಬಿಜೆಪಿ ಭಿನ್ನಮತೀಯರ ಒಂದು ಸಮಾವೇಶ ನಡೆದು "ಪ್ರಗತಿಪರ ಭಾರತೀಯ ಜನತಾ ಪಾರ್ಟಿ" ಹುಟ್ಟಿಕೊಂಡಿದೆ. ವಕೀಲರಾದ ಮಾಲಿಂಕ ಭಟ್ ಇದರ ಅಧ್ಯಕ್ಷರಾಗಿದ್ದಾರೆ. ಕಳೆದ ಒಂದು ವರ್ಷದಿಂದ ಬಿಜೆಪಿಯ ಕಾಸರಗೋಡು ಜಿಲ್ಲಾ ಘಟಕ ಸ್ವತಂತ್ರವಾಗಿ ಕೆಲಸ ಮಾಡುತ್ತಿತ್ತು. ಈ ಸಮಾವೇಶ ಕಾಸರಗೋಡು, ಕಣ್ಣಾನೂರು ಜಿಲ್ಲೆಗಳಲ್ಲಿ ಡಿಸೆಂಬರ್ 6 ರ ಅಯೋಧ್ಯಾ ಘಟನೆಗಳ ನಂತರವೂ ಸಹಕಾರಿ ಸಂಘಗಳಲ್ಲಿ ಕಾಂಗ್ರೆಸ್(ಐ) ಹಾಗೂ ಮುಸ್ಲಿಂ ಲೀಗ್‌ನೊಡನೆ ಹೊಂದಾಣಿಕೆಯ ನೀತಿಯನ್ನು ಪ್ರತಿಭಟಿಸಿತು. ಅಕ್ಟೋಬರ್‌ನಲ್ಲಿ ಒಂದು ರಾಜ್ಯಮಟ್ಟದ ಸಭೆ ನಡೆದು ಹೊಸ ಹೆಸರನ್ನು ಅಂತಿಮವಾಗಿ ಅಂಗೀಕರಿಸಲಾಗುವುದು ಎಂದು ಈ ಸಮಾವೇಶದ ಸಂಘಟಕರು ಹೇಳಿದ್ದಾರೆ.

ರಮೇಶ್ ಭಂಡಾರಿಯ ವಜಾಕ್ಕೆ ತ್ರಿಪುರಾ ಸರ್ಕಾರದ ಆಗ್ರಹ

ರಮೇಶ್ ಭಂಡಾರಿಯವರನ್ನು ತಕ್ಷಣ ತ್ರಿಪುರಾ ರಾಜ್ಯಪಾಲರ ಹುದ್ದೆಯಿಂದ ವಜಾ ಮಾಡಬೇಕು ಎಂದು ತ್ರಿಪುರಾ ಎಡರಂಗ ಸಮಿತಿ ಒತ್ತಾಯಿಸಿದೆ. ಅವರು ಹರ್ಷದ್ ಮೆಹ್ತಾ ಲಂಚ ಪ್ರಕರಣದಲ್ಲಿ ಹಾಗೂ ರಾಜ್ಯದ ಚುನಾಯಿತ ಸರ್ಕಾರದ ವಿರುದ್ಧ ತನ್ನ ಅಧಿಕಾರಸ್ಥಾನದ ದುರುಪಯೋಗ ಮಾಡಿಕೊಂಡಿದ್ದಾರೆ. ಇಂತಹ ಪಿತೂರಿಗಾರನಿಗೆ ರಾಜ್ಯಪಾಲರ ಹುದ್ದೆಯಲ್ಲಿ ಮುಂದುವರೆಯುವ ನೈತಿಕ ಹಕ್ಕು ಇಲ್ಲ ಎಂದು ಎಡರಂಗದ ಹೇಳಿಕೆ ತಿಳಿಸಿದೆ. ಇವರನ್ನು ರಾಜ್ಯಪಾಲರಾಗಿ ನೇಮಿಸುವ ಮೊದಲು ಕೇಂದ್ರ ಸರ್ಕಾರ ರಾಜ್ಯ ಮಂತ್ರಿಗಳೊಡನೆ ಸಮಾಲೋಚಿಸಿಲ್ಲ ಎಂದೂ ಎಡರಂಗ ಸಮಿತಿ ಹೇಳಿದೆ. ಇದು ಸರ್ಕಾರಿಯಾ ಆಯೋಗದ ಶಿಫಾರಸಿನ ಉಲ್ಲಂಘನೆಯಾಗಿದೆ.

ರಾಜ್ಯಪಾಲರ ಪಾತ್ರದ ಬಗ್ಗೆ ಮುಖ್ಯಮಂತ್ರಿ ದಶರಥ್ ದೇಬ್ ಅಸಂತೋಷ ವ್ಯಕ್ತಪಡಿಸಿದ್ದಾರೆ. ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಾ ರಣಧೀರ್ ಜೈನ್ ಎಂಬಾತನೊಂದಿಗೆ ಟೆಲಿಫೋನ್ ಮಾತುಕತೆಯಲ್ಲಿ ಕಂಡುಬಂದ ಎಡರಂಗ ಸರ್ಕಾರದ ಬಗ್ಗೆ ಅವರ ನಿಲುವನ್ನು ನೋಡಿದರೆ ಅದರಲ್ಲಿ ರಾಜ್ಯದ ಜನತೆಗೆ ಅಶುಭ ಸೂಚನೆಗಳು ಕಾಣುತ್ತಿವೆ ಎಂದು ದಶರಥ್ ದೇಬ್ ಹೇಳಿದರು. ಒಂದು ರಾಜ್ಯದ ಮುಖ್ಯಮಂತ್ರಿ ಅಸ್ವಸ್ಥರಾಗಿದ್ದರೆ, ಅಥವಾ ಸತ್ತರೂ ಕೂಡಾ ರಾಜ್ಯಪಾಲರು ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸು ಮಾಡುವಂತಿಲ್ಲ. ರಮೇಶ್ ಭಂಡಾರಿ ಸಂವಿಧಾನಗಳ ಚೌಕಟ್ಟಿನೊಳಗೆ ಕೆಲಸ ಮಾಡುತ್ತಿಲ್ಲ ಎಂದರು.

ಬಿಹಾರ : ಲಲ್ಲೂ ಪ್ರಸಾದ್ ಸರಕಾರ ಯಾರ ಪರ ವಹಿಸುತ್ತದೆ?

ಬಿಹಾರದ ಲಲ್ಲೂ ಪ್ರಸಾದ್ ಯಾದವ್ ಸರಕಾರಕ್ಕೆ ಈಗ ಪರೀಕ್ಷೆಯ ಸಮಯ. ಅದು ರಾಜ್ಯದ ಜನಗಳ, ಪ್ರಜಾಪ್ರಭುತ್ವ ಆಂದೋಲನದ ಬೆಂಬಲಕ್ಕೆ ನಿಲ್ಲುತ್ತದೋ ಅಥವಾ ರಾಜಕೀಯ ಕಾರ್ಯಕರ್ತರ ಕಗ್ಗೊಲೆಗೂ ಹೇಸದ ಪೋಲೀಸ್ ಮತ್ತು ಅಧಿಕಾರಶಾಹಿಯ ಜತೆ ನಿಲ್ಲುತ್ತದೋ ನೋಡಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಹೇಳಿದ್ದಾರೆ. ಅವರು ಆ ರಾಜ್ಯದ ನಳಂದ ಜಿಲ್ಲೆಯ ಹಿಲ್ಸಾದಲ್ಲಿ ಆಗಸ್ಟ್ 29 ರಂದು ಒಂದು ಬಾರೀ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಬಿಹಾರದಲ್ಲಿ ಈಗ ನಡೆಯುತ್ತಿರುವ ಭೂ ಹೋರಾಟದಲ್ಲಿ ಸಿಪಿಐ(ಎಂ)ನ ನಳಂದಾ ಜಿಲ್ಲಾ ಕಾರ್ಯದರ್ಶಿ ಕಾಂ. ಗೋವಿಂದ ಪ್ರಸಾದ್‌ರವರನ್ನು ಪೋಲೀಸರು ಹತ್ಯೆ ಮಾಡಿರುದನ್ನು ವಿರೋಧಿಸಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಿದ್ದರು. ಲಲ್ಲೂ ಸರಕಾರದ ಅಡಿಯಲ್ಲಿ ಎಡಪಕ್ಷಗಳ ಮುಖಂಡರ, ಕಾರ್ಯಕರ್ತರ ಕೊಲೆಯಾಗುತ್ತಿದೆ. ಈ ಬಗ್ಗೆ ಲಲ್ಲೂ ಪ್ರಸಾದ್ ಸರಕಾರದ ನಿಲುವು ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ನ ಆರ್ಥಿಕ ನೀತಿಗಳ ವಿರುದ್ಧ, ಕೋಮುವಾದದ ವಿರುದ್ಧ ಹೋರಾಡುತ್ತಿರುವ ಜನತಾದಳ ಹಾಗೂ ಎಡಪಕ್ಷಗಳ ನಡುವಿನ ಸಂಬಂಧದ ಭವಿಷ್ಯವನ್ನು ನಿರ್ಧರಿಸುತ್ತದೆ ಎಂದು ಸುರ್ಜಿತ್ ಎಚ್ಚರಿಸಿದರು. ಈ ಸಣ್ಣ ಪಟ್ಟಣದಲ್ಲೂ 25 ಸಾವಿರ ಜನ ನೆರೆದಿದ್ದು ರಾಜ್ಯದಲ್ಲಿ ಸಿಪಿಐ(ಎಂ) ನಡೆಸಿರುವ ಭೂ ಹೋರಾಟದ ಯಶಸ್ಸಿನ ಒಂದು ದ್ಯೋತಕವಾಗಿತ್ತು. ಸ್ಥಳೀಯ ಎಂ.ಪಿ. ಸಿಪಿಐನ ಬಿಜಯ್ ಕುಮಾರ್ ಯಾದವ್, ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಗಣೇಶ್ ಶಂಕರ್ ವಿದ್ಯಾರ್ಥಿ ಮತ್ತಿತರರೂ ಸಭೆಯನ್ನುದ್ದೇಶಿಸಿ ಮಾತನಾಡಿದರು. ಅದೇ ದಿನ ಸುರ್ಜಿತ್, ಗಣೇಶ ಶಂಕರ್ ವಿದ್ಯಾರ್ಥಿ ಮತ್ತಿತರ ಮುಖಂಡ

'ಭಾರತ್ ಬಂದ್' ಇನ್ನಷ್ಟು ಸುದ್ದಿಗಳು

ಕೊಪ್ಪಳ: ಭಾರತ್ ಬಂದ್‌ನ ಕರೆಗೆ ಕೊಪ್ಪಳದಲ್ಲಿ ಅಪೂರ್ವ ಬೆಂಬಲ ದೊರೆತು ಸಂಪೂರ್ಣ ಯಶಸ್ವಿಯಾಯಿತು. ಅಂಗಡಿ, ವ್ಯಾಪಾರ, ಸಿನಿಮಾ ಪ್ರದರ್ಶನ, ಶಾಲಾ-ಕಾಲೇಜ್‌ಗಳು ಮುಚ್ಚಿದ್ದವು. ಮೆರವಣಿಗೆ ನಡೆದ ಬಳಿಕ ಬಹಿರಂಗ ಸಭೆಯನ್ನುದ್ದೇಶಿಸಿ ಡಿ.ವೈ.ಎಫ್.ಐ ಅಧ್ಯಕ್ಷ ಕೆ. ವಾಸುದೇವ್, ಕಾರ್ಯದರ್ಶಿ ರಾಜಬಾಳೀ, ಸಿಪಿಐ(ಎಂ) ನಾಯಕ ಸಂಗಪ್ಪ ಮುಂತಾದವರು ಮಾತನಾಡಿದರು.

ಬೆಳಗಾಂ : ಎಡ ಚಳುವಳಿಯು ಜಿಲ್ಲೆಯಲ್ಲಿ ದುರ್ಬಲವಾಗಿದ್ದೂ ಸೆಪ್ಟೆಂಬರ್ 9 ರ ಭಾರತ್ ಬಂದ್ ಯಶಸ್ವಿಯಾಗಿ ನಡೆಯಿತು. ಇತ್ತೀಚೆಗೆ ಕಾರ್ಮಿಕ ವಿರೋಧಿ ಧೋರಣೆಗಳು ಹೆಚ್ಚೆಚ್ಚು ಪ್ರಕಟವಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಕಾರ್ಮಿಕರು ಹೆಚ್ಚೆಚ್ಚು ಸಂಘಟಿತರಾಗುತ್ತಿರುವುದು ವಿಶೇಷ ವರದಿಯಾಗಿದೆ. ಜಿಲ್ಲೆಯ ಸಾಮಾನ್ಯ ಜನರಿಗೆ ಕೇಂದ್ರ ಸರಕಾರದ ಆರ್ಥಿಕ ನೀತಿಯ ದುಷ್ಪರಿಣಾಮಗಳನ್ನು ಮನಮುಟ್ಟುವಂತೆ ಚಿತ್ರಿಸುವಲ್ಲಿ ಜಿಲ್ಲೆಯ ಪಕ್ಷದ, ಡಿ.ವೈ.ಎಫ್.ಐ, ಎಸ್.ಎಫ್.ಐ, ಸಿಐಟಿಯುನ ಸಂಗಾತಿಗಳು ಯಶಸ್ವಿಯಾಗಿದ್ದಾರೆ.

ರಾಮದುರ್ಗದಲ್ಲಿ ಜೈಲ್ ಭರೋ ಹಾಗೂ ಭಾರತ್ ಬಂದ್‌ಗೆ ತೀವ್ರ ಪ್ರಚಾರ ನಡೆಸಲಾಗಿತ್ತು. ಅನೇಕ ಸಭೆಗಳನ್ನು ನಡೆಸಲು ಪ್ರಯಾಣಿ ಭಾರತ್ ಬಂದ್‌ನಲ್ಲಿ ಭಾಗವಹಿಸಬೇಕು ಎಂಬುದನ್ನು ತಿಳಿ ಹೇಳಿದ್ದು ಭಾರತ್ ಬಂದ್ ಯಶಸ್ವಿಯಾಗಲು ಕಾರಣವಾಯಿತು. ಅಂದು ಸೆಪ್ಟೆಂಬರ್ 9, ರ ಬೆಳಿಗ್ಗೆಯಿಂದಲೇ ಎಲ್ಲಾ ಅಂಗಡಿ ಮುಂಗಟ್ಟು ಮುಚ್ಚಿ ಭಾರತ್ ಬಂದ್‌ನ್ನು ಯಶಸ್ವಿಯಾಗಿ ಆಚರಿಸಿದೆ.

ಸವದತ್ತಿಯಲ್ಲಿ ಭಾರತ್ ಬಂದ್ ಯಶಸ್ವಿಯಾಗಿದೆ. ಬಂದ್ ದಿನ ಸಾರಿಗೆ ಸಂಪೂರ್ಣ ಸ್ತಬ್ಧಗೊಂಡಿತ್ತು. ವ್ಯಾಪಾರ ವಹಿವಾಟು ಪೂರ್ಣ ನಿಂತಿತ್ತು. ಈ ಸಂದರ್ಭದಲ್ಲಿ ಭಾರೀ ಮೆರವಣಿಗೆ, ಸಭೆ ನಡೆಸಲಾಯಿತು.

ನಿಪ್ಪಾಣಿಯಲ್ಲಿಯೂ ಕೂಡಾ ಭಾರತ್ ಬಂದ್ ಯಶಸ್ವಿಯಾಗಿದೆ.

ಈ ಕೇಂದ್ರಗಳಲ್ಲಿ ಎರಡೂ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು. ಹಿಂದೂಸ್ತಾನ ಲೇಟೆಕ್ಸ್ ಕಾರ್ಖಾನೆಯಲ್ಲಿ ಭಾರತ್ ಬಂದ್ ದಿನ ಕೆಲಸಕ್ಕೆ ಹೋಗಲೆತ್ನಿಸಿದ ಐ.ಎನ್.ಟಿ.ಯು.ಸಿ.ಯ 'ಕಾರ್ಮಿಕರನ್ನು ತಡೆಯಲಾಯಿತು. ಪೋಲೀಸರು ಬಂದು ಲಾಠೀ ಚಾರ್ಜ್ ನಡೆಸಿ 35 ಕಾರ್ಮಿಕರನ್ನು ಬಂಧಿಸಿದರು. ನಂತರ ಹುಕ್ಕೇರಿಗೆ ಕರೆದೊಯ್ದು ಬಿಡುಗಡೆ ಮಾಡಿದರು.

ಜೈಲ್ ಭರೋ ಅಂಗವಾಗಿ ಜಿಲ್ಲೆಯಲ್ಲಿ ಸುಮಾರು 1,485 ಕಾರ್ಮಿಕರು ಬಂಧನಕ್ಕೆ ಒಳಗಾದರು. ಕಾರ್ಮಿಕ ಚಳವಳಿಗೆ ವಿಶಾಲ ಕಣ್ಣೋಟ ನೀಡಲು ಈ ಕಾರ್ಯಕ್ರಮದಿಂದ ಸಾಧ್ಯವಾಯಿತು. ಸಿಐಟಿಯು ಈ ಸಂದರ್ಭದಲ್ಲಿ ಪ್ರಮುಖ ಪಾತ್ರ ವಹಿಸಿತು. ಬೆಳಗಾಂನಲ್ಲಿ, ನಿಪ್ಪಾಣಿಯಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ನಮ್ಮ ಸಂಘಟನೆಗಳವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ರಾಮದುರ್ಗ, ಸವದತ್ತಿಗಳಲ್ಲಂತೂ ನಮ್ಮ ಸಂಘಟನೆಗಳು ಮಾತ್ರ ಇದ್ದು ಪೂರ್ತಿಯಾಗಿ ಪಾಲ್ಗೊಳ್ಳಲು ಸಾಧ್ಯವಾಯಿತು.

ಈ ಯಶಸ್ವಿ ಕಾರ್ಯಕ್ರಮಗಳು ಕಾರ್ಯಕರ್ತರಿಗೆ ಹೊಸ ಹುರುಪು ತಂದಿದ್ದು ಮುಂಬರಲಿರುವ ವ್ಯಾಪಕ ಹೋರಾಟಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆಗಳು. ಹೆಚ್ಚಾಗಿವೆ. ಮೊಟ್ಟ ಮೊದಲ ಬಾರಿಗೆ ವ್ಯಾಪಕ ಪ್ರಮಾಣದಲ್ಲಿ ಬೇರೆ ಬೇರೆ ಕೇಂದ್ರಗಳಲ್ಲಿ ಕಾರ್ಯಕ್ರಮ ನಡೆದದ್ದು ಸಕಾರಾತ್ಮಕ ಬೆಳವಣಿಗೆಯಾಗಿದೆ.

ಚಿಂಚೋಳಿ: ಸೆಪ್ಟೆಂಬರ್ 9 ರ ಭಾರತ್ ಬಂದ್ ಇಲ್ಲಿ ಸಂಪೂರ್ಣ ಯಶಸ್ವಿಯಾಗಿ ನಡೆದಿದೆ. ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಜನತಾದಳದ ಕಾರ್ಯಕರ್ತರು ಒಂದು ಮೆರವಣಿಗೆಯನ್ನು ನಡೆಸಿದರು. ಭಾರತ್ ಬಂದ್ ನಡೆಸಲು ಇಟ್ಟ ಕೇಂದ್ರ ಬೇಡಿಕೆಗಳಲ್ಲದೆ ಸ್ಥಳೀಯ ಬೇಡಿಕೆಗಳಾದ ಗೈರಾಣೆ ಭೂಮಿಗೆ ಪಟ್ಟಾ ನೀಡಲು, ತೊಗರಿ ಬೇಳೆ ಪರಿಹಾರ ಸಿಗದೇ ಇರುವವರಿಗೆ ಪರಿಹಾರ ನೀಡಬೇಕೆಂಬ ಬೇಡಿಕೆಗಳನ್ನಿಟ್ಟು ಈ ಬಂದ್‌ನ್ನು ಆಚರಿಸಲಾಯಿತು. ಮೆರವಣಿಗೆಯನ್ನುದ್ದೇಶಿಸಿ ಚಿಂಚೋಳಿ ಮಂಡಲ ಪ್ರಧಾನರಾದ ಬಸವರಾಜ ಹದನೂರ, ರಾಜಶೇಖರ ಜಕ್ಕಾ, ಮಲ್ಲಪ್ಪಾ ಬಿರಾಪೂರ ಮಾತನಾಡಿದರು. ಮೆರವಣಿಗೆಯ ನೇತೃತ್ವವನ್ನು ರೈತ ಸಂಘದ ಕಾರ್ಯಕರ್ತರಾದ ರಾಜಶೇಖರ ಜಕ್ಕಾ, ಭೀಮಶೆಟ್ಟಿ ಯಂಪಲ್ಲಿ, ಮಲ್ಲಿಕಾರ್ಜುನ ಕೊಡದಳ್ಳಿ, ದೇವೇಂದ್ರಪ್ಪಾ ಸಜ್ಜನ, ಬಿಸಲಪ್ಪಾ ಕೆರಳ್ಳಿ, ಎಸ್.ಎಸ್.ವಂಡಿನ ಕುಮಾರ, ತುಳಜಪ್ಪಾ ರಾಜಾ ವಹಿಸಿದ್ದರು.

ಕೆ.ಜಿ.ಎಫ್.: ಸಿಪಿಐ(ಎಂ), ಜನತಾದಳ ಸಿಐಟಿಯು, ಬಿಇಎಂಎಲ್. ಹಾಗೂ ಬಿಜಿಎಂಎಲ್‌ನ ಕಾರ್ಮಿಕ ಸಂಘಗಳು, ಬ್ಯಾಂಕ್, ಎಲ್.ಐ.ಸಿ., ಆಟೋ ಚಾಲಕರ, ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘಗಳು, ಡಿ.ವೈ.ಎಫ್.ಐ, ಎಸ್.ಎಫ್.ಐ ಹಾಗೂ ಇತರ ಸಂಘಟನೆಗಳು ಬೆಂಬಲಿಸಿದ್ದ ಭಾರತ್ ಬಂದ್ ಕೆಜಿಎಫ್‌ನಲ್ಲಿ ಸಂಪೂರ್ಣ ಯಶಸ್ಸನ್ನು ಕಂಡಿತು.

ಬಿಇಎಂಎಲ್. ಎಲ್.ಐ.ಸಿ. ವಾಣಿಜ್ಯ ಬ್ಯಾಂಕ್‌ಗಳು ಮತ್ತು ಇತರ ಅನೇಕ ಕಛೇರಿಗಳು ಕಾರ್ಯ ನಿರ್ವಹಿಸಲಿಲ್ಲ. ನಗರದಲ್ಲಿ ವ್ಯಾಪಾರ ವಹಿವಾಟುಗಳು ಪೂರ್ಣವಾಗಿ ಮುಚ್ಚಿತ್ತು. ಎಲ್ಲ ಬಗೆಯ ಅಂಗಡಿಗಳು, ಹೋಟೆಲ್‌ಗಳು, ಶಾಲಾ ಕಾಲೇಜುಗಳು ಬಂದ್ ಆಗಿದ್ದವು. ಚಿನ್ನದ ಗಣಿ (ಬಿ.ಜಿ.ಎಂ.ಎಲ್) ನಲ್ಲಿ ಶೇ. 75 ರಷ್ಟು ಕಾರ್ಮಿಕರು ಮುಷ್ಕರಕ್ಕೆ ಬೆಂಬಲ ನೀಡಿದ್ದರು.

ಬಂದ್‌ನಂದು ಕೆ.ಜಿ.ಎಫ್.ನ ಪ್ರಮುಖ ಬೀದಿಗಳಲ್ಲಿ ಹಾಗೂ ಬಡಾವಣೆಗಳಲ್ಲಿ ಸಾಮೂಹಿಕ ಸಂಘಟನೆಗಳ ನಾಯಕರು ಮತ್ತು ಕಾರ್ಯಕರ್ತರಿಂದ ಮೆರವಣಿಗೆ ನಡೆಸಿ ಸಾರ್ವಜನಿಕರ ಸಹಕಾರವನ್ನು ಕೋರಲಾಯಿತು.

ಬಂಗಾರಪೇಟೆ: ಸಿಪಿಐ(ಎಂ), ಜನತಾದಳ, ಡಿ.ವೈ.ಎಫ್.ಐ, ಯುವಜನತಾದಳ, ಎಸ್.ಎಫ್.ಐ ಸಂಘಟನೆಗಳ ನೇತೃತ್ವದಲ್ಲಿ ನಡೆದ ಬಂಗಾರಪೇಟೆ ಬಂದ್ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಪಟ್ಟಣದಲ್ಲಿ ವ್ಯಾಪಾರ ವಹಿವಾಟು ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು. ಅಂಗಡಿಗಳು, ಹೋಟೆಲ್‌ಗಳು, ಶಾಲಾ-ಕಾಲೇಜ್‌ಗಳು, ಬ್ಯಾಂಕ್‌ಗಳು, ಮತ್ತು ಸಣ್ಣ ಕೈಗಾರಿಕೆಗಳು ಬಂದ್ ಆಗಿದ್ದವು. ಆಟೋ ಬಸ್ ಮತ್ತಿತರ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು.

ಬಂದ್ ಅಂದು ಮೇಲ್ಕಂಡ ಸಂಘಟನೆಗಳ ಮುಖಂಡರುಗಳು ಹಾಗೂ ಕಾರ್ಯಕರ್ತರು ಪಟ್ಟಣದ ಪ್ರತಿಯೊಂದು ಬೀದಿ ಹಾಗೂ ಬಡಾವಣೆಗಳಲ್ಲಿ ಮೆರವಣಿಗೆ ನಡೆಸಿ ಬಂದ್‌ಗೆ ಸಾರ್ವಜನಿಕರ ಬೆಂಬಲವನ್ನು ಕೋರಿದರು.

ದೇತಮಂಗಲ : ಇಲ್ಲೂ ಸಹ ಬಂದ್ ಅತ್ಯಂತ ಯಶಸ್ವಿಯಾಗಿ ನಡೆಯಿತು. ಜನತಾದಳ ನೇತೃತ್ವದಲ್ಲಿ ಪೋಸ್ಟರ್, ಕರಪತ್ರಗಳ ಪ್ರಚಾರ ನಡೆಸಲಾಯಿತು. ಎಲ್ಲಾ ವ್ಯಾಪಾರ ವಹಿವಾಟು ಮುಚ್ಚಿತ್ತು. ಬ್ಯಾಂಕ್, ಶಾಲಾ ಕಾಲೇಜ್‌ಗಳು ಅಂಗಡಿ-ಹೋಟೆಲ್‌ಗಳು ಸಂಪೂರ್ಣ ಬಂದ್ ಆಗಿದ್ದವು.

ಬಂದ್ ದಿನ ಜನತಾದಳದ ಮುಖಂಡರು ಹಾಗೂ ಕಾರ್ಯಕರ್ತರು ಸಾರ್ವಜನಿಕರ ಸಹಕಾರ ಕೋರಲು ಪಟ್ಟಣದಲ್ಲಿ ಮೆರವಣಿಗೆ ನಡೆಸಿದರು.

ಪುಟ 7 ನೋಡಿ

ಶಿಮ್ಲಾದಲ್ಲಿ ಎಸ್.ಎಫ್.ಐಗೆ ಭಾರೀ ವಿಜಯ

ಹಿಮಾಚಲ ಪ್ರದೇಶದಾದ್ಯಂತ ನಡೆದ ಕಾಲೇಜು ಚುನಾವಣೆಗಳಲ್ಲಿ ಎಸ್.ಎಫ್.ಐ ತನ್ನ ಪ್ರಾಬಲ್ಯವನ್ನು ಉಳಿಸಿಕೊಂಡಿದೆ. ಹತ್ತು ಕಾಲೇಜುಗಳಲ್ಲಿ ಬಾರೀ ವಿಜಯ ಪಡೆದಿದ್ದಾರೆ. ಇತರ ಕಾಲೇಜುಗಳಲ್ಲಿ ಇತರ ಸಂಘಟನೆಗಳ ಜತೆಗೂಡಿ ಗೆದ್ದಿದೆ. ಸೆಪ್ಟೆಂಬರ್ 7 ರಂದು ಈ ಚುನಾವಣೆಗಳು ನಡೆದವು.

10 ಕಾಲೇಜುಗಳಲ್ಲಿ ಎಸ್.ಎಫ್.ಐ ಎಲ್ಲಾ ನಾಲ್ಕು ಪದಾಧಿಕಾರಿಗಳ ಸ್ಥಾನಗಳನ್ನು ಗೆದ್ದುಕೊಂಡಿತು.

ಈ ಫಲಿತಾಂಶಗಳು ವಿದ್ಯಾರ್ಥಿ ಸಮುದಾಯ ಕೋಮುವಾದಿ ಎ.ಬಿ.ವಿ.ಪಿ. ಹಾಗೂ ಸರ್ವಾಧಿಕಾರಶಾಹಿ, ಎನ್.ಎಸ್.ಯು.ಐ.ಯನ್ನು ಸಂಪೂರ್ಣ ತಿರಸ್ಕರಿಸಿರುತ್ತಾರೆ ಎಂದು ಮತ್ತೊಮ್ಮೆ ತೋರಿಸಿಕೊಟ್ಟಿದೆ ಎಂದು ಎಸ್.ಎಫ್.ಐ ರಾಜ್ಯ ಸಮಿತಿ ಹೇಳಿದೆ.

ರಾಜ್ಯದಲ್ಲಿ ಕಾಲೇಜುಗಳಲ್ಲಿ ನೇರ ಚುನಾವಣೆಗಳು ಆರಂಭವಾದಂದಿನಿಂದ ಎಸ್.ಎಫ್.ಐ ಪ್ರಬಲ ಸ್ಥಾನ ಪಡೆದಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈಗ ಎಲ್ಲರ ಕಣ್ಣು ಸದ್ಯದಲ್ಲೇ ನಡೆಯಲಿರುವ ಹಿಮಾಚಲ ಪ್ರದೇಶ ವಿಶ್ವವಿದ್ಯಾಲಯ ಚುನಾವಣೆಗಳ ಮೇಲಿದೆ. ಇಲ್ಲಿ ಕಳೆದ ಒಂದು ದಶಕಕ್ಕೂ ಹೆಚ್ಚು ಸಮಯದಿಂದ ಎಸ್.ಎಫ್.ಐ ತನ್ನ ಪ್ರಾಬಲ್ಯ ಕಾದುಕೊಂಡಿದೆ.

ರಶ್ಯಾದಲ್ಲಿ ಮತ್ತೆ ಗಂಭೀರ ಬಿಕ್ಕಟ್ಟು:ಪಾಶ್ಚಿಮಾತ್ಯರ ಬೆಂಬಲದಿಂದ ಸರ್ವಾಧಿಕಾರ ನಡೆಸಲು ಯೆಲ್ಟ್‌ಸಿನ್ ಪ್ರಯತ್ನ

ರಶ್ಯದಲ್ಲಿ ಆರ್ಥಿಕ ಪರಿಸ್ಥಿತಿ ಹದಗೆಡುತ್ತಿದ್ದಂತೆ ತನ್ನ ಸರ್ವಾಧಿಕಾರ ಹೇರುವ ಪ್ರಯತ್ನದಲ್ಲಿ ಯೆಲ್ಟ್‌ಸಿನ್ ಅಲ್ಲಿನ ಸರ್ವೋಚ್ಚ ಪಾರ್ಲಿಮೆಂಟನ್ನು ವಿಸರ್ಜಿಸುವ ಡಿಕ್ರಿ ಹೊರಡಿಸಿದ್ದಾನೆ. ಮುಂದಿನ ಮೂರು ತಿಂಗಳು ಕೇವಲ ತನ್ನ ಡಿಕ್ರಿಗಳಿಂದಲೇ ರಶ್ಯಾವನ್ನು ಆಳುವ ಅವನ ಹವಣಿಕೆಯನ್ನು ರಶ್ಯಾದ ಸರ್ವೋಚ್ಚ ನ್ಯಾಯಾಲಯ ಕಾನೂನು ಬಾಹಿರ ಎಂದು ಘೋಷಿಸಿದ್ದು, ಯೆಲ್ಟ್‌ಸಿನ್ ವಿಸರ್ಜಿಸಿದ್ದೇನೆಂದು ಘೋಷಿಸಿದ ಪಾರ್ಲಿಮೆಂಟ್ ಯೆಲ್ಟ್‌ಸಿನ್ ಮೇಲೆ ಮಹಾಭಿಯೋಗ ಹಾಕಿ ಆತನನ್ನು ಪದಚ್ಯುತಿಗೊಳಿಸಿದೆ. ಕೆಲವು ಸಮಯದ ಹಿಂದೆ ಭ್ರಷ್ಟಾಚಾರದ ಆಪಾದನೆ ಹಾಕಿ ಯೆಲ್ಟ್‌ಸಿನ್ ವಜಾಮಾಡಿದ್ದ ಉಪಾಧ್ಯಕ್ಷ ರುಸ್ತ ಕೋಯ್ ಅಧ್ಯಕ್ಷರೆಂದು ಘೋಷಿಸಿದೆ. ಸಂವಿಧಾನ ಬಾಹಿರ ಸರ್ವಾಧಿಕಾರಿ ಕೃತ್ಯದಲ್ಲಿ ಯೆಲ್ಟ್‌ಸಿನ್ ಪಕ್ಷವಹಿಸಿದ ರಕ್ಷಣಾ ಮಂತ್ರಿ ಮತ್ತು ಗೃಹಮಂತ್ರಿಗಳನ್ನು ಪಾರ್ಲಿಮೆಂಟ್ ವಜಾ ಮಾಡಿದೆ. ಇದರಿಂದಾಗಿ ರಶ್ಯಾದಲ್ಲಿ ಈಗ ಯೆಲ್ಟ್‌ಸಿನ್‌ನ ಸರ್ವಾಧಿಕಾರಶಾಹಿ ಹಾಗೂ ಪಾರ್ಲಿಮೆಂಟ್ ನಡುವೆ ತೀವ್ರ ಹೋರಾಟ ನಡೆದಿದೆ. ಪಶ್ಚಿಮದ ಬಂಡವಾಳಶಾಹಿ ದೇಶಗಳ ಆಳುವ ಮಂದಿ, ಯೆಲ್ಟ್‌ಸಿನ್ ರಶ್ಯಾದಲ್ಲಿ ಪ್ರಜಾಪ್ರಭುತ್ವದ ಪ್ರತೀಕ ಎಂದು ಸಾರುತ್ತಿದ್ದ ಮಂದಿ ಹೀಗೆ ಆತನೇ ಪ್ರಜಾಪ್ರಭುತ್ವವನ್ನು ಕತ್ತು ಮುರಿಯುತ್ತಿರುವಾಗ ಪ್ರಜಾಪ್ರಭುತ್ವಕ್ಕಿಂತ "ಆರ್ಥಿಕ ಸುಧಾರಣೆ" ಮುಖ್ಯ, ರಶ್ಯಾ ತಮಗೆ ಮುಕ್ತ ಮಾರುಕಟ್ಟೆಯಾಗಿ ದಕ್ಕುವುದೇ ಮುಖ್ಯ, ಎಂದು ಬಹಿರಂಗವಾಗಿ ಹೇಳಲಾರಂಭಿಸಿದ್ದಾರೆ. ಕ್ಲಿಂಟನ್, ಮೇಜರ್, ಇತ್ಯಾದಿಗಳು ಯೆಲ್ಟ್‌ಸಿನ್ ಸರ್ವಾಧಿಕಾರ ನಡೆಸಲು ಬೆಂಬಲವ್ಯಕ್ತಪಡಿಸಿದ್ದಾರೆ.

ಯೆಲ್ಟ್‌ಸಿನ್ ತನ್ನ ಸರ್ವಾಧಿಕಾರ ಮುಂದುವರೆಸಲು ಹೊಸ ಹೊಸ ತಂತ್ರಗಳನ್ನು ಹುಡುಕುತ್ತಲೇ ಇದ್ದ. ಏಪ್ರಿಲ್‌ನಲ್ಲಿ ಪಾರ್ಲಿಮೆಂಟರಿ ಹಾಗೂ ಅಧ್ಯಕ್ಷೀಯ ಮರುಚುನಾವಣೆ ಅದರ ಅವಧಿಯನ್ನು ಮೊದಲೇ ಮಾಡಬೇಕೆ ಎಂಬ ಪ್ರಶ್ನೆಗೆ ಜನಮತಸಂಗ್ರಹದಲ್ಲಿ 'ಬೇಡ' ಎಂಬ ಉತ್ತರಕ್ಕೆ ಬಹುಮತ ದೊರಕಿತ್ತು. ಅದನ್ನು ಧಿಕ್ಕರಿಸಿ ಪಾರ್ಲಿಮೆಂಟನ್ನು ವಿಸರ್ಜಿಸಿ ಅಧ್ಯಕ್ಷೀಯ ಮರುಚುನಾವಣೆ ನಡೆಸುವ ಪಾರ್ಲಿಮೆಂಟು ತನ್ನನ್ನು ತಾನೇ ವಿಸರ್ಜಿಸಿಕೊಳ್ಳದಿದ್ದರೆ, ಅದನ್ನು ವಿಸರ್ಜಿಸುವುದಾಗಿ ಅಧ್ಯಕ್ಷ ಯೆಲ್ಟ್‌ಸಿನ್ ಬೆದರಿಸಿದ್ದ. ಆರ್ಥಿಕ ಪರಿಸ್ಥಿತಿ ಹದಗೆಡುತ್ತಿರುವ ಈ ಸಂಧರ್ಭದಲ್ಲಿ ಹಾಗೂ ಪಾರ್ಲಿಮೆಂಟಿನಲ್ಲಿ ಈಗಾಗಲೇ ತನಗೆ ಬೆಂಬಲ ಅಲ್ಪಮತಕ್ಕೆ ಇಳಿದಿರುವುದರಿಂದ ಪಾರ್ಲಿಮೆಂಟು ತನ್ನನ್ನು ಅಧಿಕಾರದಿಂದ ಕೆಳಗಿಳಿಸ ಬಾರದೆಂಬ ಉದ್ದೇಶದಿಂದ ಈ ಬೆದರಿಕೆಯನ್ನು ಹಾಕಿದ್ದ.

ಈಗಾಗಲೇ ಹೊಸ ಸಂವಿಧಾನ ಒಂದನ್ನು ತಯಾರಿಸಿ ಅದರ ಪ್ರಕಾರ ಪಾರ್ಲಿಮೆಂಟು, ಅಧ್ಯಕ್ಷೀಯ ಚುನಾವಣೆಯನ್ನು ಪುನಃ ನಡೆಸಬೇಕೆಂದು ಯೆಲ್ಟ್‌ಸಿನ್ ಪ್ರಯತ್ನ ನಡೆಸುತ್ತಿದ್ದನು. ಈ ಹೊಸ ಸಂವಿಧಾನವನ್ನು ಪಾರ್ಲಿಮೆಂಟು ಮಂಜೂರು ಮಾಡುವ ಸಾಧ್ಯತೆ ಇಲ್ಲದಿರುವುದರಿಂದ, ಇದಕ್ಕಾಗಿ ಎಲ್ಲಾ ಸ್ವಾಯುತ್ತ ಪ್ರದೇಶಗಳ ಪ್ರತಿನಿಧಿಗಳು ಇರುವ ಮಂಡಳಿಯೊಂದನ್ನು ರಚಿಸಿ, ಅದರ ಮೂಲಕ ತನಗೆ ಬೇಕಾದ ಸಂವಿಧಾನ ಮಂಜೂರು ಮಾಡಿಸುವ ಸನ್ನಾಹ ನಡೆಸಿದ್ದನು.

ಆಗಸ್ಟ್ 19 ರಿಂದ 23ರವರೆಗೆ 1991 ರ ಆಗಸ್ಟ್ ಕ್ಷಿಪ್ರಕ್ರಾಂತಿಯ ಎರಡನೇ ವಾರ್ಷಿಕವನ್ನು ಭರ್ಜರಿಯಾಗಿ ನಡೆಸಬೇಕೆಂದು ಸರ್ಕಾರ ಪ್ರಯತ್ನಿಸಿತು. ಆದರೆ ಸಂದಿಗ್ಧ ಆರ್ಥಿಕ ಪರಿಸ್ಥಿತಿಯಿಂದಾಗಿ ಇದಕ್ಕೆ ಯಾವುದೇ ಜನ ಬೆಂಬಲ ದೊರೆಯಲಿಲ್ಲ. ಇದರಿಂದಾಗಿ ಯೆಲ್ಟ್‌ಸಿನ್‌ರ ಆತಂಕ, ಭಯ ಇನ್ನೂ ಹೆಚ್ಚಾಗಿದೆ. ತನ್ನ ಸರ್ವಾಧಿಕಾರ ಖಾಯಂಗೊಳಿಸುವ ಎಲ್ಲಾ ಪ್ರಯತ್ನ ಮಾಡುತ್ತಿದ್ದಾನೆ.

ಈ ಮೊದಲು ತನ್ನ ಸರ್ವಾಧಿಕಾರದ ನೀತಿಗಳನ್ನು ಯಾರಾದರೂ ವಿರೋಧಿಸಿದರೆ, ಅವರ ಮೇಲೆ ಭ್ರಷ್ಟಾಚಾರದ ಆಪಾದನೆ ಹಾಕಿ ಅಮಾನತುನಲ್ಲಿಡುವ ತಂತ್ರ ಹೂಡಿದ್ದಾನೆ. ಈ ನೀತಿಯಂತೆ ಉಪಾಧ್ಯಕ್ಷ ಹಾಗೂ ಒಬ್ಬ ಉಪಪ್ರಧಾನಿಯನ್ನು ಯೆಲ್ಟ್‌ಸಿನ್ ಭ್ರಷ್ಟಾಚಾರ ಆಪಾದನೆ ಹೊರಿಸಿ ಅಮಾನತ್ತಿನಲ್ಲಿಟ್ಟಿ.

ರಶ್ಯ ಆರ್ಥಿಕ ದುರವಸ್ಥೆ

ರಶ್ಯದ ಆರ್ಥಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಹಾಗೂ ಚರ್ಚಿಸಲು, ಸುಪ್ರಿಂ ಸೋವಿಯೆಟ್ ಆರ್ಥಿಕ ಸಭೆಯೊಂದನ್ನು ಕರೆದಿತ್ತು. ಅದರಲ್ಲಿ ಮೂರು ಸಾವಿರ ವಿಜ್ಞಾನಿಗಳು, ಸಾಮೂಹಿಕ ಕೃಷಿ ಫಾರಂ ಹಾಗೂ ಕಾರ್ಖಾನೆಗಳ ನಿರ್ದೇಶಕರುಗಳು, ಟ್ರೇಡ್ ಯೂನಿಯನ್ ನಾಯಕರು, ಸೋವಿಯೆಟ್ ಸದಸ್ಯರುಗಳು ಭಾಗವಹಿಸಿ ಆರ್ಥಿಕ ಪರಿಸ್ಥಿತಿ ಕುರಿತು ಚರ್ಚಿಸಿದರು. ಅಲ್ಲಿ ಚರ್ಚಿಸಲಾದ ವಿವರಗಳ ಪ್ರಕಾರ ರಶ್ಯಾದ ಆರ್ಥಿಕ ದುರವಸ್ಥೆಯ ಚಿತ್ರಣ ಭಯಾನಕವಾದದ್ದು.

1992 ರ ಆರಂಭದಿಂದ ಕೈಗಾರಿಕಾ ಉತ್ಪಾದನೆ 39.1 ಶೇಕಡಾರಷ್ಟು ಇಳಿದಿದೆ. ರಾಷ್ಟ್ರೀಯ ಆದಾಯ 1991-92 ರಲ್ಲಿ ಶೇಕಡಾ 11 ರಷ್ಟು 1992-93 ರಲ್ಲಿ ಶೇಕಡಾ 26 ರಷ್ಟು ಇಳಿದಿದೆ. ನಿಜ ಆದಾಯ 2.3 ರಷ್ಟು ಇಳಿದಿದೆ. ಕಾರ್ಮಿಕರ ಉತ್ಪಾದನೆ ಶೇಕಡಾ 19.5 ರಷ್ಟು ಇಳಿದಿದೆ.

ರಶ್ಯಾದ ಹಣದುಬ್ಬರ, ಬೆಲೆಏರಿಕೆ ಗಗನಕ್ಕೇರಿದೆ. ಯೆಲ್ಟ್‌ಸಿನ್ ಸರ್ಕಾರ 1990 ರಲ್ಲಿ 28 ಶತಕೋಟಿ ಡಾಲರ್ ಇದ್ದ ಋಣದ ಪೂರೈಕೆಯಲ್ಲಿ 1993 ರಲ್ಲಿ 2,203 ಶತಕೋಟಿ ಡಾಲರುಗಳಿಗೆ ಏರಿಸಿದೆ. 1992 ರಲ್ಲಿ ಬೆಲೆ 36 ಪಟ್ಟು ಏರಿತ್ತು.

ರಶ್ಯಾದ ಆರ್ಥಿಕದಲ್ಲಿ ಖಾಸಗೀಕರಣದಿಂದ ಉತ್ಪಾದಕ ಶಕ್ತಿಗಳು ಕುಸಿದಿವೆ. ಕೈಗಾರಿಕೀಕರಣ ಇಳಿಯುತ್ತಿದೆ. ಸಮಾಜದ ವೈಜ್ಞಾನಿಕ-ತಾಂತ್ರಿಕ-ಕೈಗಾರಿಕಾ ಸಾಧ್ಯತೆಗಳು ಆತಂಕಕಾರಿ ಪ್ರಮಾಣದಲ್ಲಿ ಇಳಿದಿವೆ.

ಸಮಾಜವಾದಿ ಸಫಲತೆಗಳನ್ನು ಪೂರ್ತಿಯಾಗಿ ಕಿತ್ತು ಬಿಸಾಡಲಾಗಿದೆ. 1992-93 ರಲ್ಲಿ ವೇತನ 12 ಪಟ್ಟು ಏರಿದರೆ ಬೆಲೆಗಳು 36 ಪಟ್ಟು ಏರಿದವು. ನರ್ಸರಿ ಕೇಂದ್ರಗಳ 32 ಪಟ್ಟು ಏರಿತು, ವೈದ್ಯಕೀಯ ಸೌಲಭ್ಯದ ಬೆಲೆ 20ಪಟ್ಟು ಏರಿತು. ಮಾಂಸದ ಬಳಕೆ ಶೇಕಡಾ 21ರಷ್ಟು, ಹಾಲಿನ ಬಳಕೆ 34 ಶೇಕಡಾದಷ್ಟು, ಹಣ್ಣು ಶೇಕಡಾ 22 ರಷ್ಟು ಇಳಿದಿದೆ. ಸರಾಸರಿ ರಶ್ಯನ್ನರ ಕ್ಯಾಲೋರಿ ಬಳಕೆ ಕೇವಲ 2,100 ಇದು 11 ವರ್ಷದ ಬಾಲಕನಿಗೆ ಸಾಗಾಕುವಷ್ಟು ಇದೆ ಅಷ್ಟೇ.

ಇಷ್ಟೆಲ್ಲಾ ಅಂಕೆ ಸಂಖ್ಯೆಗಳನ್ನು ಹೇಳಲಾದರೂ, ಮುಖ್ಯ ಚರ್ಚೆ ಸಮಾಜವಾದ ವ್ಯವಸ್ಥೆಯನ್ನು ಕಳಚಿ ಹಾಕಿ, ಬಂಡವಾಳಶಾಹಿ ಕಟ್ಟುವ ವ್ಯವಸ್ಥೆಯನ್ನು ಪ್ರಯತ್ನದ ಫಲ ಎಂಬ ಅಂಶ ಸ್ಪಷ್ಟವಾಗಿ ಬರಲೇ ಇಲ್ಲ. ಸಭೆಯಲ್ಲಿ ಮಧ್ಯಗಾಮಿಗಳು ಬಹುಸಂಖ್ಯಾಕರಾಗಿದ್ದು 'ಸುಧಾರಣೆ'ಗಳು ದಾರಿ ಸರಿಪಡಿಸುವ ಬಗ್ಗೆಯೇ ಹೆಚ್ಚು ಒತ್ತು ಇತ್ತು. ಮಿಶ್ರ ಆರ್ಥಿಕ ವ್ಯವಸ್ಥೆ ಸ್ಥಾಪಿಸಬೇಕು. ಯೆಲ್ಟ್‌ಸಿನ್ನರ ಸಾರಾಸಗಟು ವಿರೋಧಿಸಿತು. ಆದರೆ ಬಂಡವಾಳಶಾಹೀಕರಣದತ್ತ ಜಾರುತ್ತಿರುವ ಆರ್ಥಿಕವನ್ನು ದಾರಿ ಬದಲಾಯಿಸುವ ಕಾರ್ಯಕ್ರಮ ಮೂಡಿಬರಲಿಲ್ಲ. ಬದಲಾಗಿ ಕೆಲವು ಸುಧಾರಣೆಗಳನ್ನು ಮಾತ್ರ ಸೂಚಿಸಲಾಗಿದೆ. ಎಡ ಹಾಗೂ ರಾಷ್ಟ್ರೀಯವಾದಿ ಶಕ್ತಿಗಳು ಬದಲಿ ಸೂಚಿಸಲು ಪ್ರಯತ್ನಿಸಿದರೂ ಅವರು ಬಹುಸಂಖ್ಯಾತರಾಗಿರಲಿಲ್ಲ. ಆದರೂ ಈ ಆರ್ಥಿಕ ಸಭೆ ರಶ್ಯಾದ ಆರ್ಥಿಕ ರಾಜಕೀಯ ಸಾಮಾಜಿಕ ವಿಘಟನೆ ತಪ್ಪಿಸುವತ್ತ ದೊಡ್ಡ ಹೆಜ್ಜೆ ಆಗಲಿದೆ.



-- ಶರತ್ ಚಂದ್ರ

ಲೇಖಕರು, ಕಲಾವಿದರ ಮೇಲೆ ಮೂಲಭೂತವಾದಿಗಳ ಆಕ್ರಮಣ

ಮೂರನೇ ಜಗತ್ತಿನ ದೇಶಗಳಲ್ಲೇ ಅತ್ಯಂತ ಉತ್ತಮ ಜಾತ್ಯಾತೀತ ದೇಶಗಳಾಗಿದ್ದ ಈಜಿಪ್ಟ್ ಹಾಗೂ ಅಲ್ಜೀರಿಯಾದಲ್ಲಿ ಮುಸ್ಲಿಂ ಮೂಲಭೂತವಾದಿಗಳು, ಅವರಿಗೆ ವಿರೋಧವಾಗಿರುವ ಕಲಾವಿದರ, ಲೇಖಕರ ಮೇಲೆ ಭಯಾನಕ ಆಕ್ರಮಣಗಳನ್ನು ಮಾಡುತ್ತಿದ್ದಾರೆ. ಈ ಎರಡೂ ದೇಶಗಳಲ್ಲೂ ಜಾತ್ಯತೀತತೆಗೆ ಮುಸ್ಲಿಂ ಮೂಲಭೂತವಾದಿಗಳು ತೀವ್ರ ಸವಾಲು ಒಡ್ಡಿದ್ದಾರೆ.

ಅಲ್ಜೀರಿಯಾದಲ್ಲಿ ಸಮಾಜ ವಿಜ್ಞಾನಿ ಪ್ರೊಫೆಸರ್ ಒಬ್ಬರನ್ನು ಅವರ ಮಗಳ ಎದುರಲ್ಲೇ ಕತ್ತು ಸಿಗಿದು ಕೊಲೆ ಮಾಡಲಾಯಿತು. ಇಬ್ಬರು ಸಂಪಾದಕರುಗಳನ್ನು ಅವರ ಕುಟುಂಬದ ಎದುರಲ್ಲೇ, ಮನೆಯಲ್ಲಿ ಗುಂಡುಹಾರಿಸಿ ಕೊಲ್ಲಲಾಯಿತು. ಇನ್ನಿಬ್ಬರು ಪ್ರಮುಖ ಪತ್ರಕರ್ತರ ಮೇಲೆ ಕೊಲೆ ಪ್ರಯತ್ನ ನಡೆಸಲಾಗಿದೆ. ಇನ್ನೂ ಹಲವಾರು ಲೇಖಕರು, ಕಲಾವಿದರರಿಗೆ ಕೊಲೆ ಬೆದರಿಕೆ ಹಾಕಲಾಗಿದೆ. ಇವರೆಲ್ಲರು ಮಾಡಿರುವ 'ಪಾಪ' ಎಂದರೆ ಮುಸ್ಲಿಂ ಮೂಲಭೂತವಾದಿಗಳ ಸಿದ್ಧಾಂತಗಳನ್ನು ಸತತವಾಗಿ ವಿರೋಧಿಸುತ್ತಿರುವುದು. ಮುಸ್ಲಿಂ ಮೂಲಭೂತವಾದಿಗಳು ತಮ್ಮ ಅಭಿಪ್ರಾಯ ಬಿಟ್ಟು ಬೇರೆ ಯಾವುದೇ ಅಭಿಪ್ರಾಯದ ಬಗ್ಗೆ ಸಹಿಷ್ಣುತೆ ತೋರಿಸುತ್ತಿಲ್ಲ.

ಈಜಿಪ್ಟ್‌ನಲ್ಲೂ ಪ್ರಮುಖ ಲೇಖಕರೊಬ್ಬರನ್ನು ಹಾಡು ಹಗಲಲ್ಲೇ ಕೊಲೆ ಮಾಡಲಾಯಿತು. ಅವರ ಕೊಲೆ ವಿಚಾರಣೆ ನಡೆಯುತ್ತಿರುವಾಗ ಈ ಕೊಲೆ ಬಗ್ಗೆ ಇಸ್ಲಾಮಿಕ್ ನಾಯಕರೊಬ್ಬರು ಬಹಿರಂಗವಾಗಿ ಸಮರ್ಥಿಸಿ ಮಾತನಾಡದರಂತೆ. ಇಸ್ಲಾಮಿಕ್ ಸಿದ್ಧಾಂತ ವಿರೋಧಿಸುವವರಿಗೆ ಕೊಲೆಯೇ ತಕ್ಕ ಶಾಸ್ತಿ ಎಂದು ಬಹಿರಂಗವಾಗಿ ಹೇಳಿಕೆ ನೀಡಿ ದೇಶದ ಜನರನ್ನು ದಂಗುಬಡಿಸಿದರು. ವಿಶ್ವವಿದ್ಯಾಲಯದ ಒಂದರಲ್ಲಿ ಈಜಿಪ್ಟ್‌ನ ಖ್ಯಾತ ನೋಬೆಲ್ ಪ್ರಶಸ್ತಿ ವಿಜೇತ ಲೇಖಕರ ಕಾದಂಬರಿಗಳನ್ನು ಇಸ್ಲಾಮಿಕ್-ವಿರೋಧಿ ಎಂದು ನಿಷೇಧಿಸಲಾಗಿದೆ.

ಈಜಿಪ್ಟ್‌ನಲ್ಲಿ ಸರ್ಕಾರ ಈ ಮೂಲಭೂತವಾದಿ ಶಕ್ತಿಗಳನ್ನು ಸಂತೃಪ್ತಿಗೊಳಿಸುವ ನೀತಿ ಅನುಸರಿಸುತ್ತಿರುವುದರಿಂದ ಈ ಪರಿಸ್ಥಿತಿ ಉಂಟಾಗಿದೆ. 70ರ ದಶಕದ ಕೊನೆಯಲ್ಲಿ ಆಗಿನ ಈಜಿಪ್ಟ್ ಅಧ್ಯಕ್ಷ ಎಡಪಂಥೀಯ ಪಕ್ಷಗಳ ಹೆಚ್ಚುತ್ತಿರುವ ಬೆಂಬಲ ಮುರಿಯಲು ಇಸ್ಲಾಮಿಕ್ ಮೂಲಭೂತವಾದಿ ಕೈದಿಗಳನ್ನು ಬಿಡುಗಡೆ ಮಾಡಲಾಯಿತು. 80 ರ ದಶಕದಲ್ಲಿ ಇವರ ಜನಬೆಂಬಲ ಹೆಚ್ಚಾತ್ತಾ ಹೋಯಿತು. ಈಗಿನ ಅಧ್ಯಕ್ಷರ ಅವಧಿಯಲ್ಲಿ ಮುಸ್ಲಿಂ ಮೂಲಭೂತವಾದಿಗಳ ಜತೆ, ಧಾರ್ಮಿಕ ಪೈಪೋಟಿ ನಡೆಸಿದೆ. ನಮ್ಮ ದೇಶದಲ್ಲಿ ಕಾಂಗ್ರೆಸ್ ಪಕ್ಷ ಕೋಮುವಾದಿ ಶಕ್ತಿಗಳ ಜತೆ ರಾಜಿ ಮಾಡಿಕೊಂಡಂತೆ.

ಅಮೇರಿಕದ 'ಶಾಂತಿಬಸ್' ಕೊನೆಗೂ ಕ್ಯೂಬಾದಲ್ಲಿ

ಅಮೇರಿಕಾದಿಂದ ಕ್ಯೂಬಾದತ್ತ ಹೊರಟಿದ್ದ 'ಶಾಂತಿಬಸ್' ಕೊನೆಗೂ ಕ್ಯೂಬಾ ತಲುಪಿದೆ. ಇದನ್ನು ಅಮೇರಿಕಾ ಮೆಕ್ಸಿಕೋ ಗಡಿಯಲ್ಲಿ ಅಮೇರಿಕನ್ ಅಧಿಕಾರಿಗಳು ತಡೆಹಿಡಿದಿದ್ದರು. ಅದರ ವಿರುದ್ಧ ತೀವ್ರ ಹೋರಾಟದ ನಂತರ ಅಮೇರಿಕನ್ ಅಧಿಕಾರಿಗಳು ತಮ್ಮ ಪಟ್ಟು ಬಿಟ್ಟುಕೊಡಬೇಕಾಗಿ ಬಂದಿದೆ.

ಆಹಾರ, ಔಷಧಿ ಇತರ ಅವಶ್ಯಕ ವಸ್ತುಗಳನ್ನು ಹೊಂದಿದ್ದ ಸ್ಕೂಲ್ ಬಸ್ ಒಂದನ್ನು ಅಮೇರಿಕದ ಹಲವು ಪಾದ್ರಿಗಳು ಸೇರಿ ಕ್ಯೂಬಾಕ್ಕೆ ಕಳಿಸುವಂತೆ ಸಂಘಟಿಸಿದ್ದರು. ಅದನ್ನು ಮೆಕ್ಸಿಕೋದ ಗಡಿಯಲ್ಲಿ ತಡೆದಾಗ ಈ ಜಾಥಾದಲ್ಲಿದ್ದ ಹಲವು ಪಾದ್ರಿಗಳು ಉಪವಾಸ ಮುಷ್ಕರ ಹೂಡಿದರೂ. ಈ ಉಪವಾಸ ಮುಷ್ಕರ 23 ದಿನಗಳಷ್ಟು ನಡೆಯಿತು. ಅಮೇರಿಕನ್ ಸರ್ಕಾರದ ಕುಕೃತ್ಯ ಪ್ರತಿಭಟಿಸಿ 23 ಅಮೇರಿಕನ್ ನಗರಗಳಲ್ಲಿ ಪ್ರದರ್ಶನಗಳು ನಡೆದವು. ಕ್ಯೂಬಾದ ರಾಜಧಾನಿ ಹವಾನಾದಲ್ಲಿ ಸೌಹಾರ್ದತಾ 'ಉಪವಾಸ' ಸಹ ಸಂಘಟಿಸಲಾಯಿತು. ಹಲವಾರು ದೇಶಗಳಲ್ಲಿ ಕ್ಯೂಬಾ ಸೌಹಾರ್ದತಾ ಸಮಿತಿಗಳು ಅಮೇರಿಕನ್ ಸರ್ಕಾರದ ನೀತಿಯನ್ನು ತೀವ್ರವಾಗಿ ಖಂಡಿಸಿದವು.

ಕೊನೆಗೂ ಆಗಸ್ಟ್ 25 ರಂದು 'ಶಾಂತಿ ಬಸ್' ಕ್ಯೂಬಾ ತಲುಪಿತು. ಇದಕ್ಕೆ ಕ್ಯೂಬಾದ ಜನತೆ ಅಭೂತಪೂರ್ವ ಸ್ವಾಗತ ತೋರಿದರು. ಅಮೇರಿಕನ್ ಸರ್ಕಾರ ಕ್ಯೂಬಾದ ಕತ್ತು ಹಿಚುಕಲು ಆರ್ಥಿಕ ದಿಗ್ಬಂಧನ ಹೇರಿದ್ದರು, ಅಮೇರಿಕನ್ ಜನತೆ ಕ್ಯೂಬಾದ ಜತೆ ಇದ್ದಾರೆ ಎಂದು ಈ ಘಟನೆ ತೋರಿಸಿದೆ.

——— ಭಾರತ್ ಬಂದ್ ಸುದ್ದಿಗಳು ———

ಹುಬ್ಬಳ್ಳಿ-ಧಾರವಾಡ : ನಗರದಲ್ಲಿ ಸಾರ್ವತ್ರಿಕ ಮುಷ್ಕರ ಮತ್ತು ಭಾರತ್ ಬಂದ್ ಸಂಪೂರ್ಣ ಯಶಸ್ವಿ ಆಯಿತು. ಅವಳಿ ನಗರದಲ್ಲಿ ಜನಜೀವನ ಸಂಪೂರ್ಣ ಸ್ಥಗಿತಗೊಂಡಿತು. ಈ ಹೋರಾಟವು ಮಹಾನಗರದಲ್ಲಿ ಐತಿಹಾಸಿಕ ದಾಖಲೆಯಾಗಿ ಪರಿಣಮಿಸಿತು.

ಹುಬ್ಬಳ್ಳಿಯಲ್ಲಿ ಬ್ರಾಡವೇ, ಹಳೇ ಹುಬ್ಬಳ್ಳಿ ಹಾಗೂ ಹೊಸೂರಿನಿಂದ ಎಐಟಿಯುಸಿ, ಸಿಐಟಿಯು, ಕೆಎಸ್‌ಆರ್‌ಟಿಸಿ ಮುಂತಾದ ಹಲವಾರು ಕಾರ್ಮಿಕ ಸಂಘಟನೆಗಳಿಗೆ ಸೇರಿದ ಸಾವಿರಾರು ಕಾರ್ಮಿಕರು ಮೆರವಣಿಗೆಯಲ್ಲಿ ಬಂದು ಕಿತ್ತೂರು ಚೆನ್ನಮ್ಮ ವೃತ್ತದ ಬಳಿ ಈದ್ಗಾ ಮೈದಾನದಲ್ಲಿ ಸಮಾವೇಶಗೊಂಡರು. ಸಮಾವೇಶದಲ್ಲಿ ಸೇರಿದ್ದ ಸುಮಾರು 5000 ಜನರನ್ನು ಉದ್ದೇಶಿಸಿ ಸಿಪಿಐ(ಎಂ)ನ ಧಾರವಾಡ ಜಿಲ್ಲಾ ಸಮಿತಿಯ ಕಾರ್ಯದರ್ಶಿಗಳಾದ ಕಾಂ.ನಿತ್ಯಾನಂದ ಸ್ವಾಮಿ, ಬೀಡಿ ಕಾರ್ಮಿಕರ ಧುರೀಣರಾದ ಕಾಂ.ಎಂ.ಎಚ್.ಮುಲ್ಲಾ, ಎಐಟಿಯುಸಿ ಹಾಗೂ ಬ್ಯಾಂಕು ನೌಕರರ ಮುಂದಾಳುಗಳಾದ ಕಾಂ.ರಾಮರಾವ್, ಕೆಎಸ್‌ಆರ್‌ಟಿಸಿ ಮತ್ತು ಇತರ ಸಂಘಟನೆಗಳ ಮುಂದಾಳುಗಳು ಭಾರತ್ ಬಂದ್‌ನ ಮಹತ್ವದ ಕುರಿತು ಮಾತನಾಡಿದರು. ಬಂದ್‌ನಲ್ಲಿ ಭಾಗವಹಿಸಿದವರನ್ನು ಅಭಿನಂದಿಸುತ್ತಾ ಮುಂದಿನ ದಿನಗಳಲ್ಲಿ ಈ ಹೋರಾಟವನ್ನು ಇನ್ನಷ್ಟು ಹರಿತಗೊಳಿಸಿ, ಸರಕಾರದ ಜನವಿರೋಧಿ ನೀತಿಗಳನ್ನು, ಕೋಮುವಾದವನ್ನು ಹಿಮ್ಮೆಟ್ಟಿಸಲು ಕರೆ ನೀಡಿದರು.

ಧಾರವಾಡದಲ್ಲಿ ಸಿಐಟಿಯು, ಕೆಎಸ್‌ಆರ್‌ಟಿಸಿ, ಎಐಟಿಯುಸಿ, ವಿಮಾ ನೌಕರರ ಸಂಘ ಮತ್ತಿತರ ಸಂಘಟನೆಗಳ ಕಾರ್ಮಿಕರು ಬೃಹತ್ ಪ್ರಮಾಣದಲ್ಲಿ ಸಿಬಿಟಿಯಲ್ಲಿ ಸಮಾವೇಶಗೊಂಡರು. ಸುಮಾರು 2000 ಕಾರ್ಮಿಕರು, ವಿದ್ಯಾರ್ಥಿ-ಯುವಜನರು, ಮಹಿಳೆಯರು, ಸಿಪಿಐ(ಎಂ), ಸಿಪಿಐ, ಜನತಾದಳ, ದಲಿತ ಸಂಘರ್ಷ ಸಮಿತಿಯ ಧುರೀಣರು ಹಾಗೂ ಕಾರ್ಯಕರ್ತರು, ಮಹಾನಗರ ಪಾಲಿಕೆಯ ಕೆಲವು ಸದಸ್ಯರ ಜೊತೆ ಸೇರಿ ನಗರದಲ್ಲಿ ಏಳೆಂಟು ಕೀ.ಮೀ ಉದ್ದಗಲದ ಪ್ರದೇಶಗಳಲ್ಲಿ ಅಭೂತಪೂರ್ವ ಮೆರವಣಿಗೆ ನಡೆಸಿ, ಈದ್ಗಾ ಮೈದಾನದಲ್ಲಿ ಸಮಾವೇಶಗೊಂಡರು. ಸಿಐಟಿಯುವಿನ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ವಿ.ಜೆ.ಕೆ. ನಾಯರ್, ಜನತಾದಳದ ಮುಖಂಡರಾದ ಶಿಲ್ಪ ಶಾಸ್ತ್ರಿ ಮಠ, ಸಿಪಿಐ ಧುರೀಣರಾದ ಕಾಂ.ಸಿದ್ದನಗೌಡ ಪಾಟೀಲ್, ವಿಮಾ ನೌಕರರ ಸಂಘದ ಅಧ್ಯಕ್ಷರಾದ ಕಾಂ. ಎಂ.ಕೆ. ದೇಶಪಾಂಡೆ, ಸಿಐಟಿಯುವಿನ ಕಾರ್ಯದರ್ಶಿಗಳಾದ ಕಾಂ.ಎಂ.ಬಿ. ಕಟ್ಟಿ, ಕೆಎಸ್‌ಆರ್‌ಟಿಸಿ ನೌಕರರ ಸಂಘದ ಕಾರ್ಯದರ್ಶಿಗಳಾದ ಕಾಂ.ಜಗದೀಶ್ ಮಂಗಳೂರು ಮಠ ಮುಂತಾದವರು ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಖಾಸಗೀಕರಣ, ಡಂಕೆಲ್ ಸಲಹೆ, ಕಾರ್ಖಾನೆ ಮುಚ್ಚುವಿಕೆ ಮುಂತಾದ ಸರಕಾರದ ನೀತಿಗಳನ್ನು ಕಟುವಾಗಿ ಟೀಕಿಸಿ ಮುಂದಿನ ಹೋರಾಟಕ್ಕೆ ತಯಾರಾಗಲು ಕರೆ ನೀಡಿದರು.

ಹಗರಿ ಬೊಮ್ಮನ ಹಳ್ಳಿ(ಬಳ್ಳಾರಿ): ವಾಮರಂಗ ಪಕ್ಷ ರಾಷ್ಟ್ರೀಯ ರಂಗದ ಕರೆಯ ಮೇರೆಗೆ ಕಾಂಗ್ರೆಸ್(ಐ)ನ ಹೊಸ ಆರ್ಥಿಕ ನೀತಿ ವಿರೋಧಿಸಿ ಡಂಕೆಲ್ ಪ್ರಸ್ತಾವನೆ ವಿರೋಧಿಸಿ "ಭಾರತ್ ಬಂದ್" ಕಾರ್ಯಕ್ರಮ ಬಳ್ಳಾರಿ ಜಿಲ್ಲಾ ಹಗರಿ ಬೊಮ್ಮನ ಹಳ್ಳಿ ತಾಲೂಕಿನಲ್ಲಿ ಸಂಪೂರ್ಣವಾಗಿ ಯಶಸ್ವಿಯಾಯಿತು, ಗುರುವಾರ ಸಂತೆ ದಿನವಾದರೂ ಬಂದ್ ಯಶಸ್ವಿಯಾಯಿತು. ಭಾರತ ಬಂದ್ ಕಾರ್ಯಕ್ರಮದಲ್ಲಿ ತಾಲೂಕಿನ ಸಿಪಿಐ(ಎಂ), ಜನತಾದಳ, ಡಿ. ಎಸ್‌ಎಸ್. ಪಾಲ್ಗೊಂಡಿದ್ದವು ಜನತಾದಳದ ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ, ಭಾವಿ ಬೆಟ್ಟಪ್ಪ ಹಾಗೂ ತಾಲೂಕಿನ ಜನತಾದಳದ ಅಧ್ಯಕ್ಷರಾದ ಎಂ.ಪಿ. ಪ್ರತಾಪಗೌಡ ಹಾಗೂ ಬಾಪೂಜಿ ಕಿನ್ನಾಳ್ ಸುಭಾಷ್ ಭಾಗವಹಿಸಿದ್ದರು.

ಸಿಪಿಐ(ಎಂ) ನ ಜಿಲ್ಲಾ ಸದಸ್ಯರಾದ ಕಾಂ. ಜೆ.ಎಂ. ವೀರಸಂಗಯ್ಯ ಅಲ್ಲದೆ ತಾಲೂಕಿನ ಸಿಪಿಐ(ಎಂ) ನ ನಾಯಕರುಗಳಾದ ಕಾಂ. ಆರ್.ಬಸವರಾಜ, ಕಾಂ. ಎಸ್. ಜಗನ್ನಾಥ್, ಕಾಂ. ಕೃಷ್ಣ ಹಾಗೂ ಕಾಂ. ವಿ. ರಂಗಪ್ಪ ಇನ್ನೂ ಮುಂತಾದವರು ಭಾಗವಹಿಸಿದ್ದರು. ಈ ಬಂದ್‌ನ ಮುಖಂಡತ್ವವನ್ನು ಸಿಪಿಎಂ ವಹಿಸಿತ್ತು.

ತುಮಕೂರು: ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿ ಮತ್ತು ಕೋಮುವಾದದ ವಿರುದ್ಧ ಸಾಮೂಹಿಕ ಸಂಘಟನೆಗಳು ನೀಡಿದ್ದ ಭಾರತ್ ಬಂದ್ ಸಂಪೂರ್ಣ ಯಶಸ್ವಿಯಾಯಿತು.

ಸೆಪ್ಟೆಂಬರ್ 9, 1993 ರಂದು ಎಲ್ಲಾ ಶಾಲಾ ಕಾಲೇಜುಗಳು, ಅಂಗಡಿಮುಂಗಟ್ಟುಗಳು ಮುಚ್ಚಿದ್ದವು. ಬಂದ್ ದಿನ ನಡೆದ ಬಹಿರಂಗ ಸಭೆಯಲ್ಲಿ ಸಿಐಟಿಯು ಪರವಾಗಿ ಕಾಂ. ಮಹಮದ್ ದಸ್ತಗಿರ್, ಎ.ಐ.ಟಿ.ಯು.ಸಿ ಯ ಕಾಂ. ಎಸ್. ಶಿವಣ್ಣ, ಎ.ಐ.ಐ.ಇ.ಎ ಪರವಾಗಿ ಕಾಂ. ಜಿ.ಕೆ. ಗಂಗಾಧರ್, ಎಸ್.ಎಫ್.ಐ ರಾಜ್ಯ ಸಹಕಾರ್ಯದರ್ಶಿ ಈ. ಬಸವರಾಜು, ಜನತಾದಳದ ವೃಷಭೇಂದ್ರಪ್ಪ, ಸಿಪಿಐ(ಎಂ)ನ ಕಾಂ. ಎಚ್.ಸಿ. ಚನ್ನಪ್ಪ, ಡಿ.ಎಸ್.ಎಸ್.ನ ರಾಮಾಂಜನಿ ಮಾತನ್ನಾಡಿದರು. ಬಹಿರಂಗ ಸಭೆಗೆ ಮುನ್ನ ಬೃಹತ್ ಮೆರವಣಿಗೆ ನಡೆಸಲಾಯ್ತು. ಬಂದ್‌ನ್ನು ಬೆಂಬಲಿಸಿ ಆಟೋ ಚಾಲಕರು ಒಂದು ದಿನದ ಧರಣಿ ನಡೆಸಿದರು.

ತುರುವೇಕೆರೆ: ತುರುವೇಕೆರೆಯಲ್ಲಿ ಭಾರತ್ ಬಂದ್ ಅತ್ಯಂತ ಯಶಸ್ವಿಯಾಯ್ತು. ಪ್ರಾಥಮಿಕ ಶಾಲೆಯಿಂದ ಹಿಡಿದು ಪದವಿ ತರಗತಿಗಳು ಕಾಲೇಜುಗಳು, ಅಂಗಡಿ, ಕಛೇರಿಗಳು ಮುಚ್ಚಿ ಬಂದ್ ಯಶಸ್ವಿ ಮಾಡಿದವು. ಬೆಳಿಗ್ಗೆ 12 ರ ವೇಳೆಗೆ ಮುಖ್ಯ ರಸ್ತೆಯಲ್ಲಿ ರಸ್ತೆ ತಡೆ ನಡೆಸಿ ನೆರೆದಿದ್ದ ಜನರಿಗೆ ಕೇಂದ್ರದ ಜನವಿರೋಧಿ ನೀತಿಗಳ ಬಗ್ಗೆ ತಿಳಿಸಲಾಯ್ತು. ಎಸ್.ಎಫ್.ಐನ ಜಿಲ್ಲಾ ಸಹಕಾರ್ಯದರ್ಶಿ ಕಾಂ. ಅಲ್ಲಾ ಬಕ್ಷ್, ತಾಲ್ಲೂಕು ಅಧ್ಯಕ್ಷ ಕಾಂ. ಶಿವರಾಮಯ್ಯ, ಕಾಂ. ಸತೀಶ್, ಕಾಂ. ಪ್ರೇಂಕುಮಾರ್, ಇತರರು ಮತ್ತು ಜನತಾದಳದ ನಂಜೇಗೇಡ ಇವರುಗಳನ್ನು ಮಾತನ್ನಾಡಿದರು. ಬಂದ್ ನಡೆದ ಬೆಳಿಗ್ಗೆ ಜನತೆಗೆ ವಿದ್ಯಾರ್ಥಿಗಳನ್ನು ಅಭಿನಂದಿಸಿ ಕರಪತ್ರಗಳನ್ನು ಹಂಚಲಾಯ್ತು.


ಕುಣಿಗಲ್ : ಸಾಮೂಹಿಕ ಸಂಘಟನೆಗಳು ಕರೆದಿದ್ದ ಭಾರತ ಬಂದ್ ಸಂಪೂರ್ಣ ಯಶಸ್ವಿಯಾಯ್ತು. ಸಿಪಿಐ(ಎಂ) ಹಾಗೂ ಜನತಾದಳದ ಕಾರ್ಯಕರ್ತರು ನಗರದಲ್ಲಿ ಸಂಚರಿಸಿ ಬಂದ್‌ಗೆ ಮನವಿ ಮಾಡಿದರು.

ಪಾವಗಡ : ಎಸ್.ಎಫ್.ಐ, ಡಿ.ವೈ.ಎಫ್.ಐ ಹಾಗೂ ಜನತಾದಳಗಳ ನೇತೃತ್ವದಲ್ಲಿ ಮಾಡಿದ ಬಂದ್ ಸಂಪೂರ್ಣ ಯಶಸ್ವಿಯಾಯ್ತು.

ರಘುನಾಥನ ಹಳ್ಳಿ: ಸೆಪ್ಟೆಂಬರ್ 9, 1993 ಭಾರತ್ ಬಂದ್ ಕಾರ್ಯಕ್ರಮದಲ್ಲಿ ದೇವದುರ್ಗದಿಂದ ರಾಯಚೂರಿಗೆ ಬರುವ ಸಂಚಾರವನ್ನು ತಡೆಯಲಾಯಿತು. 9 ಗಂಟೆಯಿಂದ 3 ಗಂಟೆಯವರೆಗೆ ರೈತ ಸಂಘ ಮತ್ತು ಕೃಷಿಕೂಲಿಕಾರರ ಸಂಘ ಜಂಟಿಯಾಗಿ ರಸ್ತೆ ತಡೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ರಘುನಾಥನ ಹಳ್ಳಿ, ಬಲ್ಲಾನಪುರ ಗ್ರಾಮದವರು 20 ಜನ ಭಾಗವಹಿಸಿದರು. ಈ ಕಾರ್ಯಕ್ರಮವನ್ನು ರೈತ ಸಂಘದ ಅಧ್ಯಕ್ಷರಾದ ತಿಪ್ಪಣ್ಣ ವೀರಪ್ಪನವರು ಈ ಕಾರ್ಯಕ್ರಮವನ್ನು ಯಶಸ್ವಿ ಮಾಡಲಾಯಿತು.

KRVM/BGS-405 MAG(2) PRB DECR 319-78/79

ಕೂಲಿಕಾರರ ನಡುವಿನಿಂದ ಬಂದ ಮತ್ತೊಬ್ಬ ಸಂಸತ್ ಸದಸ್ಯ ಕಾಂ. ಎಸ್. ಶಿವರಾಮನ್



"ಕೆಲಸ ಸಿಕ್ಕಿತು- ಕೂಲಿ ಕೆಲಸ ಬಿಡಬಹುದು" - ಕೇರಳದ ದೈನಿಕ 'ಮಲೆಯಾಳ ಮನೋರಮ' ಒಟ್ಟಪಾಳಂನಲ್ಲಿ ಅದ್ಭುತ ವಿಜಯ ಗಳಿಸಿ ಈಗ ಸಂಸತ್ ಸದಸ್ಯರಾಗಿರುವ ಸಿಪಿಐ(ಎಂ)ನ ಶಿವರಾಮನ್ ಬಗ್ಗೆ ಆಣಕಿಸುವ ದನಿಯಲ್ಲಿ ಬರೆದ ರೀತಿಯಿದು. ಚುನಾವಣೆಯ ಸಮಯದಲ್ಲಿ ಯು.ಡಿ.ಎಫ್. "ಉಬ್ಬೈಕುಲ"ದ ಮುಖಂಡರೂ ಇದೇ ರೀತಿ ಅಪಹಾಸ್ಯಮಾಡಿದ್ದರಂತೆ. ಆದರೆ ಒಟ್ಟಪಾಳಂನ ಮತದಾರರು ಈ ಅಣಕವಾಡಿದವರ ಮಟ್ಟ ಎಂತಹುದು ಎಂದು ತೋರಿಸಿಕೊಟ್ಟಿದ್ದಾರೆ.

27 ವರ್ಷದ ಶಿವರಾಮನ್ ಕಿಳ್ಳಿಕುರಿಸ್ಸಿ ಮಂಗಳಂನಲ್ಲಿ ಕೃಷಿ ಕೂಲಿಕಾರರಾಗಿ ಜೀವನ ನಡೆಸುತ್ತಿರುವ ಚಿಕ್ಕನ್ ಮತ್ತು ಚೆನ್ನಾರ ಮೂವರು ಮಕ್ಕಳಲ್ಲಿ ಹಿರಿಯವರು. ಶಿವರಾಮನ್ ತನ್ನ ಜೀವನದಲ್ಲೇ ಮೊದಲ ಸಲ ಚುನಾವಣೆಗೆ ಸ್ಪರ್ಧಿಸುತ್ತಿದ್ದರೆ, ಎದುರಾಳಿ ಯು.ಡಿ.ಎಫ್.ನ ಕೆ.ಕೆ. ಬಾಲಕೃಷ್ಣನ್ 12ನೇ ಬಾರಿ ಸ್ಪರ್ಧಿಸುತ್ತಿದ್ದರು. ಕರುಣಾಕರನ್ ಮಂತ್ರಿಮಂಡಳದಿಂದ ಭ್ರಷ್ಟಾಚಾರದ ಆರೋಪದ ಮೇಲೆ ಹೊರಹಾಕಲ್ಪಟ್ಟ, ಈಗ ತನ್ನ ವಿಧಾನಸಭಾ ಸದಸ್ಯತ್ವದ ಬೆಳ್ಳಿ ಹಬ್ಬ ಆಚರಿಸುತ್ತಿರುವವರು.

ಚಿಕ್ಕ ಹುಡುಗನಾಗಿದ್ದಾಗ ಮಯನ್ನೂರ್ ಕಾಡುಗಳಲ್ಲಿ ಕುರಿಮೇಯಿಸುತ್ತಿದ್ದ. ನಂತರ ಶಾಲೆಗೆ ಹೋಗಲಾರಂಭಿಸಿದ ಮೇಲೆ ಕುಟುಂಬಕ್ಕೆ ಅನ್ನ ಸಂಪಾದಿಸುವ ಕೆಲಸದಲ್ಲಿ ತಂದೆ-ತಾಯಿಗಳಿಗೆ ನೆರವಾಗಲಾರಂಭಿಸಿದ. ಪದವಿಪೂರ್ವ ಹಾಗೂ ಬಿ.ಕಾಂ. ಪದವಿಗೆ ಓದುವ ದಿನಗಳಲ್ಲಿ ಕೂಲಿ ಕೆಲಸ, ಬಡಗಿ ಕೆಲಸ ಮಾಡಲಾರಂಭಿಸಿದ. ಸಿಪಿಐ(ಎಂ) ಒಟ್ಟಪಾಳಂ ಪ್ರದೇಶ ಸಮಿತಿಯ ನೆರವಿನಿಂದ ಹಾಗೂ ಕೂಲಿ ಕೆಲಸದಿಂದ ಗಳಿಸಿದ ಹಣದಿಂದ ಅಧ್ಯಯನ ಮುಂದುವರಿಯಿತು.

ಹೈಸ್ಕೂಲಿನಲ್ಲಿದ್ದಾಗಲಿಂದಲೇ ಎಸ್.ಎಫ್.ಐ ಕಾರ್ಯಕರ್ತನಾಗಿದ್ದ ಶಿವರಾಮನ್ 1986 ರಲ್ಲಿ ಎಸ್.ಎಫ್.ಐ. ನ ಒಟ್ಟಪಾಳಂ ಪ್ರದೇಶ ಸಮಿತಿಯ ಸದಸ್ಯರಾದರು. 1988 ರಲ್ಲಿ ಪ್ರದೇಶ ಕಾರ್ಯದರ್ಶಿ ಹಾಗೂ 1990 ರಲ್ಲಿ ಪ್ರದೇಶ ಅಧ್ಯಕ್ಷರಾದರು. 1988 ರಿಂದ ಎಸ್.ಎಫ್.ಐ ಪಾಲಕ್ಕಡ್ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದರು. ಒಟ್ಟಪಾಳಂ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾದಾಗ ಶಿವರಾಮನ್ ದ್ವಿತೀಯ ಎಂ.ಕಾಂ. ವಿದ್ಯಾರ್ಥಿ ಹಾಗೂ ಒಟ್ಟಪಾಳಂ ಎಸ್.ಎಸ್.ಎಸ್. ಕಾಲೇಜಿನ ಎಸ್.ಎಫ್. ಐ ಮುಖಂಡ.

ಒಟ್ಟಪಾಳಂ ಮೀಸಲು ಲೋಕಸಭಾ ಕ್ಷೇತ್ರ 1977ರಲ್ಲಿ ರಚನೆಗೊಂಡಿತು. ಆ ವರ್ಷ ಕಾಂಗ್ರೆಸ್‌ನ ಕುಝುಂಬು ಸಿಪಿಐ(ಎಂ)ನ ಸಿ.ಕೆ. ಚಕ್ರಪಾಣಿಯವರನ್ನು 35721 ಮತಗಳಿಂದ ಸೋಲಿಸಿದರು. 1980 ರಲ್ಲಿ ಎಸ್.ಎಫ್.ಐ ಮುಖಂಡ ಎ.ಕೆ ಬಾಲನ್ ಕಾಂಗ್ರೆಸ್‌ನವೆಲ್ಲಾ ಈಚರನ್‌ರನ್ನು 23,768 ಮತಗಳಿಂದ ಸೋಲಿಸಿದರು. 1984 ಕಾಂಗ್ರೆಸ್(ಐ)ನ ಕೆ.ಆರ್. ನಾರಾಯಣ್ (ಈಗ ಉಪರಾಷ್ಟ್ರಪತಿ) ಎ.ಕೆ.ಬಾಲನ್‌ರನ್ನು 55,5 70 ಮತಗಳಿಂದ ಸೋಲಿಸಿದರು. ನಂತರ 1989 ಹಾಗೂ 1991 ರಲ್ಲೂ ಕೆ.ಆರ್. ನಾರಾಯಣ್ 26,188 ಮತ್ತು 15,088 ಮತಗಳಿಂದ ಗೆದ್ದರು. ಈ ಬಾರಿ ಸಿಪಿಐ(ಎಂ) 1,32,852 ಮತಗಳಿಂದ ಈ ಸ್ಥಾನವನ್ನು ಮತ್ತೆ ಪಡೆದಿದೆ.


●



'ಐಕ್ಯರಂಗ' ಮತ್ತು ದಲಿತ ಸಂಘರ್ಷ ಸಮಿತಿ ಜಂಟಿಯಾಗಿ ಏರ್ಪಡಿಸಿದ್ದ ಆಗಸ್ಟ್ 21ರ ವಿಚಾರ ಸಂಕಿರಣದ ಕೆಲವು ಚಿತ್ರಗಳು.

ವರದಿ: ಕಳೆದ ವಾರ(ಸೆ 26)ದ 'ಐಕ್ಯರಂಗ'ದ ಪುಟ 4 ನೋಡಿ

▲ ಸಾಮಾಜಿಕ ನ್ಯಾಯದ ಹೋರಾಟಕ್ಕೆ ಪ್ರತಿಕ್ರಿಯೆಯಾಗಿ ಪಟ್ಟಭದ್ರ ಹಿತಾಸಕ್ತಿಗಳು ಮಂದಿರ-ಮಸೀದಿ ವಿವಾದವನ್ನು ಉಲ್ಬಣಗೊಳಿಸಿದರು. 'ಹಿಂದುತ್ವ' ಈ ಹಿತಾಸಕ್ತಿಗಳ ಆಯುಧ. ದಲಿತ-ಶೋಷಿತ ಸಮುದಾಯಗಳಲ್ಲಿ ಸಾಮಾಜಿಕ ನ್ಯಾಯದ ಬಗ್ಗೆ ಮಾಡುತ್ತಿರುವ ಎಚ್ಚರವನ್ನು ಹಾಳುಗೆಡಹುವ ಅವುಗಳ ಐಕ್ಯತೆ ಮುರಿಯುವ ಪ್ರಯತ್ನ ಇದು ಎನ್ನುತ್ತಿದ್ದಾರೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಕಾಂ. ಪ್ರಕಾಶ್ ಕಾರಟ್.





▲ ವಿಚಾರ ಸಂಕಿರಣದಲ್ಲಿ ವೇದಿಕೆಯ ಮೇಲೆ : ಎಡದಿಂದ ದ. ಸಂ.ಸಂಯು ಶ್ರೀಧರ ಕಲವೀರ, ಪ.ಬಂಗಾಳದ ಪಂಚಾಯತ್ ರಾಜ್ಯ ಮಂತ್ರಿ ಬಿನೊಯ್ ಕೃಷ್ಣ ಚೌಧರಿ, ಅಧ್ಯಕ್ಷತೆ ವಹಿಸಿದ್ದ ರವಿವರ್ಮ ಕುಮಾರ್, ಪ್ರಕಾಶ್ ಕಾರಟ್, ನೂರುಲ್ ಹುದಾ ಹಾಗೂ 'ಐಕ್ಯರಂಗ'ದ ಸಂಪಾದಕರಾದ ಪಿ. ರಾಮಚಂದ್ರರಾವ್.

◀ ವಿಚಾರ ಸಂಕಿರಣದ ವಿಷಯ ಪ್ರಸ್ತಾವನೆ ಮಾಡುತ್ತಿರುವ ಕಾಂ.ಜಿ.ಎನ್. ನಾಗರಾಜ್.

"ಜಾರ್ಜ್ ಫರ್ನಾಂಡೀಸ್ ಹೇಳಿಕೆ ಸರಿಯಲ್ಲ"-ಸಿಐಟಿಯು

"ಭಾರತ್ ಬಂದ್ ಇಡೀಯಾಗಿ ವಿಫಲ" ಎಂದು ಜಾರ್ಜ್ ಫರ್ನಾಂಡೀಸ್ ಹೇಳಿಕೆ ನೀಡಿದ್ದಾರಂತೆ. ಅದೂ ಸರ್ಕಾರಿ ಸುದ್ದಿ ಮಾಧ್ಯಮಗಳೂ ಸಂಪೂರ್ಣ ಬಂದ್ ಆಗಿದೆಯೆಂದಿರುವ ಪಶ್ಚಿಮಬಂಗಾಳದ ಕಲ್ಕತ್ತಾ ನಗರದಿಂದ ಅವರು ಈ ಹೇಳಿಕೆ ನೀಡಿದ್ದಾರೆ. ಇದು ಆಶ್ಚರ್ಯಕರ ಎಂದು ಅವರು ಪ್ರತಿಕ್ರಿಯಿಸುತ್ತಾ ಸಿಐಟಿಯು ಹೇಳಿದೆ.

ಇಷ್ಟೇ ಅಲ್ಲ, ಸಿಐಟಿಯು ಧಿಮಾಕು ತೋರುತ್ತಿದೆ, ಕಾರ್ಮಿಕ ರಂಗದಲ್ಲಿನ ಕಿತ್ತಾಟ, ಸಂಘರ್ಷಗಳಿಂದಾಗಿ ಭಾರತ್ ಬಂದ್ ಬಗ್ಗೆ ವ್ಯಾಪಕ ಐಕ್ಯತೆ ಸಾಧ್ಯವಾಗಲಿಲ್ಲ ಎಂದೂ ಜಾರ್ಜ್ ಫರ್ನಾಂಡೀಸ್ ಹೇಳಿದ್ದಾರೆಂದು ವರದಿಯಾಗಿದೆ. ಬಂದ್‌ನ್ನು ಬೆಂಬಲಿಸುವ ಬದಲು ಅವರು ಬಂದ್‌ಗೆ ನೇತೃತ್ವ ನೀಡಿದ ಶಕ್ತಿಗಳನ್ನು ಟೀಕಿಸುವುದರ ಬಗ್ಗೆ ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ. ಎಂ.ಕೆ. ಫಂದೆ ಆಘಾತ ವ್ಯಕ್ತಪಡಿಸುತ್ತಾ "ಸಿಐಟಿಯು ಸದಾ ಹೋರಾಟಗಳಲ್ಲಿ ಕಾರ್ಮಿಕ ವರ್ಗವನ್ನು ಒಗ್ಗೂಡಿಸುವಲ್ಲಿ ಸಕಾರಾತ್ಮಕ ಪಾತ್ರ ವಹಿಸಿದೆ. ನಿಮ್ಮಲ್ಲೇನಾದರೂ ಕಾರ್ಮಿಕ ಸಂಘಗಳ ಕಾರ್ಯನಿರ್ವಹಣೆಯ ಉತ್ತಮಗೊಳಿಸುವ ಬಗ್ಗೆ ಸಲಹೆಗಳಿದ್ದರೆ ಆ ಬಗ್ಗೆ ಚರ್ಚಿಸೋಣ ಎಂದಿದ್ದಾರೆ. ಹೆಚ್.ಎಂ.ಕೆ.ಪಿ.ಯ ಮೈಕೆಲ್ ಫರ್ನಾಂಡೀಸ್ ಕೂಡಾ ಬಂದ್ ಬೆಂಬಲಿಸಿ ಬೆಂಗಳೂರಿನಲ್ಲಿ ಅದು ಯಶಸ್ವಿಯಾಗುವಂತೆ ಮಾಡಿದ್ದಾರೆ. ಎನ್ನುತ್ತಾ ಮುಂಬೈಯಲ್ಲಿ ಮಾತ್ರ ಹೆಚ್.ಎಂ.ಕೆ.ಪಿ. ಯ ಪಾತ್ರ ನಕಾರಾತ್ಮಕವಾಗಿತ್ತು. ಮುಂಬೈ ನಗರ ಸಾರಿಗೆಯಲ್ಲಿರುವ ಜಾರ್ಜ್ ಫರ್ನಾಂಡೀಸ್‌ರವರ ಯೂನಿಯನ್ ಟ್ಯಾಕ್ಸಿ ಡ್ರೈವರ್‌ಗಳ ನಡುವೆ ಇರುವ ಸಂಘ ಮುಷ್ಕರ ನಡೆಸಿದ್ದಾರೆ ಮುಂಬೈಯಲ್ಲಿ ಭಾರತ್ ಬಂದ್ ಇನ್ನಷ್ಟು ಯಶಸ್ವಿಯಾಗುತ್ತಿತ್ತು. ಎಂದು ಡಾ. ಫಂಧೆ ಜಾರ್ಜ್ ಫರ್ನಾಂಡೀಸ್‌ರವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಈಗಲೂ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಹೋರಾಡಲು ಕಾರ್ಯ ಆಂದೋಲನವನ್ನು ಇನ್ನಷ್ಟು ಬಲಪಡಿಸುವ ಅಗತ್ಯವಿದೆ ಇರಲೀ ಹೆಚ್.ಎಂ.ಕೆ.ಪಿ ಹಾಗೂ ಜಾರ್ಜ್ ಫರ್ನಾಂಡೀಸ್ ಸಕಾರಾತ್ಮಕ ಕರೆಗೆ ನೀಡಿ ಕಾರ್ಮಿಕ ಆಂದೋಲನವನ್ನು ಇನ್ನಷ್ಟು ಬಲಪಡಿಸುವ ಅಗತ್ಯವಿದೆ. ಇರಲಿ ಹೆಚ್.ಎಂ.ಕೆ.ಪಿ. ಹಾಗೂ ಜಾರ್ಜ್ ಫರ್ನಾಂಡೀಸ್ ಸಕಾರಾತ್ಮಕ ಕೊಡುಗೆ ನೀಡಿ ಕಾರ್ಮಿಕ ಆಂದೋಲನವನ್ನು ಮತ್ತಷ್ಟು ಬಲಗೊಳಿಸುತ್ತಾರೆ ಎಂದು ಡಾ. ಫಂದೆ ತಮ್ಮ ಪತ್ರದಲ್ಲಿ ಆಶಿಸಿದ್ದಾರೆ."

ಗಾರ್ಮೆಂಟ್ ಕಾರ್ಮಿಕರ ವಿಜಯ

ಬೆಂಗಳೂರಿನ ಸಿದ್ಧ ಉಡುಪು ತಯಾರಿಕಾ (ಗಾರ್ಮೆಂಟ್ಸ್) ಉದ್ದಿಮೆಯಲ್ಲಿ ಕೆಲಸ ಮಾಡುವ ನೂರ ಹದಿನೆಂಟು ಕಾರ್ಮಿಕರು 10 ವರ್ಷಗಳ ದೀರ್ಘ ಹೋರಾಟದ ನಂತರ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಬೆಂಗಳೂರಿನಲ್ಲಿ ಗಾರ್ಮೆಂಟ್ ಉದ್ದಿಮೆಯಲ್ಲಿ 40 ಸಾವಿರಕ್ಕಿಂತಲೂ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದಾರೆ. ಇವರಲ್ಲಿ ಬಹುಪಾಲು (ಶೆ. 90) ಮಹಿಳೆಯರು. ಯಾವುದೇ ಸೌಲಭ್ಯಗಳಿಲ್ಲದೆ ಶೋಷಣೆಗೊಳಗಾಗಿರುವ ಇವರನ್ನು ಸಂಘಟಿಸಲು 10 ವರ್ಷಗಳ ಹಿಂದೆ ಬೆಂಗಳೂರು ಜಿಲ್ಲಾ ಸಿಐಟಿಯು ಬೆಂಗಳೂರು ಜಿಲ್ಲಾ ಗಾರ್ಮೆಂಟ್ಸ್ ಕೆಲಸಗಾರರ ಸಂಘವನ್ನು ಸಂಘಟಿಸಿತು. ಮಲ್ಲೇಶ್ವರಂನಲ್ಲಿರುವ ಹಿಂದುಜಾ ಕ್ಲೋತಿಂಗ್ ಕಂಪೆನಿಯ ಸುಮಾರು 350 ಕಾರ್ಮಿಕರು ಈ ಸಂಘಕ್ಕೆ ಸದಸ್ಯರಾದುದನ್ನು ಕಂಡ ಮಾಲೀಕ ಕಾರ್ಖಾನೆಯನ್ನು ಬೇರೆಯವರಿಗೆ ಮಾರುವ ನೆಪದಲ್ಲಿ ಅದನ್ನು ಮುಚ್ಚಿದ. ಬೀದಿಪಾಲಾದ ಕಾರ್ಮಿಕರು ಹೋರಾಟಕ್ಕಿಳಿದರು. ಆಗ ಕಾರ್ಮಿಕ ಮಂತ್ರಿಯವರ ರಘುಪತಿ ಸಮ್ಮುಖ ಆದ ಒಂದು ರಾಜಿ ಒಪ್ಪಂದವನ್ನು ಮಾಲಕ ಪಾಲಿಸದಿದ್ದರಿಂದ ಹೋರಾಟ ಮುಂದುವರೆಯಿತು. ಮಾಲೀಕ ಹಲವು ಆಸೆ-ಆಮಿಷಗಳನ್ನು ತೋರಿಸಿ ಕಾರ್ಮಿಕರನ್ನು ಸಂಘದಿಂದ ದೂರಗೊಳಿಸಲು, ಮಾಡಿದ ಪ್ರಯತ್ನ ಫಲಿಸಲಿಲ್ಲ. ಒಗ್ಗಟ್ಟಿನ ಹೋರಾಟದ ಫಲವಾಗಿ ಕೊನೆಗೂ ಈ ತಿಂಗಳು ಮಾಲೀಕ ಕಾರ್ಮಿಕರ ಸಂಘಟನೆಯೊಂದಿಗೆ ಒಪ್ಪಂದಕ್ಕೆ ಬರಬೇಕಾಯಿತು. ಈ ಪ್ರಕಾರ ಈ 118 ಕಾರ್ಮಿಕರಿಗೆ ತಲಾ 14 ಸಾವಿರ ರೂ. ಪರಿಹಾರ ನೀಡಲು ಮಾಲಕ ಒಪ್ಪಿದ. ಮೊದಲು 1000 ರೂ ಕೊಡಲೊಪ್ಪದ ಮಾಲಿಕ ಈಗ ಈ ಒಪ್ಪಂದಕ್ಕೆ ಬರಲೇಬೇಕಾಯಿತು. ಇದು ಬೆಂಗಳೂರು ಜಿಲ್ಲೆಯಲ್ಲಿ ಈ ಅಸಂಘಟಿತ ವಲಯದ ಕಾರ್ಮಿಕರ ಸಂಘಟನೆಗೆ ಹೊಸ ಉತ್ಸಾಹ ತಂದಿದೆ ಎಂದು ಈ ಸಂಘದ ಮುಖಂಡರು ಹೇಳಿದ್ದಾರೆ.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಾಸಪ್ಪ ಗಾರ್ಡನ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462 ಸಂಪಾದಕರು : ಪಿ.ರಾಮಚಂದ್ರರಾವ್